ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 28 ಶುಕ್ರವಾರ 2023

ಸಂಪುಟ: 44 | ಸಂಚಿಕೆ: 103 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹ 4

ಮೈಸೂರು ದಸರಾ ಆಚರಣೆ ಸಂಬಂಧ ಜು.31ಕ್ಕೆ ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ಉನ್ನತ ಸಭೆ



- ಅಂದು ಸಂಜೆ 4 ಗಂಟೆಗೆ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಸಭೆ ಆಯೋಜನೆ
- ಸಂಬಂಧಿಸಿದವರಿಗೆಲ್ಲಾ ಸೂಚನಾ ಪತ್ರ ಹೊರಡಿಸಲು ಜಿಲ್ಲಾಧಿಕಾರಿಗೆ ಸೂಚನೆ
- ಅಂದಿನ ಸಭೆಯಲ್ಲಿ ದಸರಾ ಉದ್ಘಾಟನೆ, ಅರಸರ ಆಡಳಿತ ಬಿಂಬಿಸುವ ಸಂಬಂಧ ತೀರ್ಮಾನ

ಬೆಂಗಳೂರು, ಜು.27(ಕೆಎಂಶಿ)–ನಾಡಹಬ್ಬ ಮೈಸೂರು ದಸರಾ ಆಚರಣೆ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಜುಲೈ 31ರಂದು ಉನ್ನತಮಟ್ಟದ ಸಭೆಯನ್ನು ನಗರದಲ್ಲಿ ಕರೆದಿದ್ದಾರೆ. ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಸಂಜೆ 4 ಗಂಟೆಗೆ ನಡೆಯುವ ಸಭೆಗೆ ಸಂಬಂಧಿಸಿದಂತೆ ಸೂಚನಾ ಪತ್ರ ಹೊರಡಿಸುವಂತೆ ಮೈಸೂರು ಜಿಲ್ಲಾಧಿಕಾರಿಗಳಿಗೆ ಆದೇಶಿಸಿದ್ದಾರೆ.

ಸಭೆಗೂ ಮುನ್ನ ಕಾರ್ಯಸೂಚಿ ಸಿದ್ಧಪಡಿಸಿ ಮುಂಚಿತವಾಗಿ ಸಂಬಂಧಪಟ್ಟವರಿಗೆ ಕಳುಹಿಸಿ ಅವರನ್ನು ಆಹ್ವಾನಿಸುವಂತೆ ಹೇಳಿದ್ದಾರೆ.

ಎರಡನೇ ಬಾರಿಗೆ ಮುಖ್ಯಮಂತ್ರಿಯಾದ ನಂತರ ಬರುತ್ತಿರುವ ಮೊದಲ ದಸರಾವನ್ನು ಅದ್ಧೂರಿ ಹಾಗೂ ವಿಶೇಷವಾಗಿ ಆಚರಿಸಲು ಸಿದ್ದರಾಮಯ್ಯ ನಿರ್ಧರಿಸಿದ್ದಾರೆ.

ದಸರಾ ಆಚರಣೆಗೆ ಸಂಬಂಧಿಸಿದಂತೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಂಬಂಧಪಟ್ಟ ಇಲಾಖಾ ಸಚಿವರು, ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಂದೇಶ ರವಾನಿಸಿದ್ದಾರೆ. ಮುಖ್ಯಮಂತ್ರಿ ಅವರ ಸಲಹೆಯಂತೆ ಜಿಲ್ಲಾ ಉಸ್ತುವಾರಿ ಸಚಿವರು ಈಗಾಗಲೇ ದಸರಾ ಉತ್ಸವಕ್ಕೆ ನೀಲನಕ್ಷೆ ಸಿದ್ಧಪಡಿಸಿದ್ದು, ಅದನ್ನು ಅಂದಿನ ಸಭೆಯಲ್ಲಿ ಮಂಡಿಸಲಿದ್ದಾರೆ.

ಕಾವೇರಿ ಜಲಾನಯನ ಭಾಗದ ಬಹುತೇಕ ಜಲಾಶಯಗಳು ಭರ್ತಿಯಾಗುತ್ತಿದ್ದು, ರಾಜ್ಯಾದ್ಯಂತ ಉತ್ತಮ ಮಳೆಯಾಗಿ ಉಳಿದ ಜಲಾಶಯಗಳಿಗೂ ನೀರು ಹರಿದು ಬಂದಿರುವ ಹಿನ್ನೆಲೆಯಲ್ಲಿ ದಸರಾವನ್ನು ಈ ಬಾರಿ ಅದ್ಧೂರಿ ಹಾಗೂ ಸಂಭ್ರಮದಿಂದ ಆಚರಿಸಲು ತೀರ್ಮಾನಿಸಿದ್ದಾರೆ.

ಪ್ರಸಕ್ತ ಸಾಲಿನ ಮುಂಗಡ ಪತ್ರದಲ್ಲಿ ತಮ್ಮ ತವರು ಜಿಲ್ಲೆಗೆ ಕೆಲವು ಯೋಜನೆಗಳನ್ನು ಪ್ರಕಟಿಸಿದ್ದು, ಅವುಗಳ ಅನುಷ್ಠಾನವನ್ನು ದಸರಾ ವೇಳೆಯಲ್ಲೇ ಪ್ರಾರಂಭಿಸಲಿದ್ದಾರೆ.

ಈ ಬಾರಿಯ ದಸರಾದಲ್ಲಿ ಮೈಸೂರು ಅರಸರ ಜನಪರ ಆಳ್ವಿಕೆ ಬಿಂಬಿಸುವುದೇ ಮೂಲ ಉದ್ದೇಶವಾಗಿದೆ.

ಅರಸರು ಮಾಡಿದ್ದ ಅಭಿವೃದ್ಧಿ ಕಾಮಗಾರಿಗಳನ್ನು ಬೇರೆಯವರ ಹೆಸರಲ್ಲಿ ಬಿಂಬಿಸುವ ಕೆಲಸ ಇದುವರೆಗೂ ನಡೆದಿದೆ. ಇದನ್ನು ರಾಜ್ಯದ ಜನತೆ ಮತ್ತು ಪ್ರವಾಸಿಗರಿಗೆ ಅರಸರ ಆಡಳಿತ ಮತ್ತು ಜನಸೇವೆಯ ಬಗ್ಗೆ ಮನದಟ್ಟು ಮಾಡುವ ಕಾರ್ಯಕ್ರಮಗಳು ಈಗಾಗಲೇ ಜರುಗಿವೆ. ಉನ್ನತ ಮಟ್ಟದ ಸಭೆಯಲ್ಲಿ ದಸರಾ ಉತ್ಸವ ಉದ್ಘಾಟನೆಗೆ ಯಾರನ್ನು ಕರೆಯಬೇಕು ಎಂಬ ಬಗ್ಗೆ ಚರ್ಚೆ ನಡೆಸಿ ಅಂತಿಮ ತೀರ್ಮಾನ ಕೈಗೊಳ್ಳಲಾಗುತ್ತದೆ. ಅಲ್ಲದೆ, ನಾಡದೇವತೆಯ ಉತ್ಸವ ಮತ್ತು ನವರಾತ್ರಿ ಆಚರಣೆ ಸಂದರ್ಭದಲ್ಲಿ ಹಮ್ಮಿಕೊಳ್ಳಬೇಕಾದ ಕಾರ್ಯಕ್ರಮಗಳ ಬಗ್ಗೆಯೂ ನಿರ್ಧಾರ ಕೈಗೊಳ್ಳಲಾಗುತ್ತದೆ. ದಸರಾ ಆಚರಣೆಗೆ ಸಂಬಂಧಿಸಿದಂತೆ ವಿವಿಧ ಸಮಿತಿಗಳ ರಚನೆ, ಅಗತ್ಯವಿರುವ ಅನುದಾನ ಒದಗಿಸುವುದು ಹಾಗೂ ಪ್ರವಾಸಿಗರನ್ನು ಆಕರ್ಷಿಸಲು ಕೈಗೊಳ್ಳಬೇಕಾದ ತೀರ್ಮಾನಗಳ ಬಗ್ಗೆಯೂ ಸಭೆ ನಿರ್ಧರಿಸಲಿದೆ.



ಅಧಿಕಾರಿಗಳು ಇನ್ನೂ ಬಿಜೆಪಿ ಆಡಳಿತದ ಗುಂಗಿನಲ್ಲಿದ್ದಾರೆ; ಸಚಿವರ್‍ಯಾರೂ ಸ್ಪಂದಿಸುತ್ತಿಲ್ಲ...

- ಕಾಂಗ್ರೆಸ್ ಶಾಸಕಾಂಗ ಪಕ್ಷ ಸಭೆಯಲ್ಲಿ ಬಹುತೇಕ ಸದಸ್ಯರ ದೂರಿದು
- ನಮ್ಮ ಕ್ಷೇತ್ರಗಳಲ್ಲಿ ಯಾವ ಅಭಿವೃದ್ಧಿ ಕಾರ್ಯಕ್ಕೂ ಚಾಲನೆ ದೊರೆಯುತ್ತಿಲ್ಲ
- ವರ್ಗಾವಣೆ ವೇಳೆ ನಮಗೆ ಬೇಕಾದ ಅಧಿಕಾರಿಗಳ ಹಾಕಿಸಿಕೊಳ್ಳಲಾಗಲಿಲ್ಲ

ಬೆಂಗಳೂರು, ಜು.27(ಕೆಎಂಶಿ)–ಸರ್ಕಾರ ಬದಲಾವಣೆಯಾದರೂ ಅಧಿಕಾರಿಗಳು ಬಿಜೆಪಿ ಆಡಳಿತದ ಗುಂಗಿನಲ್ಲೇ ಇದ್ದಾರೆ ಎಂದು ಆಡಳಿತ ಪಕ್ಷದ ಶಾಸಕರು ಇಂದಿಲ್ಲಿ ಅಧಿಕಾರಶಾಹಿ ವಿರುದ್ಧ ತಿರುಗಿ ಬಿದ್ದಿದ್ದಾರೆ.

ಐದು ವರ್ಷಗಳ ನಂತರ ಪಕ್ಷ ಅಧಿಕಾರದ ಗದ್ದುಗೆ ಹಿಡಿದಿದ್ದರೂ ನಮ್ಮ ಕ್ಷೇತ್ರಗಳಲ್ಲಿ ನಾವು ಜಯಗಳಿಸಿದ್ದೇವೆ ಎಂಬುದನ್ನು ಬಿಟ್ಟರೆ, ಉಳಿದಂತೆ ಯಾವುದೇ ಬದಲಾವಣೆಗಳು ಕಾಣುತ್ತಿಲ್ಲ ಎಂದು ಮುಖ್ಯಮಂತ್ರಿ ಹಾಗೂ ಸಹೋದ್ಯೋಗಿಗಳ ಗಮನಕ್ಕೆ ತಂದಿದ್ದಾರೆ.

ಶಾಸಕರ ಸಮಸ್ಯೆಗಳನ್ನು ಆಲಿಸಿ ಬಗೆಹರಿಸುವ ಉದ್ದೇಶದಿಂದ ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸಮ್ಮುಖದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆದಿದ್ದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಸದಸ್ಯರು, ಅಧಿಕಾರಿಗಳು ಮತ್ತು ಸಚಿವರನ್ನು ನೇರವಾಗಿ ತರಾಟೆಗೆ ತೆಗೆದುಕೊಂಡಿದ್ದಾರೆ.

ಸಭೆಗೂ ಮುನ್ನವೇ ಆಡಳಿತ ಪಕ್ಷದ 30 ಸದಸ್ಯರು ಮುಖ್ಯಮಂತ್ರಿ ಅವರಿಗೆ 2 ಪತ್ರ ಬರೆದು ಸಿಎಲ್‌ಪಿ ಸಭೆ ಕರೆಯುವಂತೆ ಹಾಗೂ ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳ ಬಗ್ಗೆ ಪರೋಕ್ಷವಾಗಿ ತಿಳಿಸಿದ್ದರು. ಗ್ಯಾರಂಟಿ ಮತ್ತು ಅಭಿವೃದ್ಧಿಯನ್ನು ಮುಂದಿಟ್ಟುಕೊಂಡು ನಾವು ಅಧಿಕಾರಕ್ಕೆ ಬಂದಿದ್ದೇವೆ. ಆದರೆ, ನಮ್ಮ ನಮ್ಮ ಕ್ಷೇತ್ರಗಳಲ್ಲಿ ಕೈಗೊಳ್ಳಬೇಕಾದ ಕಾಮಗಾರಿಗಳಿಗೆ ವಿವಿಧ ಇಲಾಖೆಗಳಿಂದ ಹಸಿರು ನಿಶಾನೆಯೂ ದೊರೆಯುತ್ತಿಲ್ಲ. ಸಚಿವರು ಸ್ಪಂದಿಸುತ್ತಿಲ್ಲ ಎಂದು ಕೆಲವು ಶಾಸಕರು ನೇರವಾಗಿ ತರಾಟೆಗೆ ತೆಗೆದುಕೊಂಡಿದ್ದಾರೆ. ಕ್ಷೇತ್ರಗಳಿಗೆ ನಮಗೆ ಬೇಕಾದ ಅಧಿಕಾರಿಗಳನ್ನು ಹಾಕಿಸಿಕೊಳ್ಳಲು ಸಾಧ್ಯವಾಗಿಲ್ಲ. ಮುಖ್ಯಮಂತ್ರಿಗಳು ವರ್ಗಾವಣೆಗೆ ಒಂದು ತಿಂಗಳ ಅವಕಾಶ ನೀಡಿದ್ದರು. ಆದರೆ, ಈ ಸಂದರ್ಭದಲ್ಲಿ ನಮಗೆ ಸಚಿವರೇ ಕೈಗೆ ಸಿಗಲಿಲ್ಲ. ಅವಧಿ ಮುಗಿದ ನಂತರ ಎಲ್ಲವೂ ಆಗಿದೆ ಎನ್ನುತ್ತಾರೆ. ನಾವು ಹಿಂದಿನ ಸರ್ಕಾರದಲ್ಲಿದ್ದವರನ್ನೇ ಇಟ್ಟುಕೊಂಡು ಹಳಿತಪ್ಪಿರುವ ಆಡಳಿತ ಸರಿಪಡಿಸುವುದಾದರೂ ಹೇಗೆ ಎಂದು ಪ್ರಶ್ನಿಸಿದ್ದಾರೆ. ಇನ್ನೂ ಕೆಲವರು ನನಗೆ ಬೇಕಾದ ಅಧಿಕಾರಿಗಳನ್ನು ಹಾಕುವ ಬದಲು ಬೇರೆಯವರ ಮರ್ಜಿಗೆ ಇಲ್ಲವೇ ತಮಗೆ ಬೇಕಾದವರನ್ನು ಹಾಕಿದ್ದಾರೆ. ಬಿಜೆಪಿ ಆಡಳಿತಕ್ಕೆ ಬೇಸತ್ತು ಜನರು ನಮ್ಮ ಕೈ ಹಿಡಿದಿದ್ದಾರೆ. ನಾವು ಮತದಾರ ಪ್ರಭುಗಳಿಗೆ ● 9ನೇ ಪುಟಕ್ಕೆ



ಎಚ್ಚರವಾಗಿರಿ, ಬಿಜೆಪಿ ಪರಿವಾರ ಸುಳ್ಳನ್ನು ಸತ್ಯ ಎನ್ನುವಂತೆ ಬಿಂಬಿಸ್ತಾರೆ...

ಬೆಂಗಳೂರು, ಜು.27(ಕೆಎಂಶಿ)– ಬಿಜೆಪಿ ಪರಿವಾರ ಸುಳ್ಳಿನ ಕಾರ್ಖಾನೆ. ಮೊದಲು ಸುಳ್ಳನ್ನು ಸೃಷ್ಟಿಸುತ್ತಾರೆ. ಬಳಿಕ ಆ ಸುಳ್ಳನ್ನು ತಮ್ಮ ಸುಳ್ಳಿನ ಪರಿವಾರದ ಮೂಲಕ ಹರಡಿಸುತ್ತಾರೆ. ಕೊನೆಗೆ ಅದೇ ಸುಳ್ಳಿನ ಮೇಲೆ ಮಾಧ್ಯಮಗಳಲ್ಲಿ ಚರ್ಚೆ ಆಗುವಂತೆ ಮಾಡುತ್ತಾರೆ. ಈ ಬಗ್ಗೆ ಎಚ್ಚರದಿಂದಿರಿ ಎಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಸಿದರು. ಸುಳ್ಳಿನ ಕಾರ್ಖಾನೆಯ ಕಾರ್ಮಿಕರು ಸುಳ್ಳನ್ನು ಸೃಷ್ಟಿಸಿ, ಅದನ್ನು ಸತ್ಯ ಎನ್ನುವಂತೆ ಬಿಂಬಿಸುತ್ತಾರೆ. ಇದಕ್ಕಾಗಿ ಅವರು ವಿಪರೀತ ಖರ್ಚು ಮಾಡುತ್ತಾರೆ. ಇದನ್ನೆಲ್ಲಾ ನಾವು ಸರಿಯಾಗಿ ಅರ್ಥ ಮಾಡಿಕೊಂಡು ಜವಾಬ್ದಾರಿಯಿಂದ ವರ್ತಿಸಬೇಕು ಸಿದ್ದರಾಮಯ್ಯ ಹೇಳಿದರು. ಹೊಸ ಸರ್ಕಾರ ಬಂದ ಬಳಿಕ ನಮ್ಮ ಎದುರಿಗೆ ತಕ್ಷಣಕ್ಕೆ ರಾಜ್ಯದ ಆರ್ಥಿಕತೆಯನ್ನು ಸರಿದಾರಿಗೆ ತರುವ ದೊಡ್ಡ ಜವಾಬ್ದಾರಿ ಇತ್ತು. ಜತೆಗೆ ಆಯ-ವ್ಯಯ ರೂಪಿಸುವ ಹೊಣೆಗಾರಿಕೆಯೂ ಇತ್ತು. ಹೊಸ ಸರ್ಕಾರವಾದ್ದರಿಂದ ಜಂಟಿ ● 9ನೇ ಪುಟಕ್ಕೆ

ಅಶಾದ್ ಉರ್ ರೆಹಮಾನ್ ಶರೀಫ್ ಮೈಸೂರು ಪಾಲಿಕೆ ನೂತನ ಆಯುಕ್ತ



ಮೈಸೂರು, ಜು.27(ಆರ್‌ಕೆ)– ಮೈಸೂರು ಮಹಾನಗರಪಾಲಿಕೆ ನೂತನ ಆಯುಕ್ತರಾಗಿ ಅಶಾದ್ ಉರ್ ರೆಹಮಾನ್ ಶರೀಫ್ ಅವರನ್ನು ನಿಯೋಜಿಸಲಾಗಿದೆ. ಪಾಲಿಕೆ ಕಚೇರಿಯಲ್ಲಿ ಇಂದು ಬೆಳಗ್ಗೆ ಶರೀಫ್ ಅವರು ಅಧಿಕಾರ ವಹಿಸಿಕೊಂಡರು. ಮೇಯರ್ ಶಿವಕುಮಾರ್ ಪುಷ್ಪಗುಚ್ಛ ನೀಡುವ ಮೂಲಕ ನೂತನ ಆಯುಕ್ತರನ್ನು ಆತ್ಮೀಯವಾಗಿ ● 6ನೇ ಪುಟಕ್ಕೆ

ಹಿಂದುಳಿದ ವರ್ಗ 3ಎ ಪಟ್ಟಿಯಲ್ಲಿನ ಕೊಡಗರು ಬದಲು ಕೊಡವ/ಕೊಡವರು ಬದಲಾವಣೆ

ಸಿಎಂ ಸಿದ್ದರಾಮಯ್ಯ ನೇತೃತ್ವದ ಸಂಪುಟ ಸಭೆ ನಿರ್ಧಾರ

- ನಂದಿನಿ ಹಾಲಿನ ದರ 3 ರೂ. ಹೆಚ್ಚಳಕ್ಕೆ ಅನುಮೋದನೆ
- ಮೈಸೂರು ಜೈಲಿನ 8 ಸೇರಿ 67 ಕೈದಿಗಳ ಬಿಡುಗಡೆಗೆ ಒಪ್ಪಿಗೆ

ಬೆಂಗಳೂರು, ಜು.27– ಹಿಂದುಳಿದ ಆಯೋಗ ಹಾಗೂ ನ್ಯಾಯಾಲಯದ ಸಲಹೆಯಂತೆ ಹಿಂದುಳಿದ ವರ್ಗದ 3ಎ ಪಟ್ಟಿಯಲ್ಲಿರುವ ಕೊಡಗರು ಎಂಬುದರ ಬದಲಾಗಿ ಕೊಡವ/ ಕೊಡವರು ಎಂದು ಬದಲಾವಣೆ ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಗುರುವಾರ ನಡೆದ ರಾಜ್ಯ ಸಂಪುಟ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿದೆ.

ಸಂಪುಟ ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಹೆಚ್.ಕೆ.ಪಾಟೀಲ್ ಈ ವಿಷಯ ತಿಳಿಸಿದ್ದು, ಕರ್ನಾಟಕ ಹಾಲು ಉತ್ಪಾದಕರ ಮಹಾಮಂಡಳ(ಕೆಎಂಎಫ್) ನಂದಿನಿ ಹಾಲಿನ ದರವನ್ನು ಪ್ರತಿ ಲೀಟರ್‌ಗೆ 3 ರೂಪಾಯಿ ಹೆಚ್ಚಳ ಮಾಡುವುದಕ್ಕೆ ಸಂಪುಟ ಸಭೆ ಅನುಮೋದನೆ ನೀಡಿದೆ ಎಂದರು.

ನಂದಿನಿ ಹಾಲಿನ ದರ ಹೆಚ್ಚಳಕ್ಕೆ ಒಪ್ಪಿಗೆ ಸೇರಿದಂತೆ ಸಭೆಯಲ್ಲಿ 15 ವಿಷಯಗಳ ಬಗ್ಗೆ ಚರ್ಚೆ ಮಾಡಲಾಗಿದೆ. ಸಹಕಾರ ಇಲಾಖೆ ಅಡಿಯಲ್ಲಿ ಎಪಿಎಂಸಿಗಳಿಗೆ ರಸ್ತೆ ನಿರ್ಮಾಣ ಮಾಡಲು, ಮೂಲ ಸೌಲಭ್ಯ ಒದಗಿಸಲು 130.40 ಕೋಟಿ ಮಂಜೂರು ಮಾಡಲಾಗಿದೆ. ಮೊಟ್ಟೆ ನೀಡುವ ವಿಚಾರದಲ್ಲಿ ವಿಭಾಗವಾರು ಮೊಟ್ಟೆ ಖರೀದಿಸಿ, ವಿತರಿಸುವ ನಿರ್ಣಯ ತೆಗೆದುಕೊಳ್ಳಲಾಗಿದೆ ಎಂದು ಸಚಿವರು ತಿಳಿಸಿದರು. ಅಕ್ರಮವಾಗಿ ಕಲ್ಲು ಗಣಿಗಾರಿಕೆ ನಡೆಸುತ್ತಿದ್ದರೆ ಅದರ ಬಗ್ಗೆ ಆಡಿಟ್ ಮಾಡಲು ನಿರ್ಣಯ ತೆಗೆದುಕೊಳ್ಳಲಾಗಿದೆ. ಅಕ್ರಮ ಸಾಗಾಣಿಕೆ ಮಾಡುವವರ ವಿರುದ್ಧ ಕ್ರಮಕ್ಕೆ ನಿರ್ಧರಿಸಲಾಗಿದ್ದು, ಇದಕ್ಕಾಗಿ ಸಿಎಂ ನೇತೃತ್ವದಲ್ಲಿ ● 9ನೇ ಪುಟಕ್ಕೆ

ಬ್ಯಾಂಕ್ ಮುಂದೆ ಖಾಸಗಿ ಕಂಪನಿ ಬಿಲ್ ಕಲೆಕ್ಟರ್ ಕಣ್ಣಿಗೆ ಖಾರದಪುಡಿ ಎರಚಿ

6.05 ಲಕ್ಷ ನಗದಿದ್ದ ಬ್ಯಾಗ್ ದರೋಡೆ

- ಬುಧವಾರ ಹಾಡ ಹಗಲೇ ಮೈಸೂರು ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿ ಘಟನೆ
- ಕೆಟಿಎಂ ಡ್ಯೂಕ್ ಬೈಕ್‌ನಲ್ಲಿ ಪರಾರಿಯಾದ ಇಬ್ಬರು ದುಷ್ಕರ್ಮಿಗಳು








ತುಳಸೀದಾಸ್

ಮೈಸೂರು, ಜು.27(ಆರ್‌ಕೆ)–ಹಾಡಹಗಲೇ ಖಾಸಗಿ ಕಂಪನಿಯ ಬಿಲ್ ಕಲೆಕ್ಟರ್ ಕಣ್ಣಿಗೆ ಖಾರದಪುಡಿ ಎರಚಿ 6.05 ಲಕ್ಷ ರೂ. ನಗದು ಹಾಗೂ 7 ಚೆಕ್‌ಗಳಿದ್ದ ಬ್ಯಾಗ್ ಅನ್ನು ಕಿತ್ತುಕೊಂಡು ಪರಾರಿಯಾದ ಘಟನೆ ಮೈಸೂರಿನ ಹೆಬ್ಬಾಳ್ ಕೈಗಾರಿಕಾ ಬಡಾವಣೆಯ ಸಿಪೆಟ್ ಕಾಲೇಜು ರಸ್ತೆಯಲ್ಲಿರುವ ಎಸ್‌ಬಿಐ ಸಣ್ಣ ಮತ್ತು ಮಧ್ಯಮ ಉದ್ಯಮ ಶಾಖೆ ಮುಂಭಾಗ ಬುಧವಾರ ಬೆಳಗ್ಗೆ ನಡೆದಿದೆ. ಹೆಬ್ಬಾಳ್ ಕೈಗಾರಿಕಾ ಬಡಾವಣೆಯಲ್ಲಿರುವ ದಿನಸಿ ಪದಾರ್ಥ ಮತ್ತು ಸಿಗರೇಟ್ ವಿತರಣಾ ಕಂಪನಿಯಾದ ದಸರಗುಪ್ಪೆ ಎಸ್‌ಎಸ್‌ಸಿ ಪ್ರೈವೇಟ್ ಲಿಮಿಟೆಡ್‌ನ ಬಿಲ್ ಕಲೆಕ್ಟರ್ ಆಗಿರುವ ಗೋಕುಲಂ 3ನೇ ಹಂತದ ನಿವಾಸಿ ಕೆ.ತುಳಸೀದಾಸ್ ಹಣ ಕಳೆದುಕೊಂಡವರಾಗಿದ್ದು, ದುಷ್ಕರ್ಮಿಗಳ ಕೃತ್ಯ ಬ್ಯಾಂಕ್‌ನ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ.

ವಿವರ: ಮಾಜಿ ಕಾರ್ಪೊರೇಟರ್ ಗಿರೀಶ್‌ಪ್ರಸಾದ್ ● 9ನೇ ಪುಟಕ್ಕೆ

ಮೈಸೂರಿನ ಸರ್ದಾರ್ ವಲ್ಲಭಬಾಯಿ ಪಟೇಲ್ ನಗರದಲ್ಲಿ ಮನೆ ಬಾಗಿಲು ಮುರಿದು ಚಿನ್ನಾಭರಣ ಕಳವು



ಮೈಸೂರು,ಜು.27(ಆರ್‌ಕೆ)–ಹಾಡಹಗಲೇ ಮನೆ ಬಾಗಿಲು ಮುರಿದು ಚಿನ್ನಾಭರಣ, ನಗದು ಕಳವು ಮಾಡಿರುವ ಘಟನೆ ಮೈಸೂರಿನ ಸರ್ದಾರ್ ವಲ್ಲಭಬಾಯಿ ಪಟೇಲ್ ನಗರದಲ್ಲಿ ಕಳೆದ ಶನಿವಾರ ಸಂಭವಿಸಿದೆ.

ಬಡಾವಣೆಯ 1ನೇ ಕ್ರಾಸ್ ನಿವಾಸಿ ಮಹದೇವಸ್ವಾಮಿ ಮತ್ತು ಸುಗುಣ ದಂಪತಿ ಮನೆಯಲ್ಲಿ ಕಳವಾಗಿದ್ದು, ಅಂದು ಮಧ್ಯಾಹ್ನ 12.30 ಗಂಟೆ ವೇಳೆ ಮನೆಗೆ ಬೀಗ ಹಾಕಿ ತಿ.ನರಸೀಪುರಕ್ಕೆ ತೆರಳಿದ್ದ ಅವರು ರಾತ್ರಿ 7.15 ಗಂಟೆಗೆ ಹಿಂದಿರುಗುವಷ್ಟರಲ್ಲಿ ಈ ಕೃತ್ಯ ನಡೆದಿದೆ. ಬಾಗಿಲು ಮೀಟಿ ಒಳಗೆ ನುಸುಳಿರುವ ಖದೀಮರು ಮನೆಯನ್ನೆಲ್ಲಾ ಶೋಧಿಸಿ ಅಲ್ಮೇರಾದಲ್ಲಿದ್ದ 22 ಗ್ರಾಂ ಹರಳಿನ ನೆಕ್ಲೆಸ್, 15 ಗ್ರಾಂ ಮುತ್ತಿನ ಸರ, 2 ಉಂಗುರ ಸೇರಿ 45 ಗ್ರಾಂ ಚಿನ್ನಾಭರಣಗಳು, ಬೆಳ್ಳಿ ಪದಾರ್ಥ ಹಾಗೂ 2000 ರೂ. ನಗದನ್ನು ಹೊತ್ತೊಯ್ದಿದ್ದಾರೆ. ಹಾಡಹಗಲೇ ಮಧ್ಯಾಹ್ನ ಮನೆಯಲ್ಲಿ ಯಾರೂ ಇಲ್ಲದಿದ್ದುದನ್ನು ಗಮನಿಸಿ ಈ ಕೃತ್ಯ ನಡೆಸಲಾಗಿದೆ.

ಎದುರು ಮನೆಯ ಸಿಸಿ ಕ್ಯಾಮರಾದಲ್ಲಿ ಕಳ್ಳರು ಗೇಟ್ ಮೂಲಕ ಪ್ರವೇಶಿಸಿರುವುದು ಸೆರೆಯಾಗಿದೆ. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಆಲನಹಳ್ಳಿ ಠಾಣೆ ಇನ್‌ಸ್ಪೆಕ್ಟರ್ ಜಿ.ಎನ್.ಶ್ರೀಕಾಂತ್ ಹಾಗೂ ಸಿಬ್ಬಂದಿ ಮಹಜರು ನಡೆಸಿದರು. ಶ್ವಾನದಳ, ನಗರ ಬೆರಳಚ್ಚು ಮುದ್ರೆ ಘಟಕದ ಸಿಬ್ಬಂದಿ ಪರಿಶೀಲನೆ ನಡೆಸಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಸಿಸಿ ಕ್ಯಾಮರಾ ಫುಟೇಜಿನ ಆಧಾರದ ಮೇಲೆ ತನಿಖೆ ಕೈಗೊಂಡಿದ್ದಾರೆ.

ನಾಳೆಯಿಂದ ಎರಡು ದಿನ ಇಂಡಿಯನ್ ಲೈಫ್‌ಸ್ಟೈಲ್ ಪ್ರದರ್ಶನ–ಮಾರಾಟ ಮೇಳ



ಮೈಸೂರು,ಜು.27(ಪಿಎಂ)– ಇಂಡಿಯನ್ ಲೈಫ್‌ಸ್ಟೈಲ್ ಹಾಗೂ ಆಭರಣಗಳ ಪ್ರದರ್ಶನ ಮತ್ತು ಮಾರಾಟ ಮೇಳ ಜು.29 ಮತ್ತು 30ರಂದು ಮೈಸೂರಿನ ಹೋಟೆಲ್ ರಿಯೋ ಮೆರಿಡಿಯನ್‌ನಲ್ಲಿ ನಡೆಯಲಿದೆ.

ಬೆಳಗ್ಗೆ 10.30 ರಿಂದ ರಾತ್ರಿ 8.30ರವರೆಗೆ ನಡೆಯುವ ಈ ಮೇಳಕ್ಕೆ ಸಾರ್ವಜನಿಕರಿಗೆ ಉಚಿತ ಪ್ರವೇಶವಿದೆ. ವರಮಹಾಲಕ್ಷ್ಮೀ ಹಬ್ಬದ ಪ್ರಯುಕ್ತ ಫ್ಯಾಷನ್ ಸ್ಟೋರ್ಸ್ ವತಿಯಿಂದ ಆಯೋಜಿಸಿರುವ ಈ ಮೇಳದಲ್ಲಿ ಒಂದೇ ಸೂರಿನಡಿ ವೈವಿಧ್ಯಮಯವಾದ ಭಾರತೀಯ ಜೀವನಶೈಲಿಯ ವಸ್ತ್ರಾಭರಣಗಳು ದೊರೆಯಲಿವೆ. ಮೇಳದಲ್ಲಿ ದೇಶದ 50ಕ್ಕೂ ಹೆಚ್ಚು ಪ್ರತಿಷ್ಠಿತ ಕಂಪನಿಗಳು ಭಾಗವಹಿಸಲಿವೆ. ಜು.29ರಂದು ಬೆಳಗ್ಗೆ 10.30ಕ್ಕೆ ನಟಿ ಯಶಸ್ವಿನಿ ರವೀಂದ್ರ್ ಮೇಳಕ್ಕೆ ಚಾಲನೆ ನೀಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಈಗಿನ ಜೀವನಶೈಲಿ ಮತ್ತು ಫ್ಯಾಶನ್‌ಗೆ ಪೂರಕವಾಗಿ ಹೊಸತನದ ವಿನ್ಯಾಸದ ವಂಡರ್ ಡೈಮಂಡ್ಸ್, ಕೋಕೋ ಲಕ್ಷುರಿ ಇಂಟರ್‌ನ್ಯಾಷನಲ್, ಸಿಕ್ಸ್ ಯಾರ್ಡ್ ಸಿಲ್ಕ್ಸ್, ಸಖಿ ಫ್ಯಾಷನ್ಸ್, ರಾಹುಲ್ಸ್, ದಯಾಲ್ ಸಾಂಪ್ರದಾಯಿಕ ಸಿಲ್ಕ್ಸ್, ಬೇಗ್ಂ ಚಿಂಕಾರಿ, ನವಜಿ ಎಂಟರ್ ಪ್ರೈಸಸ್, ಮಹಿ ಕಲೆಕ್ಷನ್ಸ್, ಹೋಂ ಕಂಫರ್ಟ್ಸ್, ಆದಾ ಕಲೆಕ್ಷನ್ ವಿವಿಧ ವಿಶೇಷ ಸಂಗ್ರಹದ ಲೋಕವೇ ಇರಲಿದೆ.

ವಜ್ರಾಭರಣಗಳು, ಬೆಳ್ಳಿ ಆಭರಣಗಳು, ಕಾಂಚೀವರಂ ಸೀರೆಗಳು, ಹೊಸ ವಿನ್ಯಾಸದ ರೇಷ್ಮೆ ಸೀರೆಗಳು, ವಧು–ವರನಿಗೆ ಅಗತ್ಯವಿರುವ ವಿವಾಹ ವಸ್ತ್ರಗಳು, ಕುರ್ತಾಗಳು, ಟಾಪ್ಸ್, ಫ್ಯಾಷನ್ ಜ್ಯುಯಲರಿ, ಹ್ಯಾಂಡಿಕ್ರಾಫ್ಟ್ ಜ್ಯುಯಲರಿ, ವಿವಿಧ ಮಾದರಿಯ ಜವಳಿ ಉತ್ಪನ್ನಗಳು, ಗೃಹೋಪಯೋಗಿ, ಅಲಂಕಾರಿಕ ವಸ್ತುಗಳು, ಹ್ಯಾಂಡಿಕ್ರಾಫ್ಟ್ ಬ್ಯಾಗ್ ಹೀಗೆ ಪ್ರತಿಯೊಂದು ವಸ್ತು ಒಂದೇ ಸೂರಿನಡಿ ಲಭ್ಯ.



ಮೈಸೂರು ಜಲದರ್ಶಿನಿ ಅತಿಥಿ ಗೃಹದಲ್ಲಿ ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ಮೈಸೂರು ಜಿಲ್ಲಾ ಘಟಕದಿಂದ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷರಾದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಹುಟ್ಟುಹಬ್ಬ ಆಚರಿಸಲಾಯಿತು. ಈ ವೇಳೆ ಶ್ರೀಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ಸಿಹಿ ವಿತರಿಸಲಾಯಿತು. ಚಿತ್ರದಲ್ಲಿ ಸಂಘದ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್‌ಗೌಡ, ಕಾರ್ಯಾಧ್ಯಕ್ಷೆ ಸುಮಿತ್ರಾ, ಲತಾ ರಂಗನಾಥ, ಜಗದೀಶ್ ಗೌಡ, ಮಂಜುಳಾ, ರಮ್ಯಾ, ಭಾಗ್ಯಮ್ಮ, ಶೃತಿ, ಪದ್ಮ, ಹನುಮಂತಯ್ಯ ಇನ್ನಿತರರಿದ್ದಾರೆ.

ನಾಳೆ ಉಚಿತ ಆ್ಯಂಟಿ ರೇಬೀಸ್ ಲಸಿಕೆ ಶಿಬಿರ

ಮೈಸೂರು, ಜು. 27–ಡಾಗ್ಸ್ ಪ್ರೊಟೆಕ್ಷನ್ ಟ್ರಸ್ಟ್, ಪ್ರಾಣಿ ಕಲ್ಯಾಣ ಸಂಸ್ಥೆಯು ಮೈಸೂರಿನಲ್ಲಿ ಬೀದಿನಾಯಿಗಳು ಮತ್ತು ಸಾಕುನಾಯಿಗಳಿಗೆ ಜು.29ರಂದು ಬೆಳಗ್ಗೆ 10ರಿಂದ ಸಂಜೆ 5 ಗಂಟೆಯವರೆಗೆ ವಿಜಯನಗರ ಎರಡನೇ ಹಂತದಲ್ಲಿರುವ ರೈತ ಸಂತೆ ಮುಡಾ ಕಾಂಪ್ಲೆಕ್ಸ್‌ನಲ್ಲಿ ಉಚಿತ ಆ್ಯಂಟಿ ರೇಬೀಸ್ ಲಸಿಕೆ ಶಿಬಿರ ಹಮ್ಮಿಕೊಂಡಿದೆ. ಶಿಬಿರವನ್ನು ಪಾಲಿಕೆ ಸದಸ್ಯ ಎಂ.ಯು. ಸುಬ್ಬಯ್ಯ ಉದ್ಘಾಟಿಸಲಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊ. 88846 62528 ಸಂಪರ್ಕಿಸಬಹುದು.

ಹಿನಕಲ್ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಅವಿರೋಧ ಆಯ್ಕೆ



ಮೈಸೂರು ತಾಲೂಕಿನ ಹಿನಕಲ್‌ನಲ್ಲಿ ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ ಹಾಲು ಉತ್ಪಾದಕರ ಸಹಕಾರ ಸಂಘದ ಐದು ವರ್ಷದ ಅವಧಿ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ನೀಲಕಂಠಪ್ಪ, ಉಪಾಧ್ಯಕ್ಷರಾಗಿ ನಾಗರಾಜು ಅವಿರೋಧವಾಗಿ ಆಯ್ಕೆಯಾದರು. ಈ ಸಂದರ್ಭದಲ್ಲಿ ನಿರ್ದೇಶಕರಾದ ಎಸ್. ಹೊನ್ನಪ್ಪ, ಹೆಚ್.ಸಿ.ರಾಜು, ಜನಾರ್ಧನ್, ಬೀರಪ್ಪ, ಹೆಚ್.ಜೆ.ವೆಂಕಟೇಶ್, ರಮೇಶ್, ಗುರುಸ್ವಾಮಿ, ಟಿ.ವೆಂಕಟೇಶ್, ಸರಸ್ವತಿ, ರಾಧಿಕಾ, ಬೆಟ್ಟಯ್ಯ ಉಪಸ್ಥಿತರಿದ್ದರು.

ಅನುಕಂಪ ಆಧಾರದ ಮೇಲೆ ನೌಕರಿ ಕೋರಿ ಅರ್ಜಿ ಸಲ್ಲಿಕೆ: ವಿಳಂಬ ಬೇಡ

ಮೈಸೂರು, ಜು.27(ಎಸ್‌ಪಿಎನ್)– ಅನುಕಂಪದ ಆಧಾರದ ಮೇಲಿನ ನೌಕರಿ ಕೋರಿ ಸಲ್ಲಿಸುವ ಅರ್ಜಿಗಳನ್ನು ಯಾವುದೇ ವಿಳಂಬವಿಲ್ಲದೆ, ವಿಲೇವಾರಿ ಮಾಡಬೇಕು. ಇಲ್ಲವಾದಲ್ಲಿ ಅಂತಹ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆಯುಕ್ತೆ ಬಿ.ಬಿ.ಕಾವೇರಿ ಹೊರಡಿಸಿರುವ ಸುತ್ತೋಲೆಯಲ್ಲಿ ತಿಳಿಸಿದ್ದಾರೆ.

ಅನುಕಂಪದ ಆಧಾರದ ಮೇರೆಗೆ ನೇಮಕಾತಿ ನೀಡುವ ಸಂದರ್ಭದಲ್ಲಿ ಕಾಲ ಕಾಲಕ್ಕೆ ಸರ್ಕಾರದಿಂದ ಹೊರಡಿಸಿರುವ ಅಧಿಸೂಚನೆ, ಸುತ್ತೋಲೆಗಳ ಪ್ರಕಾರ ದಾಖಲಾತಿಗಳನ್ನು ಪರಿಶೀಲಿಸಿ, ಅಗತ್ಯ ಮಾಹಿತಿಗಳೊಂದಿಗೆ ಶಾಲಾ ಶಿಕ್ಷಣ ಇಲಾಖೆ ಜಿಲ್ಲಾ ಉಪನಿರ್ದೇಶಕರು ಮತ್ತು ಸಂಬಂಧಿಸಿದ ಅಧಿಕಾರಿಗಳು, ಅನುಕಂಪದ ಆಧಾರದ ನೇಮಕಾತಿ ಪ್ರಸ್ತಾವನೆಗಳನ್ನು ಯಾವುದೇ ವಿಳಂಬವಿಲ್ಲದಂತೆ ಸೂಕ್ಷ್ಮವಾಗಿ ಆಯಾ ನೇಮಕಾತಿ ಪ್ರಾಧಿಕಾರದವರಿಗೆ ಕಡತಗಳನ್ನು ರವಾನಿಸುವಂತೆ ಸೂಚಿಸಿದ್ದಾರೆ. ಈ ವಿಷಯದಲ್ಲಿ ಅನಗತ್ಯ ವಿಳಂಬ ತೋರದೆ, ಅರ್ಜಿದಾರರಿಗೆ ತೊಂದರೆಯನ್ನುಂಟು ಮಾಡುವುದು, ಭ್ರಷ್ಟಾಚಾರ ಕಂಡುಬಂದರೆ, ಗಂಭೀರವಾಗಿ ಪರಿಗಣಿಸಿ, ಸಂಬಂಧಿತ ಕಚೇರಿ, ಮುಖ್ಯಸ್ಥರು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಡಿಡಿಪಿಐಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಆದೇಶಿಸಿದ್ದಾರೆ.

ಉದ್ಯೋಗ ಗಿಟ್ಟಿಸಿಕೊಳ್ಳುವುದೇ ಶಿಕ್ಷಣದ ಏಕಮಾತ್ರ ಗುರಿಯಾಗಬಾರದು

ಗುಂಟೂರು ವಿಜ್ಞಾನ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಸಿ.ನಾಗಭೂಷಣ್ ಅಭಿಮತ



ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಲ್ಲಿ ನಡೆದ ಮೈಸೂರು ವಿಶ್ವವಿದ್ಯಾನಿಲಯ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮವನ್ನು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಆಂಧ್ರಪ್ರದೇಶದ ಗುಂಟೂರಿನ ವಿಜ್ಞಾನ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಪಿ.ನಾಗಭೂಷಣ್ ಅವರು ಗುರುವಾರ ಉದ್ಘಾಟಿಸಿದರು.

ಮೈಸೂರು, ಜು. 27(ಬಿಎಲ್‌ಯು)– ಉದ್ಯೋಗದ ಜೊತೆಗೆ ಜ್ಞಾನಾರ್ಜನೆಗಾಗಿ ಕೂಡ ಶಿಕ್ಷಣ ಪಡೆಯುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಆಂಧ್ರ ಪ್ರದೇಶದ ಗುಂಟೂರಿನ ವಿಜ್ಞಾನ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಪಿ. ನಾಗಭೂಷಣ್ ಸಲಹೆ ನೀಡಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಲ್ಲಿ ಗುರುವಾರ ನಡೆದ ಮೈಸೂರು ವಿಶ್ವವಿದ್ಯಾನಿಲಯದ ಸಂಸ್ಥಾಪನಾ ದಿನಾಚರಣೆಯಲ್ಲಿ ಉಪನ್ಯಾಸ ನೀಡಿದ ಅವರು, ಕಲಿಕೆ ಜೀವನದ ಅವಿಭಾಜ್ಯ ಅಂಗ. ಶಿಕ್ಷಣ ಇಲ್ಲದಿದ್ದರೆ ಮನುಷ್ಯನ ಬದುಕು ಅಪೂರ್ಣ. ಆದರೆ ಇತ್ತೀಚೆಗೆ ಉದ್ಯೋಗಕ್ಕಾಗಿ ಮಾತ್ರ ಶಿಕ್ಷಣ ಪಡೆಯುವ ಮನೋಭಾವ ಎಲ್ಲರಲ್ಲೂ ಬೇರೂರಿದೆ ಎಂದು ವಿಷಾದಿಸಿದರು.

ಉದ್ಯೋಗ ಮನುಷ್ಯನಿಗೆ ಅವಶ್ಯಕ. ಆದರೆ, ಉದ್ಯೋಗ ಪಡೆಯುವ ಏಕಮಾತ್ರ ಗುರಿ ಆಗಬಾರದು. ಜೊತೆಗೆ ಜ್ಞಾನ ವೃದ್ಧಿಯೂ ಅತ್ಯವಶ್ಯಕ. ಈ ಹಿನ್ನೆಲೆಯಲ್ಲಿ ಉದ್ಯೋಗಕ್ಕಾಗಿ ಮಾತ್ರ ಶಿಕ್ಷಣ ಪಡೆಯಬೇಕು ಎಂಬ ಒತ್ತಡವನ್ನು ಪೋಷಕರು ಮಕ್ಕಳ ಮೇಲೆ ಹೇರಬಾರದು ಎಂದು ಪ್ರೊ.ನಾಗಭೂಷಣ್ ಸಲಹೆ ನೀಡಿದರು.

ಈಗಿನ ಶಿಕ್ಷಣ ಪರೀಕ್ಷೆ ಮೇಲೆ ಅವಲಂಬಿತವಾಗಿದೆ. ಇದಕ್ಕಾಗಿ ಅಷ್ಟೇ ಪಠ್ಯವನ್ನು ಓದುವಂತೆ ಪೋಷಕರು ಹಾಗೂ ಶಿಕ್ಷಕರು ಮಕ್ಕಳ ಮೇಲೆ ಒತ್ತಡ ಹೇರುತ್ತಾರೆ. ಆದರೆ ಪಠ್ಯದಲ್ಲಿರುವ ವಿಚಾರಗಳ ಬಗ್ಗೆ ಆವಿಷ್ಕಾರ ಮಾಡುವಂತೆ ಹೇಳುವುದಿಲ್ಲ ಎಂದು ಹೇಳಿದರು.

ವೇತನ ಆಧಾರಿತ ಶಿಕ್ಷಣ ವ್ಯವಸ್ಥೆಯ ಕಾರಣ ಪ್ಲೇಸ್‌ಮೆಂಟ್ ಇರುವ ಕಾಲೇಜುಗಳಿಗೆ ಮಕ್ಕಳನ್ನು ದಾಖಲಿಸಲು ಪೋಷಕರು ಹಾತೊರೆಯುತ್ತಾರೆ. ಇದರಿಂದ ಮಕ್ಕಳಲ್ಲಿ ಪದವಿ ಹಾಗೂ ಸಂಪಾದನೆ ಮಾಡುವುದು ಏಕಮಾತ್ರ ಗುರಿಯಾಗುತ್ತದೆ. ಆದರೆ ಚಿಂತನೆ ಮಾಡುವ ಶಕ್ತಿ ಮಕ್ಕಳಲ್ಲಿ ಕುಂದುತ್ತದೆ. ಆದ ಕಾರಣ ಮಕ್ಕಳ ಜ್ಞಾನಾರ್ಜನೆಗೆ ಒತ್ತು ನೀಡಬೇಕು ಪ್ರೊ.ನಾಗಭೂಷಣ್ ಹೇಳಿದರು.

ರಾಮಾಯಣ ಮತ್ತು ಮಹಾಭಾರತದಲ್ಲಿರುವ ಮೌಲ್ಯಾಧಾರಿತ ಶಿಕ್ಷಣದ ತಳಹದಿಯ ಮೇಲೆ ರಾಷ್ಟ್ರೀಯ ಶಿಕ್ಷಣ ನೀತಿ ರೂಪಿಸಲಾಗಿದೆ. ಉದಾರತೆ ಹಾಗೂ ವೈಚಾರಿಕತೆ ಆಧಾರಿತ ಶಿಕ್ಷಣ ನೀಡಲು ಬಹಳಷ್ಟು ಅಂಶಗಳನ್ನು ಅಡಕ ಮಾಡಲಾಗಿದೆ ಎಂದು ಪ್ರೊ.ನಾಗಭೂಷಣ್ ತಿಳಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವೆ ವಿ.ಆರ್. ಶೈಲಜಾ ವೇದಿಕೆಯಲ್ಲಿ ಉಪಸ್ಥಿತರಿದರು.

ಗಣಿ ಗುತ್ತಿಗೆ ಸಮಸ್ಯೆ ನಿವಾರಣೆಗೆ ಏಕಗವಾಕ್ಷಿ ಮಾದರಿ ವ್ಯವಸ್ಥೆಗೆ ಸೂಚನೆ

● ಗಣಿ ಗುತ್ತಿಗೆ ಪಡೆದ ಸಂಸ್ಥೆಗಳ ಸಮಸ್ಯೆ ನಿವಾರಣೆಗೆ ತಿಂಗಳು ಇಲ್ಲವೇ ಎರಡು ತಿಂಗಳಿಗೊಮ್ಮೆ ಸಭೆ ನಡೆಸಲು ಸಿಎಂ ಸೂಚನೆ ● ಗಣಿ ಮತ್ತು ಭೂ ವಿಜ್ಞಾನ ಇಲಾಖೆ ವ್ಯಾಪ್ತಿಯ ಅರಣ್ಯ ಇಲಾಖೆಗೆ ಸಂಬಂಧಿಸಿದ ಪ್ರಕರಣ ಸಂಬಂಧ ಸಭೆ



ಬೆಂಗಳೂರು, ಜು.27(ಕೆಎಂಶಿ) –ಗಣಿ ಗುತ್ತಿಗೆ ಸಮಸ್ಯೆಗಳನ್ನು ಬಗೆಹರಿಸಲು ಏಕಗವಾಕ್ಷಿ ಮಾದರಿ ವ್ಯವಸ್ಥೆ ರೂಪಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದರು.

ರಾಜ್ಯದಲ್ಲಿ ಗಣಿ ಗುತ್ತಿಗೆ ಪಡೆದಿರುವ ಸಂಸ್ಥೆಗಳಿಗೆ ಅರಣ್ಯ ಇಲಾಖೆ ತೀರುವಳಿ ಮತ್ತಿತರ ಅನುಮತಿ ಪತ್ರಗಳನ್ನು ನೀಡಲು ಹಾಗೂ ಸಮಸ್ಯೆಗಳನ್ನು ಬಗೆಹರಿಸಲು ಗಣಿ ಮತ್ತು ಭೂವಿಜ್ಞಾನ, ಕಂದಾಯ ಹಾಗೂ ಅರಣ್ಯ ಇಲಾಖೆ ಸಚಿವರು ಹಾಗೂ ಅಧಿಕಾರಿಗಳು ಪ್ರತಿ ತಿಂಗಳು ಅಥವಾ ಎರಡು ತಿಂಗಳಿಗೊಮ್ಮೆ ಸಭೆ ನಡೆಸಿ ಏಕಗವಾಕ್ಷಿ ವ್ಯವಸ್ಥೆ ಮಾದರಿಯಲ್ಲಿ ಇತ್ಯರ್ಥಪಡಿಸುವಂತೆ ಮುಖ್ಯಮಂತ್ರಿಗಳು ಸೂಚಿಸಿದರು.

ಅವರು ಗುರುವಾರ ರಾಜ್ಯದಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ವ್ಯಾಪ್ತಿಯ ಸಂಸ್ಥೆಗಳಲ್ಲಿ ಅರಣ್ಯ ಇಲಾಖೆಗೆ ಸಂಬಂಧಿಸಿದ ಬಾಕಿ ಇರುವ ಪ್ರಕರಣಗಳನ್ನು ಇತ್ಯರ್ಥಪಡಿಸುವ ಕುರಿತಂತೆ ಉನ್ನತ ಮಟ್ಟದ ಸಭೆ ನಡೆಸಿದರು.

ಈ ಸಂದರ್ಭದಲ್ಲಿ ಅರಣ್ಯ ಇಲಾಖೆ ತೀರುವಳಿ ಪಡೆಯಲು ಬಹಳಷ್ಟು ಪ್ರಕರಣಗಳು ಬಾಕಿ ಇರುವ ಕುರಿತು ಚರ್ಚಿಸಲಾಯಿತು. ಇದಕ್ಕೆ ಗಣಿ ಗುತ್ತಿಗೆ ಪಡೆದ ಸಂಸ್ಥೆಗಳು ಅರಣ್ಯೀಕರಣಕ್ಕೆ ಪರ್ಯಾಯ ಭೂಮಿ ನೀಡದೆ ಇರುವುದು ಕಾರಣವೆಂದು ಗುರುತಿಸಲಾಯಿತು. ಇದಕ್ಕಾಗಿ ಆನೆಗಳು ಮತ್ತಿತರ ವನ್ಯಜೀವಿಗಳ ಉಪಟಳದಿಂದಾಗಿ ಕೃಷಿ ಭೂಮಿ ಮಾರಲು ಸಿದ್ಧರಿರುವ ರೈತರು ಅರಸೀಕರೆ ಮತ್ತು ರಾಜ್ಯದ ಇತರ ಕೆಲವು ಭಾಗಗಳಲ್ಲಿದ್ದಾರೆ. ಇಂತಹ ರೈತರಿಗೆ ಈ ಸಂಸ್ಥೆಗಳು ಜಮೀನು ಖರೀದಿಸಿ ಅರಣ್ಯೀಕರಣಕ್ಕೆ ಒದಗಿಸಲು ಅನುವು ಮಾಡಿಕೊಡುವಂತೆ ರಾಜ್ಯದಲ್ಲಿ ಖನಿಜಾನ್ವೇಷಣೆಯನ್ನು ಭಾರತ ಸರ್ಕಾರಿ ಸ್ವಾಮ್ಯದ ಕೆಐಓಸಿಎಲ್ ಮತ್ತು ಎಂಇಸಿಎಲ್ ಮೂಲಕ ಕೈಗೊಳ್ಳಲು ಅನುಮತಿಗಾಗಿ ಭಾರತ ಸರ್ಕಾರಕ್ಕೆ ಪ್ರವೇಶ್ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಲಾಗಿದೆ. ಈ ಅರ್ಜಿಗಳಿಗೆ ಇರುವ ಆಕ್ಷೇಪಣೆಗಳನ್ನು ಸರಿಪಡಿಸಿ ತ್ವರಿತವಾಗಿ ತೀರುವಳಿ ಪಡೆಯುವಂತೆ ಈ ಸಂಸ್ಥೆಗಳೊಂದಿಗೆ ಚರ್ಚಿಸಲು ಗಣಿ ಮತ್ತು ಭೂವಿಜ್ಞಾನ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಹಿಂದೆ ಅಕ್ರಮ ಗಣಿಗಾರಿಕೆಯಿಂದ ಜಪ್ತಿ ಮಾಡಿರುವ 2.7 ದಶಲಕ್ಷ ಮೆಟ್ರಿಕ್ ಟನ್ ಅದಿರು ಅರಣ್ಯ ಪ್ರದೇಶದಲ್ಲಿದ್ದು, ಇವುಗಳ ವಿಲೇವಾರಿಗೆ ಕಾನೂನು ತಜ್ಞರ ಸಲಹೆ ಪಡೆದು ಕ್ರಮ ಕೈಗೊಳ್ಳಲು ಸೂಚಿಸಿದರು. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಟಾಸ್ಕ್ ಫೋರ್ಸ್ ಅಡಿ ಬರುವ ಅರ್ಜಿಗಳನ್ನು ತ್ವರಿತವಾಗಿ ವಿಲೇವಾರಿ ಮಾಡುವಂತೆ ಸೂಚಿಸಿದರು. ಕಲ್ಲುಗಣಿ ಗುತ್ತಿಗೆದಾರರು ನಿಯಮಗಳ ಉಲ್ಲಂಘನೆ ಮಾಡಿರುವುದಕ್ಕೆ ವಿಧಿಸಿರುವ ದಂಡ ಸಂಗ್ರಹಿಸಲು ಯೋಜನೆ ಜಾರಿಗೆ ತರುವ ಕುರಿತ ಪ್ರಸ್ತಾವನೆಯನ್ನು ಸಚಿವ ಸಂಪುಟದ ಸಭೆಯಲ್ಲಿ ಮಂಡಿಸಲು ಸಿದ್ದರಾಮಯ್ಯ ಸೂಚಿಸಿದರು.



ಗುರುವಾರ ತಮ್ಮ ಹುಟ್ಟುಹಬ್ಬ ಆಚರಿಸಿಕೊಂಡ ಮೈಸೂರು ಜಿಪಂ ಮಾಜಿ ಸದಸ್ಯ, ಹಾಲಿ ಗ್ರಾಪಂ ಸದಸ್ಯ ಉದ್ಬೂರು ಕೃಷ್ಣ ಅವರು ಗ್ರಾಮಸ್ಥರು, ಸ್ನೇಹಿತರಿಗೆ ಸಿಹಿ ವಿತರಿಸಿದರು. ಈ ವೇಳೆ ಒಲಂಪಿಯಾ ಮಹೇಶ್, ರಮ್ಮನಹಳ್ಳಿ ಶಿವು, ಪ್ರಶಾಂತ್ ಇನ್ನಿತರರು ಉದ್ಬೂರು ಕೃಷ್ಣ ಅವರನ್ನು ಆತ್ಮೀಯವಾಗಿ ಅಭಿನಂದಿಸಿದರು.

ಕೂರ್ಗಳ್ಳಿ ಕೈಗಾರಿಕಾ ಪ್ರದೇಶದಲ್ಲಿ ನಿಧಿ ಆಪ್ಕೆ ನಿಕಟ್ ಕಾರ್ಯಕ್ರಮ



ಮೈಸೂರು,ಜು. 27–ಭವಿಷ್ಯನಿಧಿ ಸಂಘಟನೆಯ ಮೈಸೂರು ಕ್ಷೇತ್ರಿಯ ಕಚೇರಿ ವತಿಯಿಂದ ನಿಧಿ ಆಪ್ಕೆ ನಿಕಟ್ 2.0ರ ಅಡಿಯಲ್ಲಿ ಜಿಲ್ಲಾ ವ್ಯಾಪ್ತಿಯ ಕಾರ್ಯಕ್ರಮ ಕೂರ್ಗಳ್ಳಿ ಕೈಗಾರಿಕಾ ಪ್ರದೇಶದಲ್ಲಿ ನಡೆಸಲಾಯಿತು. ಜನರಲ್ ಮ್ಯಾನೇಜರ್ ಡಾ.ಶಿವಪ್ರಸಾದ್, ಇಪಿಎಫ್ಒ, ಪ್ರಾದೇಶಿಕ ಕಚೇರಿಯ ಎ.ಚಾರುಮೋಹನನ್, ಜಿಲ್ಲಾ ನೋಡಲ್ ಅಧಿಕಾರಿ, ವಿಭಾಗದ ಮೇಲ್ವಿಚಾರಕರು, ಎಸ್.ಸಂಪತ್‌ಕುಮಾರ್, ಆರ್.ಮಂಜುನಾಥ್, ಉದ್ಯೋಗದಾತರು, ಉದ್ಯೋಗಿಗಳು ಮತ್ತು ಪಿಂಚಣಿದಾರರು ಉಪಸ್ಥಿತರಿದ್ದರು. ಇಪಿಎಫ್ಒ ಉದ್ಯೋಗದಾತರು, ಉದ್ಯೋಗಿಗಳು ಮತ್ತು ಪಿಂಚಣಿದಾರರು ಅಹವಾಲುಗಳನ್ನು ಸಲ್ಲಿಸಿ ಪರಿಹರಿಸಿಕೊಂಡರು.

ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಅರ್ಜಿ ಆಹ್ವಾನ

ಮೈಸೂರು,ಜು.27– ನಂಜನಗೂಡು ತಾಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ (ಸಾಮಾನ್ಯ ಪದವಿ ಕೋರ್ಸಿನ ವಿದ್ಯಾರ್ಥಿಗಳಿಗೆ ಮಾತ್ರ) ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳ ಪ್ರವೇಶ ಬಯಸುವ ಪ್ರವರ್ಗ–1, 2ಎ, 2ಬಿ, 3ಎ, ಪ.ಜಾತಿ, ಪ.ವರ್ಗ, ಇತರೆ ವಿವಿಧ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳಿಂದ 2023–24ನೇ ಸಾಲಿಗೆ www.bcwd.karnataka.gov.in ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಆ.16 ಕೊನೇ ದಿನ. ಮಾಹಿತಿಗಾಗಿ bcwd.hostel@karnataka.gov.in, ದೂ.ಸಂ: 8050370005 ಸಂಪರ್ಕಿಸಬಹುದು.


ನವೋದಯ ವಿದ್ಯಾಲಯ ಪ್ರವೇಶಕ್ಕೆ ಅರ್ಜಿ

ಮೈಸೂರು,ಜು.27– ಜವಾಹರ ನವೋದಯ ವಿದ್ಯಾಲಯದ 2023–24ನೇ ಸಾಲಿನ 6ನೇ ತರಗತಿ ಶೈಕ್ಷಣಿಕ ಪ್ರವೇಶ ಪರೀಕ್ಷೆಗೆ ಅರ್ಜಿ ಆಹ್ವಾನಿಸಿದ್ದು, www.navodaya.gov.in ಮೂಲಕ ಅರ್ಜಿ ಸಲ್ಲಿಸಲು ಆ.10 ಕೊನೆ ದಿನ. 2024ರ ಜನವರಿ 20ರಂದು ಪರೀಕ್ಷೆ ನಡೆಯಲಿದ್ದು, ಮಾಹಿತಿಗಾಗಿ www.navodaya.gov.in ಅಥವಾ ದೂ.ಸಂ: 0821–2970040 ಸಂಪರ್ಕಿಸಬಹುದು.

ವಿವಿಧ ಸೌಲಭ್ಯಗಳಿಗೆ ಅರ್ಜಿ ಆಹ್ವಾನ

ಮೈಸೂರು,ಜು.27–ಬನ್ನೂರು ಪಟ್ಟಣ ಪಂಚಾಯಿತಿ 2023–24ನೇ ಸಾಲಿನ ಎಸ್‌ಎಫ್‌ಸಿ ಮುಕ್ತನಿಧಿ ಹಾಗೂ ಪಪಂ ಅನುದಾನದಲ್ಲಿ ಶೇ.24.10, ಶೇ.7.25 ವಿವಿಧ ಯೋಜನೆಗಳಿಗೆ ವಿವಿಧ ವೈಯಕ್ತಿಕ ಸೌಲಭ್ಯ ಕಲ್ಪಿಸಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಸೆ.20 ಕೊನೆ ದಿನ. ಸಂಬಂಧಿತ ದಾಖಲೆಗಳೊಂದಿಗೆ ಪಪಂ ಕಾರ್ಯಾಲಯಕ್ಕೆ ಸಲ್ಲಿಸುವಂತೆ ತಿಳಿಸಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

28.7.2023 ಶುಕ್ರವಾರ, ಮಳೆ ನಕ್ಷತ್ರ: ಆಶ್ಲೇಷ 21.07.2023ರಿಂದ 03.08.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಅಧಿಕ ಶ್ರಾವಣ ಮಾಸ, ಶುಕ್ಲ ಪಕ್ಷ, ತಿಥಿ: ದಶಮಿ, ನಕ್ಷತ್ರ: ಅನೂರಾಧ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ:** ಮಾರ್ಗದರ್ಶಿ, ವಿದ್ಯಾರ್ಥಿ–ಅಧಿಕಾರಿ ನೇರ ಸಂವಾದ, ಉದ್ಘಾಟನೆ: ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಉಪಸ್ಥಿತರು: ಕರಾಮುವಿವಿ ಕುಲಸಚಿವ ಪ್ರೊ.ಕೆ.ಎಲ್.ಎನ್.ಮೂರ್ತಿ, ಕುಲಸಚಿವ ಪ್ರೊ.ಕೆ.ಬಿ.ಪ್ರವೀಣ, ಸ್ಥಳ: ಕಕಕೇ ಕರಾಮುವಿವಿ, ಬೆಳಗ್ಗೆ 10ಕ್ಕೆ.

■ **ಸಹರಾ ಆರ್ಟ್ ಅಂಡ್ ಕ್ರಾಫ್ಟ್:** ಶಾಪಿಂಗ್ ಫೆಸ್ಟಿವಲ್, ಹ್ಯಾಂಡಿಕ್ರಾಫ್ಟ್ ಅಂಡ್ ಹ್ಯಾಂಡ್‌ಲೂಮ್ ಪ್ರದರ್ಶನ, ಮಾರಾಟ, ಸ್ಥಳ: ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನ, ಬೆಳಗ್ಗೆ 10.30ರಿಂದ ರಾತ್ರಿ 9.30ರವರೆಗೆ.

■ **ಸಂವಹನ ಪ್ರಕಾಶಕರು :** ವಿಕ್ರಂ ಚದುರಂಗ ಅವರ ಸ್ಮೃತಿ (ಸಾಂಸ್ಕೃತಿಕ ಸಂಕಥನ) ಲೋಕಾರ್ಪಣೆ ಸಮಾರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಪುಸ್ತಕ ಲೋಕಾರ್ಪಣೆ : ವಿದ್ವಾಂಸ ಪ್ರೊ. ಹಂಪನಾ, ಮುಖ್ಯ ಅತಿಥಿಗಳು : ಹಿರಿಯ ವಿದ್ವಾಂಸ ಪ್ರೊ. ಕಮಲಾ ಹಂಪನಾ, ಪುಸ್ತಕದ ಪ್ರತಿ ಸ್ವೀಕಾರ : ಮಾಜಿ ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರ ಮೊಮ್ಮಗ ಸೂರಜ್ ಹೆಗ್ಡೆ, ಪುಸ್ತಕ ಪರಿಚಯ : ಸಂಸ್ಕೃತ ವಿಶ್ವವಿದ್ಯಾನಿಲಯ ವಿಶ್ರಾಂತ ಕುಲಪತಿ ಡಾ. ಪದ್ಮಾಶೇಖರ್, ಲೇಖಕರ ಮಾತು : ವಿಕ್ರಂ ಚದುರಂಗ, ಉಪಸ್ಥಿತರು : ಪ್ರಕಾಶಕರಾದ ಡಿ.ಎನ್. ಲೋಕಪ್ಪ, ಸ್ಥಳ: ಗಾನಭಾರತಿ, ವೀಣೆಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಬೆಳಗ್ಗೆ 11ಕ್ಕೆ.

■ **ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘ:** ಹೋಟೆಲ್ ಸಹಕಾರ ಮಿತ್ರ ಪ್ರಶಸ್ತಿ ಪ್ರದಾನ ಸಮಾರಂಭ, ಅಧ್ಯಕ್ಷತೆ: ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಸುಬ್ರಹ್ಮಣ್ಯ ಆರ್.ತಂತ್ರಿ, ಪ್ರಶಸ್ತಿ ಪುರಸ್ಕೃತರು: ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಉಪಸ್ಥಿತರು: ಪತ್ತಿನ ಸಹಕಾರ ಸಂಘದ ಉಪಾಧ್ಯಕ್ಷ ಪಿ.ಎನ್.ಕುಂದರ್, ರಾಜ್ಯ ಹೋಟೆಲ್ ಸಂಘದ ಉಪಾಧ್ಯಕ್ಷ ರವಿಶಾಸ್ತ್ರಿ, ಸ್ಥಳ: ಸಮ್ಮಿಲನ ಸಭಾಂಗಣ, ಹೋಟೆಲ್ ಪೈವಿಸ್ತಾ, ಬಿ.ಎನ್.ರಸ್ತೆ, ಮಧ್ಯಾಹ್ನ 12ಕ್ಕೆ.

■ **ಸಿಲ್ಕ್ ಇಂಡಿಯಾ:** ಸಿಲ್ಕ್ ಇಂಡಿಯಾ–2023 ಪ್ರದರ್ಶನ–ಮಾರಾಟ, ಉದ್ಘಾಟನೆ: ಮೇಯರ್ ಶಿವಕುಮಾರ್, ಉಪಮೇಯರ್ ಡಾ.ರೂಪಾ, ಸ್ಥಳ: ನಂಜರಾಜ ಬಹದ್ದೂರ್ ಛತ್ರ, ಮಧ್ಯಾಹ್ನ 12.30ಕ್ಕೆ.

■ **ಶ್ರೀ ವ್ಯಾಸರಾಜಪುರ ಮಠ, ಸೋಸಲೆ (ಮುನಿತ್ರಮ ಪೀಠ), ವ್ಯಾಸತೀರ್ಥ ವಿದ್ಯಾಪೀಠ:** ಅಧಿಕ ಮಾಸದ ಪ್ರಯುಕ್ತ ಪ್ರತಿನಿತ್ಯ ಸಂಪೂರ್ಣ ರಾಮಾಯಣ ಪ್ರವಚನ ಯಜ್ಞ, ವಿದ್ವಾನ್ ಶ್ರೀಕಾಂತಾಚಾರ್ಯ ಕಳಸಾಪುರ ಅವರಿಂದ ಅಯೋಧ್ಯಾ ಕಾಂಡ ಕುರಿತು ಪ್ರವಚನ, ಸ್ಥಳ: ವಿದ್ಯಾಪೀಠ, ಸಂಜೆ 6ರಿಂದ 7ರವರೆಗೆ.

■ **ವ್ಯವಸ್ಥಾಪಕರು :** ಸಂಗೀತ ಸಾಮ್ರಾಟ್ ವಿಶ್ವಗಾಯಕ ಮಹಮದ್ ರಫೀ ಅವರ ಸ್ಮರಣೆ, ಮುಖ್ಯ ಅತಿಥಿಗಳು : ಹಿರಿಯ ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಉದ್ಯಮಿ ಜಗನ್ನಾಥ್ ಶೆಣೈ, ಹಿರಿಯ ಸುಗಮ ಸಂಗೀತ ಗಾಯಕಿ ಹೆಚ್.ಆರ್. ಲೀಲಾವತಿ, ಆಡಿಟರ್ ಟಿ.ಆರ್. ಹರೀಶ್ ಪ್ರಸಾದ್, ಕರ್ನಾಟಕ ರಾಜ್ಯ ಒಕ್ಕಲಿಗರ ಸಂಘದ ಕಾರ್ಯದರ್ಶಿ ಸಿ.ಜಿ. ಗಂಗಾಧರ್, ಗಾಯಕ ಡಾ. ನಟಶೇಖರ್, ಉದ್ಯಮಿ ರವಿಗೌಡ, ಡಾ. ಲಕ್ಷ್ಮೀದೇವಿ, ಡಾ. ಕೆ.ಎಸ್. ಮಂಜುನಾಥ್, ಸ್ಥಳ: ವಾಸುದೇವಾಚಾರ್ಯ ಭವನ, ನಾದಬ್ರಹ್ಮ ಸಂಗೀತ ಸಭಾ, ಸಂಜೆ 6ಕ್ಕೆ.

■ **ರೋಟರಿ ಕ್ಲಬ್ ಆಫ್ ಮೈಸೂರು ಸೌತ್ ವೆಸ್ಟ್, ಫ್ರೀಡಂ ಫ್ರಮ್ ಡಯಾಬಿಟಿಸ್ ಸಂಸ್ಥೆ :** ಡಾ. ಮಲ್ಲಾರ್ ಗಾನ್ಲ ಅವರಿಂದ ಮಧುಮೇಹದಿಂದ ಮುಕ್ತಿ ಹೊಂದಲು ಮಾರ್ಗದರ್ಶನ, ಸ್ಥಳ: ಐಡಿಯಲ್ ಜಾವಾ ರೋಟರಿ ಹಾಲ್, ಜೆಎಲ್‌ಬಿ ರಸ್ತೆ, ಸಂಜೆ 6 ರಿಂದ.

■ **ನ್ಯಾಷನಲ್ ರಿಯಲ್ ಎಸ್ಟೇಟ್ ಡೆವಲಪ್‌ಮೆಂಟ್ ಕೌನ್ಸಿಲ್:** ಎ ವಿಷನ್ ಬ್ರ್ಯಾಂಡ್ ಮೈಸೂರು ಮತ್ತು ಗ್ರೇಟರ್ ಮೈಸೂರು ಕುರಿತು ಚರ್ಚೆ, ಉಪಸ್ಥಿತರು: ಕ್ರೆಡಾಯ್ ಅಧ್ಯಕ್ಷ ಶ್ರೀಹರಿ ದ್ವಾರಕನಾಥ್, ಸಿಐಐ ಅಧ್ಯಕ್ಷ ಸ್ಯಾಮ್ ಚೆರಿಯನ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಛೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ ಅಧ್ಯಕ್ಷ ಕೆ.ಬಿ.ಲಿಂಗರಾಜು, ಐಜಿಬಿಐ ಮಾಜಿ ಅಧ್ಯಕ್ಷ ಶ್ರೀರಾಮ್, ಎಂಎಸ್‌ಎಂಇ ಕಾರ್ಯದರ್ಶಿ ಸುರೇಶ್‌ಕುಮಾರ್ ಜೈನ್, ಸ್ಥಳ: ಹೋಟೆಲ್ ಸದರನ್ ಸ್ಟಾರ್, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಇಂಜಿನಿಯರಿಂಗ್ ವಿದ್ಯಾವಿಕಾಸ, ಪ್ರಾಯೋಜಕರು–ವಿದ್ಯಾವಿಕಾಸ ಇಂಜಿನಿಯರಿಂಗ್ ಕಾಲೇಜ್, ಮೈಸೂರು, 6.40 ಪದಸಂಸ್ಕೃತಿ–ಪ್ರೊ. ಲಕ್ಷ್ಮೀನಾರಾಯಣ ಅರೋರಾ, 7.15 ಭಾವಗೀತೆಗಳು, 9.05 ವಸುಧೈವ ಕುಟುಂಬಕಂ– ಭಾರತ ಜಿ20 ಶೃಂಗಸಭೆ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 9.10 ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 10.00 ಮೇಲುಕೋಟೆ ಪಿ.ರಾಜಗೋಪಾಲ್ ಮತ್ತು ಶ್ರೀರಂಗಪಟ್ಟಣ ಎಂ.ಎನ್.ಗಣೇಶ್–ಯುಗಳ ನಾಗಸ್ವರ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ಅಂಬುಜಾ ಶ್ರೀಧರ್, 12.45 ಕಾದಂಬರಿ ವಿಹಾರ–ಡಾ.ಎಸ್.ಎಲ್. ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್ ಎಸ್.ಎಸ್., 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ–ಜಿ.ಕೆ.ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಎಂ.ಆರ್.ರಾಜಪ್ಪ– ಮೃದಂಗ, 4.00 ಮಹಿಳಾರಂಗ–ಯಶಸ್ವಿ ಹಿಮಾಲಯ ಚಾರಣ ಮುಗಿಸಿ ಬಂದ ದಾದಿಯರಾದ ಜಾನಕಿ, ಗೀತಾ ಹಾಗೂ ಸ್ಮಿತಾ ಡಿಸೋಜ ಅವರೊಂದಿಗೆ ಮಾತುಕತೆ, 4.30 ವೃತ್ತಿ ಮಾರ್ಗದರ್ಶನ–ಕಂಪನಿ ಸೆಕ್ರೆಟರಿ ಮತ್ತು ಚಾರ್ಟರ್ಡ್ ಅಕೌಂಟೆನ್ಸಿ ವಿಷಯಗಳಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಅಲೋಕ್ ಗಣನಾಥ್ ಅವರೊಂದಿಗೆ ಮಾತುಕತೆ, 6.50 ಕೃಷಿರಂಗ–ಕಿಸಾನ್‌ವಾಣಿ, ಸುಸ್ಥಿರ ಹೈನುಗಾರಿಕೆ ಕುರಿತು ದೀಪು ಗಣಪತಿ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಎನ್. ಕೇಶವಮೂರ್ತಿ, 9.30 ಗಾನ ಲಹರಿ, ಪ್ರಸ್ತುತಿ ಶ್ರೀಕಾಂತ ಕುಲಕರ್ಣಿ ಮತ್ತು ಮಾಯಾ ರಾಮನ್, 10.00 ಸಂಸತ್ತಿನ ಪ್ರಶ್ನೋತ್ತರ ಕಲಾಪದ ವರದಿ, 10.30 ಸವಿನೆನಪು

ಮೆಡಿಕಲ್ ಇನ್ಶೂರೆನ್ಸ್ ಮಾಡಿಸಿದವರಿಗೆ ಒಂದು ಎಚ್ಚರಿಕೆ

ಚಿಕಿತ್ಸೆ ಇನ್ಶೂರೆನ್ಸ್ ಕ್ಲೈಮ್ ಮಾಡುವುದಾಗಿ ದಾಖಲೆ ಪಡೆದು ಖಾಸಗಿ ಬ್ಯಾಂಕ್‌ನಲ್ಲಿ ಸಾಲ

ಮೈಸೂರು, ಜು.27–ಆಸ್ಪತ್ರೆಯಲ್ಲಿ ದಾಖಲಾಗಿದ್ದ ರೋಗಿಗಳ ಚಿಕಿತ್ಸೆಯ ಇನ್ಶೂರೆನ್ಸ್ ಕ್ಲೈಮ್ ಮಾಡುವುದಾಗಿ ತಿಳಿಸಿ, ಅವರ ವಿವರಗಳನ್ನು ಪಡೆದು ರೋಗಿಗಳ ಹೆಸರಲ್ಲೇ ಖಾಸಗಿ ಬ್ಯಾಂಕ್‌ನಿಂದ ಲೋನ್ ಪಡೆದಿರುವ ಘಟನೆ ಮೈಸೂರಿನ ಚಾಮುಂಡಿಪುರಂನಲ್ಲಿರುವ ರಾಮಕೃಷ್ಣ ಆಸ್ಪತ್ರೆಯಲ್ಲಿ ನಡೆದಿದೆ.

ಖಾಸಗಿ ಕಂಪನಿ ನೌಕರರಾದ ಶಾಂತವೇರಿ ಗೋಪಾಲಗೌಡನಗರದ ಎಂ.ಸಿ.ಕಾಂತ(31), ಮೈಸೂರು ತಾಲೂಕು ಗೆಜ್ಜಗಳ್ಳಿ ಸಿ.ಸಂತೋಷ್ (35), ನಂಜನಗೂಡು ತಾಲೂಕು ಕೆಂಪಿಸಿದ್ದನಹುಂಡಿಯ ಹೆಚ್.ಶಿವಣ್ಣ(36) ಹೆಸರಿನಲ್ಲಿ ಸಾಲ ಪಡೆದಿರುವುದಾಗಿ ದೂರು ದಾಖಲಾಗಿದೆ.

ವಿವರ: ಖಾಸಗಿ ಕಂಪನಿ ನೌಕರರಾದ ಇವರಿಗೆ ಕಂಪನಿ ಕಡೆಯಿಂದ ಹೆಲ್ತ್ ಇನ್ಶೂರೆನ್ಸ್ ಕಾರ್ಡ್ ನೀಡಲಾಗಿತ್ತು. 2022ರಲ್ಲಿ ಈ ಮೂವರು ರಾಮಕೃಷ್ಣ ಆಸ್ಪತ್ರೆಗೆ ದಾಖಲಾಗಿದ್ದರು. ಈ ಸಂದರ್ಭದಲ್ಲಿ ಇನ್ಶೂರೆನ್ಸ್ ಕಂಪನಿಯಿಂದ ಆಸ್ಪತ್ರೆಯ ಬಿಲ್ ಕ್ಲೈಮ್ ಮಾಡಬೇಕೆಂದು ಆಸ್ಪತ್ರೆಯಲ್ಲಿದ್ದ ಸಯ್ಯದ್ ಅಸದ್ ಅಹಮದ್ ಹಾಗೂ ಸಿಬ್ಬಂದಿ ಈ ಮೂವರಿಂದಲೂ ಆಧಾರ್, ಪಾನ್ ಕಾರ್ಡ್, ಹೆಲ್ತ್ ಕಾರ್ಡ್, ಕಂಪನಿ ಐಡಿ ಕಾರ್ಡ್ ಹಾಗೂ ಫೋಟೋಗಳನ್ನು ತಮ್ಮ ವಾಟ್ಸಾಪ್‌ಗೆ ಕಳುಹಿಸಿಕೊಂಡಿದ್ದಾರೆ. ನಂತರ ಇವರ ಮೊಬೈಲ್‌ಗೆ ಓಟಿಪಿ ನಂಬರ್‌ಗಳನ್ನೂ ಪಡೆದಿದ್ದಾರೆ.

ಇನ್ಶೂರೆನ್ಸ್ ಕಂಪನಿಯಿಂದ ಆಸ್ಪತ್ರೆಯ ಬಿಲ್ ಸಂದಾಯವಾಗಿತ್ತು. ಅದೇ ವೇಳೆ ಈ ನೌಕರರಿಂದ ಪಡೆದಿದ್ದ ದಾಖಲೆಗಳನ್ನಾಧರಿಸಿ ಮುಂಬೈ ಮೂಲದ ಲಿಕ್ವಿನ್ ಲೋನ್ ಕಂಪನಿಯಿಂದ ಎಂ.ಸಿ.ಕಾಂತ ಹೆಸರಲ್ಲಿ 1,17,730 ರೂ., ಸಿ.ಸಂತೋಷ್ ಹೆಸರಲ್ಲಿ 1,24,566 ರೂ. ಹಾಗೂ ಹೆಚ್.ಶಿವಣ್ಣ ಹೆಸರಲ್ಲಿ 1,17,446 ರೂ. ಸಾಲ ಪಡೆದು, ಅದನ್ನು ಹೈದರಾಬಾದ್‌ನಲ್ಲಿರುವ ಎವಿಐಎಸ್ ಆಸ್ಪತ್ರೆಯ ಖಾತೆಗೆ ಜಮಾ ಮಾಡಲಾಗಿತ್ತು.

ತಮ್ಮ ಸಿಬಿಲ್ ಸ್ಕೋರ್ ಕಡಿಮೆಯಾಗಿ ಓವರ್ ಡ್ಯೂ ತೋರಿಸುತ್ತಿದ್ದರಿಂದ ಅದರ ಬಗ್ಗೆ ಈ ನೌಕರರು ಪರಿಶೀಲನೆ ಮಾಡಿದಾಗ ತಮ್ಮ ಹೆಸರಲ್ಲಿ ಸಾಲ ಪಡೆದಿರುವುದು ಗೊತ್ತಾಗಿದೆ. ತಮ್ಮ ಹೆಸರಲ್ಲಿ ಲೋನ್ ಪಡೆದು ಓವರ್ ಡ್ಯೂ ಆಗಿರುವುದರಿಂದ ತಮಗೆ ಬೇರೆ ಕಂಪನಿಯಲ್ಲಿ ಕೆಲಸವೂ ಸಿಗುತ್ತಿಲ್ಲ. ಬ್ಯಾಂಕ್‌ನಲ್ಲಿ ಲೋನ್ ಕೂಡ ಸಿಗುತ್ತಿಲ್ಲ ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ಎಂ.ಸಿ.ಕಾಂತ ತಿಳಿಸಿದ್ದು, ರಾಮಕೃಷ್ಣ ಆಸ್ಪತ್ರೆಯವರು ಸಮಸ್ಯೆ ಇತ್ಯರ್ಥಪಡಿಸುವುದಾಗಿ ಕಾಲಹರಣ ಮಾಡಿದ್ದರಿಂದ ತಾವು ದೂರು ನೀಡಲು ತಡವಾಯಿತು ಎಂದಿರುವ ಅವರು, ತಮ್ಮ ಬಳಿ ದಾಖಲೆಗಳನ್ನು ಪಡೆದ ಸಯ್ಯದ್ ಅಸದ್ ಅಹಮದ್, ರಾಮಕೃಷ್ಣ ಆಸ್ಪತ್ರೆ ಮಂಡಳಿ, ಹೈದರಾಬಾದ್‌ನ ಎವಿಐಎಸ್ ಆಸ್ಪತ್ರೆ ಆಡಳಿತ ಮಂಡಳಿ ಮತ್ತು ತಮ್ಮ ಹೆಸರಲ್ಲಿ ಸಾಲ ನೀಡಿರುವ ಮುಂಬೈನ ಲಿಕ್ವಿಲ್ ಲೋನ್ ಕಂಪನಿ ವಿರುದ್ಧ ಕ್ರಮ ಕೈಗೊಳ್ಳುವಂತೆ ನೀಡಿದ ದೂರನ್ನು ಭಾರತೀಯ ದಂಡ ಸಂಹಿತೆ 406, 420, 34ರಡಿ ದಾಖಲಿಸಿಕೊಂಡಿರುವ ವಿದ್ಯಾರಣ್ಯಪುರಂ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಸೋಪ್, ಪೌಡರ್ ಮಾರುವ ನೆಪದಲ್ಲಿ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿ

ಕ್ರೈಂ ಬಾಕ್ಸ್



ಮೈಸೂರು,ಜು.27–ಸೋಪ್ ಪೌಡರ್ ಮಾರುವ ನೆಪದಲ್ಲಿ ಮನೆಗೆ ಬಂದ ಖದೀಮರು ಗೃಹಿಣಿಯ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾದ ಘಟನೆ ಮೈಸೂರಿನ ಮಂಚೇಗೌಡನಕೊಪ್ಪಲು 5ನೇ ಕ್ರಾಸ್‌ನಲ್ಲಿ ನಡೆದಿದೆ. ಅಲ್ಲಿನ ನಿವಾಸಿ ಜ್ಯೋತಿ (29) ಸರ ಕಳೆದುಕೊಂಡವರಾಗಿದ್ದು, ಜು.26ರಂದು ಬೆಳಗ್ಗೆ 11.15ರ ಸುಮಾರಿನಲ್ಲಿ ಇಬ್ಬರು ಯುವಕರು ಇವರ ಮನೆಗೆ ಬಂದು ಸೋಪ್ ಹಾಗೂ ಪೌಡರ್ ಖರೀದಿಸುವಂತೆ ಕೇಳಿದ್ದಾರೆ. ಮಗುವನ್ನು ಎತ್ತಿಕೊಂಡಿದ್ದ ಸುಗುಣ ಖರೀದಿಸಲು ನಿರಾಕರಿಸಿದಾಗ ಕುಡಿಯಲು ನೀರು ಕೊಡುವಂತೆ ಖದೀಮರು ಕೇಳಿದ್ದಾರೆ. ನೀರು ತರಲು ಅವರು ಮನೆಯೊಳಗೆ ಹೋಗುತ್ತಿದ್ದಂತೆಯೇ ಒಬ್ಬ ಅವರ ಮಾಂಗಲ್ಯ ಸರವನ್ನು ಕಿತ್ತುಕೊಂಡು ಓಡಿದ್ದಾನೆ. ಅಷ್ಟರಲ್ಲಿ ಸ್ವಲ್ಪ ದೂರದಲ್ಲೇ ಮತ್ತೋರ್ವ ಬೈಕ್ ಅನ್ನು ಸ್ಟಾರ್ಟಿಂಗ್‌ನಲ್ಲಿ ಇರಿಸಿಕೊಂಡಿದ್ದು, ಅದರಲ್ಲಿ ಕುಳಿತು ಖದೀಮರು ಪರಾರಿಯಾಗಿದ್ದಾರೆ.

ಮನೆ ಮುಂದೆ ನಿಲ್ಲಿಸಿದ್ದ ಐಷಾರಾಮಿ ಕಾರು ಕಳವು

ಮೈಸೂರು, ಜು.27–ಮನೆ ಮುಂದೆ ನಿಲ್ಲಿಸಿದ್ದ ಐಷಾರಾಮಿ ಕಾರನ್ನು ಕಳವು ಮಾಡಿರುವ ಘಟನೆ ಮೈಸೂರಿನ ಯಾದವಗಿರಿ 5ನೇ ಮುಖ್ಯ ರಸ್ತೆಯಲ್ಲಿ ನಡೆದಿದೆ. ಇಲ್ಲಿನ ನಿವಾಸಿ ಅಕೌಂಟೆಂಟ್ ಆಗಿರುವ ಬಿ.ಸತೀಶ್‌ರಾವ್(67) ಅವರು ತಮ್ಮ ಮಹೀಂದ್ರ ಎಕ್ಸ್‌ಯುವಿ–700 ಕಾರನ್ನು (ಕೆಎ 09 ಎಂಜಿ 2677) ಜು.25ರ ರಾತ್ರಿ ತಮ್ಮ ಮನೆ ಮುಂದೆ ನಿಲ್ಲಿಸಿದ್ದು, ಮರುದಿನ ಬೆಳಗ್ಗೆ ನೋಡಿದಾಗ ಕಾರು ಕಳವಾಗಿರುವುದು ಗೊತ್ತಾಗಿದೆ. ಈ ಸಂಬಂಧ ವಿವಿ ಪುರಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿಶೇಷಚೇತನರಿಗೆ ಕೃತಕ ಕಾಲುಗಳ ಜೋಡಣೆ



ಮೈಸೂರು,ಜು.27(ಪಿಎಂ)– ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ (ಎಸ್‌ವಿವೈಎಂ) ಸೇರಿದಂತೆ ವಿವಿಧ ಸಂಘಟನೆಗಳ ಸಂಯುಕ್ತಾಶ್ರಯದಲ್ಲಿ 148 ವಿಶೇಷಚೇತನರಿಗೆ ಕೃತಕ ಕಾಲುಗಳನ್ನು ಉಚಿತವಾಗಿ ವಿತರಣೆ ಮಾಡಲಾಯಿತು.

ಮೈಸೂರಿನ ಸಿಎಸ್ಐ ವೆಸ್ಲಿ ಮಹಾದೇವಾಲಯದ ಸಭಾಂಗಣದಲ್ಲಿ ಚೆನ್ನೈನ ಫ್ರೀಡಂ ಟ್ರಸ್ಟ್, ಕಾಲೇಸುವರಿ ಫೌಂಡೇಷನ್, ಡಾ.ಮಜೀದ್ ಫೌಂಡೇಷನ್, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಂಯುಕ್ತಾಶ್ರಯದಲ್ಲಿ ಮೈಸೂರು, ಕೊಡಗು ಹಾಗೂ ಚಾಮರಾಜನಗರ ಜಿಲ್ಲೆಗಳ ಫಲಾನುಭವಿಗಳಿಗೆ ಕೃತಕ ಕಾಲುಗಳನ್ನು ಜೋಡಣೆ, ವಿತರಣೆ ಮಾಡಲಾಯಿತು.

ಎಸ್‌ವಿವೈಎಂನ ಡೈವರ್ಸಿಟಿ ಅಂಡ್ ಇನ್‌ಕ್ಲೂಷನ್ ವಿಭಾಗದ ನಿರ್ದೇಶಕಿ ಎಸ್.ಆರ್.ದೀಪಶ್ರೀ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಫ್ರೀಡಂ ಟ್ರಸ್ಟ್ ವತಿಯಿಂದ 148 ಕೃತಕ ಕಾಲುಗಳನ್ನು ತಯಾರಿಸಿ, ಇಂದು ಫಲಾನುಭವಿಗಳಿಗೆ ಅಳವಡಿಸಲಾಗಿದೆ. ನಡೆಯುವ ತರಬೇತಿ ಸಹ ನೀಡಿದ್ದು, ಕೃತಕ ಕಾಲುಗಳನ್ನು ವಿತರಿಸುವ ಸಂಬಂಧ ಕಳೆದ ತಿಂಗಳು ವಿಕಲಚೇತನ ಫಲಾನುಭವಿಗಳಿಂದ ಅಳತೆ ತೆಗೆದುಕೊಳ್ಳಲಾಗಿತ್ತು ಎಂದು ತಿಳಿಸಿದರು.

ಈ ಕೃತಕ ಕಾಲುಗಳಿಗೆ ತಗಲುವ ಅಂದಾಜು 15 ಲಕ್ಷ ರೂ.ಗಳನ್ನು ಕಾಲೇಸುವರಿ ಫೌಂಡೇಷನ್ ಭರಿಸಿದೆ. ಈ ಯೋಜನೆಯ ಇತರ ಚಟುವಟಿಕೆಗಳ ವೆಚ್ಚಗಳನ್ನು ಡಾ.ಮಜೀದ್ ಫೌಂಡೇಷನ್ ಭರಿಸಿದೆ. ಎಸ್‌ವಿವೈಎಂನಲ್ಲಿ ನೋಂದಣಿ ಮಾಡಿಕೊಂಡಿದ್ದ ವಿಶೇಷಚೇತನರು ಈ ಉಚಿತ ಸೌಲಭ್ಯ ಪಡೆದಿದ್ದಾರೆ. ಇದರಲ್ಲಿ ಮೈಸೂರು ಜಿಲ್ಲೆಯವರೇ ಅತೀ ಹೆಚ್ಚು ಎಂದು ಮಾಹಿತಿ ನೀಡಿದರು.

ಸರಗೂರಿನ ವಿವೇಕಾನಂದ ಸ್ಮಾರಕ ಆಸ್ಪತ್ರೆ ವೈದ್ಯ ಡಾ.ಎಂ.ಆರ್.ಸೀತಾರಾಮ್, ಫ್ರೀಡಂ ಟ್ರಸ್ಟ್‌ನ ಸಲಹೆಗಾರ ರವಿ ಅಯ್ಯಂಗಾರ್, ಡಾ.ಮಜೀದ್ ಫೌಂಡೇಷನ್‌ನ ನಿರ್ದೇಶಕಿ ಡಾ.ಅಂಜು ಮಜೀದ್, ಎಸ್‌ವಿವೈಎಂನ ವಿಶೇಷಚೇತನರ ಪುನರ್‌ವಸತಿ ಕಾರ್ಯಕ್ರಮದ ಮೇಲ್ವಿಚಾರಣೆ ಅಧಿಕಾರಿ ರಾಮ್‌ಪ್ರಸಾದ್ ಸೇರಿದಂತೆ ಮತ್ತಿತರರು ಹಾಜರಿದ್ದರು.



ಮೈಸೂರಿನ ಶ್ರೀ ರಮಣ ಜ್ಞಾನ ಕೇಂದ್ರದ ಪ್ರಾರ್ಥನಾ ಸಭಾಂಗಣದಲ್ಲಿ ಭಗವಾನ್ ಶ್ರೀ ರಮಣ ಮಹರ್ಷಿಗಳ 143ನೇ ಜಯಂತಿ ಆಚರಿಸಲಾಯಿತು. ನಿವೃತ್ತ ಪ್ರಾಧ್ಯಾಪಕ ಪ್ರೊ. ಹೆಚ್.ಎಲ್.ಚಂದ್ರಶೇಖರ್ ಜ್ಯೋತಿ ಬೆಳಗುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು. ಈ ವೇಳೆ ಡಾ.ಚಂದನ, ಪಾಲಿಕೆ ಮಾಜಿ ಸದಸ್ಯ ಎಂ.ಡಿ.ಪಾರ್ಥಸಾರಥಿ, ಕೇಂದ್ರದ ಕಾರ್ಯದರ್ಶಿ ಆರ್.ಕೆ. ಗೀತಾಚರಣ್, ಟ್ರಸ್ಟಿ ಆರ್.ಜಿ.ರಾಘವೇಂದ್ರ, ಅಭಿಷೇಕ್, ಕೇಂದ್ರದ ವ್ಯವಸ್ಥಾಪಕ ಹೆಚ್.ಎಸ್.ಶಶಿಕುಮಾರ್ ಹಾಜರಿದ್ದರು.

ಮಣಿಪುರದಲ್ಲಿ ಮತ್ತೆ ಹಿಂಸಾಚಾರ; ಓರ್ವ ಸಾವು, ಮೂವರಿಗೆ ಗಾಯ

ಇಂಫಾಲ್: ಮಣಿಪುರದಲ್ಲಿ ಜನಾಂಗೀಯ ಹಿಂಸಾಚಾರ ಮುಂದುವರೆದಿದ್ದು, ಗುರುವಾರ ಎರಡು ಗುಂಪುಗಳ ನಡುವೆ ಹಲವು ಗಂಟೆಗಳ ಕಾಲ ನಡೆದ ಗುಂಡಿನ ಚಕಮಕಿಯಲ್ಲಿ ಒಬ್ಬರು ಸಾವನ್ನಪ್ಪಿ, ಮೂವರು ಗಾಯಗೊಂಡಿದ್ದಾರೆ.

ಇಂಫಾಲ್ ಕಣಿವೆಯ ಮೈತೆಯ್ ಪ್ರಾಬಲ್ಯದ ಬಿಷ್ಣುಪುರ್ ಜಿಲ್ಲೆ ಮತ್ತು ಬೆಟ್ಟಗಳಲ್ಲಿರುವ ಕುಕಿ ಪ್ರಾಬಲ್ಯದ ಚುರಾಚಂದ್‌ಪುರ ಜಿಲ್ಲೆಯ ಗಡಿಯಲ್ಲಿರುವ ಕಾಂಗ್ವೈನಲ್ಲಿ ಹಿಂಸಾಚಾರ ನಡೆದಿದೆ. ಇಂದು ಬೆಳಗ್ಗೆಯೇ ಹಿಂಸಾಚಾರ ಭುಗಿಲೆದ್ದಿದ್ದು, ಅದು ಮಧ್ಯಾಹ್ನದವರೆಗೂ ಮುಂದುವರೆಯಿತು.

ಹಲವು ಮನೆಗಳಿಗೂ ಬೆಂಕಿ ಹಚ್ಚಲಾಗಿದೆ ಎಂದು ವರದಿಯಾಗಿದ್ದು, ಸಾವು ನೋವಿನ ನಿಖರ ಸಂಖ್ಯೆ ಇನ್ನೂ



ತಿಳಿದು ಬಂದಿಲ್ಲ. ಸ್ಥಳೀಯ ಬುಡಕಟ್ಟು ನಾಯಕರ ವೇದಿಕೆ ಘಟನೆಯಲ್ಲಿ ಕುಕಿ–ಝೋ ಸಮುದಾಯದಿಂದ ಒಬ್ಬ ವ್ಯಕ್ತಿಯ ಸಾವು ಮತ್ತು ಇತರ ಮೂವರಿಗೆ ಗಾಯಗಳಾಗಿರುವುದನ್ನು ದೃಢೀಕರಿಸುವ ಹೇಳಿಕೆ ನೀಡಿದೆ.

ಹಿಂಸಾಚಾರದಲ್ಲಿ ಮೃತಪಟ್ಟ ವ್ಯಕ್ತಿಯನ್ನು ಲುನ್ ಮಿಂಥಾಂಗ್(30) ಎಂದು ಗುರುತಿಸಲಾಗಿದ್ದು, ಗಾಯಗೊಂಡವರನ್ನು ಜಂಗ್‌ಖೋಲೆನ್ ಹಾಕಿಪ್(28), ಕಮ್ಮಿನ್‌ಲಾಲ್(32) ಮತ್ತು ತಂಜಾಹಾವೊ (34) ಎಂದು ಗುರುತಿಸಲಾಗಿದೆ ಎಂದು ಸ್ಥಳೀಯ ಬುಡಕಟ್ಟು ನಾಯಕರ ವೇದಿಕೆ ಐಟಿಎಲ್‌ಎಫ್ ಪ್ರಕಟಣೆಯಲ್ಲಿ ತಿಳಿಸಿದೆ. ಇಂದು ಬೆಳಗಿನ ಜಾವ 4 ಗಂಟೆ ಸುಮಾರಿಗೆ ಹಿಂಸಾಚಾರ ಭುಗಿಲೆದ್ದಿದ್ದು, ಇದು ಬಹುತೇಕ ಇಡೀ ದಿನ ಮುಂದುವರೆಯಿತು ಎಂದು ಐಟಿಎಲ್‌ಎಫ್ ತಿಳಿಸಿದೆ. ದಾಳಿಯಲ್ಲಿ ಬಾಂಬ್‌ಗಳನ್ನೂ ಬಳಸಲಾಗಿದೆ ಎಂದು ಐಟಿಎಲ್‌ಎಫ್ ಆರೋಪಿಸಿದೆ.

ಪ್ರಕರಣ ಸಿಬಿಐಗೆ ವಹಿಸಿದ ಕೇಂದ್ರ

ನವದೆಹಲಿ: ಮಣಿಪುರದಲ್ಲಿ ಗುಂಪೊಂದು ಇಬ್ಬರು ಮಹಿಳೆಯರ ಬೆತ್ತಲೆ ಮೆರವಣಿಗೆ ನಡೆಸಿ, ಅವರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಪ್ರಕರಣವನ್ನು ಸಿಬಿಐ ತನಿಖೆ ನಡೆಸಲಿದೆ ಮತ್ತು ರಾಜ್ಯದ ಹೊರಗೆ ಪ್ರಕರಣದ ವಿಚಾರಣೆ ನಡೆಸಲು ಸರ್ಕಾರ ಕೋರಲಿದೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ನೆರೆಯ ಅಸ್ಸಾಂನ ನ್ಯಾಯಾಲಯದಲ್ಲಿ ಈ ಪ್ರಕರಣದ ವಿಚಾರಣೆ ನಡೆಸಲಾಗುವುದು ಎಂದು ಅವರು ಹೇಳಿದ್ದಾರೆ. ದೇಶಾದ್ಯಂತ ತೀವ್ರ ಆಕ್ರೋಶಕ್ಕೆ ಕಾರಣವಾಗಿದ್ದ ಮತ್ತು ಪ್ರತಿಪಕ್ಷಗಳಿಂದ ತೀವ್ರ ಪ್ರತಿಭಟನೆಗೆ ಕಾರಣವಾಗಿದ್ದ ಮಹಿಳೆಯರ ಬೆತ್ತಲೆ ಮೆರವಣಿಗೆ ಪ್ರಕರಣವನ್ನು ಕೇಂದ್ರ ಗೃಹ ಸಚಿವಾಲಯ ಸಿಬಿಐಗೆ ವಹಿಸಿದೆ ಎಂದು ಮೂಲಗಳು ತಿಳಿಸಿವೆ.

ಕೇಂದ್ರ ಗೃಹ ಸಚಿವಾಲಯವು ಮೈಟಿ ಮತ್ತು ಕುಕಿ ಎರಡೂ ಗುಂಪುಗಳೊಂದಿಗೆ ಸಂಪರ್ಕದಲ್ಲಿದೆ ಮತ್ತು ಮಣಿಪುರದಲ್ಲಿ ಸಹಜ ಸ್ಥಿತಿ ಪುನಃ ಸ್ಥಾಪಿಸಲು ಮಾತುಕತೆ ಮುಂದುವರಿದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರತಿಪಕ್ಷಗಳ ಗದ್ದಲ; ಲೋಕಸಭೆ ಕಲಾಪ ಮುಂದೂಡಿಕೆ

ನವದೆಹಲಿ, ಜು.27– ಮಣಿಪುರದಲ್ಲಿ ನಡೆಯುತ್ತಿರುವ ಹಿಂಸಾಚಾರದ ಕುರಿತು ವಿರೋಧ ಪಕ್ಷಗಳ ಸದಸ್ಯರ ನಿರಂತರ ಪ್ರತಿಭಟನೆಯ ನಡುವೆಯೇ ಲೋಕಸಭೆಯ ಕಲಾಪವನ್ನು ಗುರುವಾರ ದಿನದ ಮಟ್ಟಿಗೆ ಮುಂದೂಡಲಾಯಿತು.

ಸದನದಲ್ಲಿ ಪ್ರಧಾನಿಯವರ ಉಪಸ್ಥಿತಿಗೆ ಆಗ್ರಹಿಸಿ ಪ್ರತಿಪಕ್ಷದ ಸದಸ್ಯರು ಘೋಷಣೆಗಳನ್ನು ಕೂಗುತ್ತಾ, ಫಲಕಗಳನ್ನು ಪ್ರದರ್ಶಿಸಿದರು. ಇದರ ನಡುವೆಯೇ ಸದನವು ಸಂಕ್ಷಿಪ್ತ ಚರ್ಚೆಗಳ ನಂತರ ಎರಡು ಮಸೂದೆ ಗಳನ್ನು ಅಂಗೀಕರಿಸಿತು. ಬಳಕೆಯಲ್ಲಿಲ್ಲದ ಕಾನೂನು ಗಳನ್ನು ರದ್ದುಗೊಳಿಸುವ ಜನ ವಿಶ್ವಾಸ (ನಿಬಂಧನೆಗಳ) ತಿದ್ದುಪಡಿ ಕಾಯ್ದೆಯನ್ನು ಲೋಕಸಭೆಯಲ್ಲಿ ಅಂಗೀಕರಿಸಲಾಯಿತು.

ಮಣಿಪುರ ವಿಚಾರವಾಗಿ ಪ್ರತಿಪಕ್ಷಗಳು ಬಿಗಿಪಟ್ಟು ಹಿಡಿದಿದ್ದು, ಸದನವನ್ನು ಮೂರು ಬಾರಿ ಮುಂದೂಡಲು ಕಾರಣವಾಯಿತು. ಮಧ್ಯಾಹ್ನ 2 ಗಂಟೆಗೆ ಕಲಾಪ ಮತ್ತೆ ಆರಂಭವಾದಾಗ, ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಸರ್ಕಾರದ ವಿದೇಶಿ ವ್ಯವಹಾರಗಳ ಕುರಿತು ಹೇಳಿಕೆ ನೀಡಿದರು. ಜೈಶಂಕರ್ ಹೇಳಿಕೆಗೆ ಪ್ರತಿಪಕ್ಷಗಳು ಅಡ್ಡಿಪಡಿಸಿದ್ದಕ್ಕೆ ಕೇಂದ್ರ ಸಚಿವ ಪಿಯೂಷ್ ಗೋಯಲ್ ಮತ್ತು ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ನಡುವೆ ವಾಗ್ವಾದ ನಡೆಯಿತು.

ಜೈಶಂಕರ್ ಹೇಳಿಕೆಯ ನಂತರ, ಚೌಧರಿ ಅವರು ಪ್ರಶ್ನೆಯೊಂದನ್ನು ಕೇಳಲು ಮುಂದಾದರು. ಈ ವೇಳೆ ಗೋಯಲ್ ಎದ್ದುನಿಂತು, ವಿದೇಶಾಂಗ ಸಚಿವರ ಹೇಳಿಕೆಗೆ ಅಡ್ಡಿಪಡಿಸಿದ್ದನ್ನು ವಿರೋಧಿಸಿ, ಕಾಂಗ್ರೆಸ್ ನಾಯಕನಿಗೆ ಮಾತನಾಡಲು ಬಿಡುವುದಿಲ್ಲ ಎಂದು ಹೇಳಿದರು.

ಇದೇ ವಿಚಾರವಾಗಿ ಸರ್ಕಾರ ಮತ್ತು ಪ್ರತಿಪಕ್ಷಗಳ ನಡುವೆ ಮಾತಿನ ಚಕಮಕಿ ಮುಂದುವರೆಯಿತು. ಮಣಿಪುರ ಹಿಂಸಾಚಾರದ ಕುರಿತು ಹಲವಾರು ವಿರೋಧ ಪಕ್ಷಗಳ ಸದಸ್ಯರು ಘೋಷಣೆಗಳನ್ನು ಕೂಗುತ್ತಲೇ ಇದ್ದುದರಿಂದ ಸದನವನ್ನು 20 ನಿಮಿಷಗಳ ಕಾಲ ಮುಂದೂಡಲಾಯಿತು. ಸದನವನ್ನು ಮುಂದೂಡುವ ಮುನ್ನವೇ ಕಾಂಗ್ರೆಸ್ ಸದಸ್ಯರು ಹರಿದ ಕಾಗದಗಳನ್ನು ಸ್ಪೀಕರ್ ಕುರ್ಚಿಯತ್ತ ಎಸೆದರು. ಮಧ್ಯಾಹ್ನ 3 ಗಂಟೆಗೆ ಸದನ ಮತ್ತೆ ಸಭೆ ಸೇರಿದಾಗ ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಶಿ ಘಟನೆಯನ್ನು ಪ್ರಸ್ತಾಪಿಸಿ, ಸದಸ್ಯರನ್ನು ಹೆಸರಿಸುವಂತೆ ಸ್ಪೀಕರ್ ಅನ್ನು ಒತ್ತಾಯಿಸಿದರು. ಇದರ ನಡುವೆಯೇ, ಜನ ವಿಶ್ವಾಸ್ (ನಿಬಂಧನೆಗಳ ತಿದ್ದುಪಡಿ) ಮಸೂದೆಯನ್ನು ಮಂಡಿಸಲಾಯಿತು.

ಮಸೂದೆ ಕುರಿತಾದ ತಮ್ಮ ಆರಂಭಿಕ ಹೇಳಿಕೆಯಲ್ಲಿ ಗೋಯಲ್, ಪ್ರತಿಭಟನೆಯ ಸಂಕೇತವಾಗಿ ಕಪ್ಪು ಬಟ್ಟೆ ಧರಿಸಿದ್ದ ವಿಪಕ್ಷ ಸದಸ್ಯರ ವಿರುದ್ಧ ವಾಗ್ದಾಳಿ ನಡೆಸಿದರು. ಅವರು ತಮ್ಮ ಕಪ್ಪು ಕೃತ್ಯಗಳನ್ನು ತಮ್ಮ ಉಡುಪಿನ ಹಿಂದೆ ಮರೆಮಾಡಲು ಪ್ರಯತ್ನಿಸುತ್ತಿದ್ದಾರೆ ಎಂದರು. ಜನಾಂಗೀಯ ಕಲಹ ಪೀಡಿತ ಮಣಿಪುರದ ಪರಿಸ್ಥಿತಿಯ ಬಗ್ಗೆ ಪ್ರಧಾನಿ ಸದನದಲ್ಲಿ ಹೇಳಿಕೆ ನೀಡಬೇಕು ಎಂದು ಒತ್ತಾಯಿಸಿ ವಿರೋಧ ಪಕ್ಷದ ಸದಸ್ಯರು ಕಪ್ಪು ಬಟ್ಟೆ ಧರಿಸಿ ಪ್ರತಿಭಟನೆ ಮುಂದುವರಿಸಿದ್ದರಿಂದ, ಬೆಳಗ್ಗೆ ಲೋಕಸಭೆ ಕಲಾಪವನ್ನು ಮಧ್ಯಾಹ್ನ 2 ಗಂಟೆಗೆ ಮುಂದೂಡಲಾಯಿತು.

ಅಯೋಧ್ಯೆಯಲ್ಲಿ ಶ್ರೀರಾಮನ ವಿಗ್ರಹ ಪ್ರತಿಷ್ಠಾಪನೆ

ಪ್ರಧಾನಿ ಮೋದಿಗೆ ಔಪಚಾರಿಕ ಆಹ್ವಾನ ನೀಡಿದ ಟ್ರಸ್ಟ್



ಅಯೋಧ್ಯೆ,ಜು.27–ಉತ್ತರಪ್ರದೇಶದ ಅಯೋಧ್ಯೆಯ ರಾಮಜನ್ಮಭೂಮಿಯಲ್ಲಿ ನಿರ್ಮಿಸಲಾಗುತ್ತಿರುವ ಭವ್ಯ ರಾಮಮಂದಿರ ನಿರ್ಮಾಣ ಕಾರ್ಯ 2024ರಲ್ಲಿ ಪೂರ್ಣಗೊಳ್ಳುವ ಸಾಧ್ಯತೆ ಇದೆ. ಮಂದಿರದ ಗರ್ಭ ಗುಡಿಯಲ್ಲಿ ಶ್ರೀರಾಮನ ವಿಗ್ರಹದ ಪ್ರತಿಷ್ಠಾಪನೆ ಸಮಾರಂಭಕ್ಕೆ ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಪ್ರಧಾನಿ ನರೇಂದ್ರ ಮೋದಿಯವರಿಗೆ ಔಪಚಾರಿಕ ಆಹ್ವಾನವನ್ನು ಕಳುಹಿಸಿದೆ.

ಈ ಸಮಾರಂಭವು ಮುಂದಿನ ವರ್ಷದ ಜನವರಿ ತಿಂಗಳಲ್ಲಿ ನಡೆಯಲಿದೆ ಮತ್ತು ಸುಮಾರು 10,000 ಅತಿಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ನಿರೀಕ್ಷೆಯಿದೆ.

ರಾಮಮಂದಿರ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ಮಾತನಾಡಿ, ನಾವು ಜ.15 ಮತ್ತು 24ರ ನಡುವೆ ಕಾರ್ಯಕ್ರಮವನ್ನು ನಡೆಸಲು ದಿನಾಂಕಗಳನ್ನು ಗೊತ್ತು ಮಾಡಿದ್ದೇವೆ. ಆದರೂ, ಈ ಪೈಕಿ ನಿಖರವಾದ ದಿನಾಂಕವನ್ನು ಮೋದಿ ನಿರ್ಧರಿಸಲಿದ್ದಾರೆ ಎಂದರು.

ಟ್ರಸ್ಟ್‌ನ ಅಧ್ಯಕ್ಷ ಮಹಂತ್ ನೃತ್ಯ ಗೋಪಾಲ್ ದಾಸ್ ಅವರ ಸಹಿಯನ್ನು ಹೊಂದಿರುವ ಆಮಂತ್ರಣ ಪತ್ರದಲ್ಲಿ, ಪ್ರಧಾನ ಮಂತ್ರಿಗಳ ಉಪಸ್ಥಿತಿಯು ಜಾಗತಿಕ ಮಟ್ಟದಲ್ಲಿ ಭಾರತದ ಖ್ಯಾತಿಯನ್ನು ಹೆಚ್ಚಿಸುತ್ತದೆ. ಇಂತಹ ಭವ್ಯ ಸಮಾರಂಭದಲ್ಲಿ ಭದ್ರತಾ ಏಜೆನ್ಸಿಗಳು ಫೂಲ್‌ಪ್ರೂಫ್, ಅತಿಥಿ–ಆಧಾರಿತ ಭದ್ರತಾ ಉಪಕರಣವನ್ನು ರೂಪಿಸಿವೆ ಎಂದು ಹೇಳಲಾಗಿದೆ. ಅಯೋಧ್ಯೆ ಆಡಳಿತ ಮಂಡಳಿ ಭದ್ರತಾ ಏಜೆನ್ಸಿಗಳೊಂದಿಗೆ ಸಹಕರಿಸುತ್ತಿದೆ. ಕಾರ್ಯಕ್ರಮಕ್ಕೆ ಅಪಾರ ಸಂಖ್ಯೆಯ ಭಕ್ತರು ಆಗಮಿಸುವ ಸಾಧ್ಯತೆಯಿದ್ದು, ಯಾವುದೇ ತೊಂದರೆಯಾಗದಂತೆ ಕಾರ್ಯಕ್ರಮವನ್ನು ಏರ್ಪಡಿಸಬೇಕಿದೆ. ಈ ವರ್ಷದ ಡಿಸೆಂಬರ್ ವೇಳೆಗೆ ದೇಗುಲದ ನೆಲ ಅಂತಸ್ತಿನ ಕಾರ್ಯವನ್ನು ಪೂರ್ಣಗೊಳಿಸಲು ದೇವಸ್ಥಾನದ ಟ್ರಸ್ಟ್ ಅಗತ್ಯ ಕ್ರಮ ಕೈಗೊಂಡಿದೆ. ಈ ಗುರಿಯನ್ನು ಸಾಧಿಸಲು, ಹಗಲು ರಾತ್ರಿಯೆನ್ನದೆ ಕೆಲಸ ನಡೆಯುತ್ತಿದೆ. ದೇವಾಲಯದ ಆವರಣದಲ್ಲಿ 550ರಿಂದ ಸರಿಸುಮಾರು 1,600 ಕಾರ್ಮಿಕರು ಮತ್ತು ತಂತ್ರಜ್ಞರು ಕೆಲಸ ಮಾಡುತ್ತಿದ್ದಾರೆ.

ಕೊವೈ ಕೇರ್ ಹಿರಿಯರಿಂದ ಕಾರ್ಗಿಲ್ ಹೀರೋಗಳಿಗೆ ನಮನ



ಮೈಸೂರಿನ ಶಾರದಾದೇವಿನಗರದಲ್ಲಿರುವ ಕೊವೈ ಕೇರ್ ತಪೋವನ್ ಸೋಲೇಸ್ ಅಪಾರ್ಟ್‌ಮೆಂಟ್ (ನಿವೃತ್ತ ಸಮುದಾಯ) ನಲ್ಲಿ ಗುರುವಾರ ಕಾರ್ಗಿಲ್ ವಿಜಯ್ ದಿವಸ್ ಆಚರಿಸಲಾಯಿತು. ಇಲ್ಲಿರುವ ಹಿರಿಯ ನಾಗರಿಕರು ಕ್ಯಾಂಡಲ್ ಬೆಳಗಿಸಿ, ಕಾರ್ಗಿಲ್ ವೀರರಿಗೆ ನಮನ ಸಲ್ಲಿಸಿದರು.

ಇಡಿ ನಿರ್ದೇಶಕ ಸಂಜಯ್ ಮಿಶ್ರಾ ಸೇವಾವಧಿ ಸೆ.15ರವರೆಗೆ ವಿಸ್ತರಣೆ

ನವದೆಹಲಿ, ಜು.27– ಜಾರಿ ನಿರ್ದೇಶನಾಲಯ(ಇಡಿ)ದ ನಿರ್ದೇಶಕ ಸಂಜಯ್ ಕುಮಾರ್ ಮಿಶ್ರಾ ಅವರ ಅಧಿಕಾರಾವಧಿಯನ್ನು ಗುರುವಾರ ಸುಪ್ರೀಂ ಕೋರ್ಟ್ ಸೆ.15, 2023ರವರೆಗೆ ವಿಸ್ತರಿಸಿದೆ.

ಮಿಶ್ರಾ ಅಧಿಕಾರಾವಧಿ ವಿಸ್ತರಣೆಗೆ ಅನುಮತಿ ನೀಡಿದ ನ್ಯಾಯಮೂರ್ತಿ ಬಿ.ಆರ್. ಗವಾಯಿ ನೇತೃತ್ವದ ತ್ರಿಸದಸ್ಯ ಪೀಠ, ಇದೇ ಕೊನೆ, ಇನ್ನು ಮುಂದೆ ಯಾವುದೇ ವಿಸ್ತರಣೆ ಇಲ್ಲ ಎಂದು ಸ್ಪಷ್ಟಪಡಿಸಿದೆ.

ಮಿಶ್ರಾ ಅವರು ಸೆಪ್ಟೆಂಬರ್ 15–16ರ ಮಧ್ಯರಾತ್ರಿವರೆಗೆ ಮಾತ್ರ ಇಡಿ ನಿರ್ದೇಶಕರಾಗಿರಲಿದ್ದಾರೆ ಎಂದು ನ್ಯಾಯಮೂರ್ತಿ ಗವಾಯಿ ಹೇಳಿದ್ದಾರೆ. ವಿಚಾರಣೆಯ ಸಂದರ್ಭದಲ್ಲಿ, ಸುಪ್ರೀಂಕೋರ್ಟ್ ಮಿಶ್ರಾ ಅವರ ಅವಧಿಯನ್ನು ಏಕೆ ವಿಸ್ತರಿಸಬೇಕು? ಎಂದು ಕೇಂದ್ರ ಸರ್ಕಾರವನ್ನು ಪ್ರಶ್ನಿಸಿತು ಮತ್ತು ಪ್ರಸ್ತುತ ಮುಖ್ಯಸ್ಥರನ್ನು ಹೊರತುಪಡಿಸಿ ಇಡೀ ಇಲಾಖೆ 'ಅಸಮರ್ಥರಿಂದ ತುಂಬಿದೆಯೇ' ಎಂದು ಕಿಡಿಕಾರಿದೆ. ನಿಮ್ಮ ಇಡೀ ಇಲಾಖೆಯು ಅಸಮರ್ಥ ವ್ಯಕ್ತಿಗಳಿಂದ ತುಂಬಿದೆ ಮತ್ತು ನಿಮ್ಮ ಇಲಾಖೆಯು ಒಬ್ಬನೇ ಒಬ್ಬ ಸಮರ್ಥ ವ್ಯಕ್ತಿಯನ್ನು ಮಾತ್ರ ಹೊಂದಿದೆ. ಆ ಒಬ್ಬ ವ್ಯಕ್ತಿಯಿಲ್ಲದೆ ನೀವು ಕಾರ್ಯನಿರ್ವಹಿಸಲು ಸಾಧ್ಯವಿಲ್ಲ ಎಂಬ ಅಸಹಾಯಕತೆ ತೋರಿಸುತ್ತಿಲ್ಲವೇ. ಇದು ಇಡಿ ಬಲವನ್ನು ಕುಗ್ಗಿಸುವುದಿಲ್ಲವೇ. ಉದಾಹರಣೆಗೆ ನಾನು ಸಿಜೆಐ ಆಗಿದ್ದೇನೆ ಮತ್ತು ಮುಂದುವರಿಯಲು ನನಗೆ ಸಾಧ್ಯವಾಗುತ್ತಿಲ್ಲ ಎಂದಾಗ ಸುಪ್ರೀಂಕೋರ್ಟ್ ಮುಚ್ಚಿ ಹೋಗುತ್ತದೆಯೇ ಎಂದು ನ್ಯಾಯಮೂರ್ತಿ ಗವಾಯಿ ಅವರು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರನ್ನು ಪ್ರಶ್ನಿಸಿದರು.



ಜು.11ರಂದು ಮಿಶ್ರಾ ಅವಧಿ ವಿಸ್ತರಣೆ "ಕಾನೂನು ಬಾಹಿರ" ಎಂದು ಸುಪ್ರೀಂ ಕೋರ್ಟ್ ಘೋಷಿಸಿದ ನಂತರ, ಅವರ ಅಧಿಕಾರಾವಧಿಯನ್ನು ಅ.15ರವರೆಗೆ ವಿಸ್ತರಿಸುವಂತೆ ಕೋರಿ ಕೇಂದ್ರ ಸರ್ಕಾರ ಅರ್ಜಿ ಸಲ್ಲಿಸಿದೆ. ಮುಂದೆ ಈ ಸಂಬಂಧ ಯಾವುದೇ ಅರ್ಜಿಗಳನ್ನು ಕೋರ್ಟ್ ಪರಿಗಣಿಸುವುದಿಲ್ಲ ಎಂದು ಸುಪ್ರೀಂ ಪೀಠ ಸ್ಪಷ್ಟಪಡಿಸಿದೆ.

ಇಡಿ ಪರ ವಾದ ಮಂಡಿಸಿದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ. ರಾಜು, 'ಕೆಲವು ನೆರೆಯ ರಾಷ್ಟ್ರಗಳು, ಭಾರತದ ಎಫ್‌ಎಟಿಎಫ್‌ನ 'ಗ್ರೇ ಲಿಸ್ಟ್'ಗೆ ತರಬೇಕೆಂದು ಬಯಸುತ್ತಿವೆ. ಆದ್ದರಿಂದ ಇಡಿ ಮುಖ್ಯಸ್ಥರಾಗಿ ಮಿಶ್ರಾ ಮುಂದುವರೆಯುವ ಅಗತ್ಯ ಇದೆ' ಎಂದು ಹೇಳಿದರು.

ಸುಧಾಮೂರ್ತಿ ಆಸ್ತಿ ಜಗದಗಲ, ತಿಳಿವಳಿಕೆ ಚಮಚದಗಲ: ಟೀಕೆ



ಬೆಂಗಳೂರು, ಜು.27– ನಾನ್ ವೆಜ್ ವಿಚಾರಕ್ಕೆ ಸಂಬಂಧಿಸಿದಂತೆ ಇನ್ಫೋಸಿಸ್ ಪ್ರತಿಷ್ಠಾನದ ಅಧ್ಯಕ್ಷೆ ಸುಧಾಮೂರ್ತಿ ಅವರು ನೀಡಿರುವ ಹೇಳಿಕೆ ಇದೀಗ ವ್ಯಾಪಕ ಚರ್ಚೆಗೆ ಕಾರಣವಾಗಿದ್ದು, ಸುಧಾಮೂರ್ತಿ ಅವರ ಆಸ್ತಿ ಜಗದಗಲ, ತಿಳುವಳಿಕೆ ಚಮಚದಗಲ ಎಂದು ನಟ ಚೇತನ್ ಟೀಕಿಸಿದ್ದಾರೆ.

ಸುಧಾಮೂರ್ತಿಯವರು ಅತಿಯಾದ ಬಿಲ್ಡಪ್‌ನಿಂದ ಗುರುತಿಸಲ್ಪಟ್ಟ ಮತ್ತು ಅನರ್ಹವಾಗಿ ಗೌರವಿಸಲ್ಪಟ್ಟ ಸಾರ್ವಜನಿಕ ವ್ಯಕ್ತಿ. ಅವರು ತಮ್ಮ ಸೀಮಿತ, ಮಡಿವಂತಿಕೆ ಚಿಂತನೆಯನ್ನು ಬಹಿರಂಗಪಡಿಸುವ ಹೇಳಿಕೆಗಳನ್ನು ನಿರಂತರವಾಗಿ ಮಾಡುತ್ತಾರೆ ಎಂದು ಚೇತನ್ ಫೇಸ್‌ಬುಕ್‌ನಲ್ಲಿ ಬರೆದುಕೊಂಡಿದ್ದಾರೆ.

ಸುಧಾಮೂರ್ತಿಯವರು ಹೆಚ್ಚು ಮಾತನಾಡಬೇಕು, ಅವರ ಆಸ್ತಿ ಜಗದಗಲ, ತಿಳಿವಳಿಕೆ ಚಮಚದಗಲ ಎಂದು ಚೇತನ್ ಫೇಸ್‌ಬುಕ್‌ನಲ್ಲಿ ಬರೆದುಕೊಂಡಿದ್ದಾರೆ.

ತಾವು ವಿದೇಶಕ್ಕೆ ಹೋಗುವಾಗ ತಮಗೆ ಬೇಕಾದ ಊಟ ತಿಂಡಿ ರೆಡಿ ಮಾಡಿಕೊಂಡು ಬ್ಯಾಗ್‌ನಲ್ಲಿ ಹಾಕಿಕೊಂಡು ಹೋಗುತ್ತೇನೆ. ನಾನು ಶುದ್ಧ ಸಸ್ಯಾಹಾರಿ; ಮೊಟ್ಟೆ, ಈರುಳ್ಳಿ, ಬೆಳ್ಳುಳ್ಳಿ ಕೂಡ ಸೇವಿಸುವುದಿಲ್ಲ. ಹೊರಗೆ ಹೋದರೆ ಶುದ್ಧ ಸಸ್ಯಾಹಾರಿ ಹೋಟೇಲ್‌ನ್ನು ಹುಡುಕುತ್ತೇನೆ, ಸಸ್ಯಾಹಾರಿ, ಮಾಂಸಾಹಾರಿ ಅಡುಗೆಗಳಿಗೆ ಒಂದೇ ಸ್ಪೂನ್ ಬಳಸಿದರೆ ಎಂಬ ಆತಂಕ. ಹೀಗಾಗಿ ವಿದೇಶಕ್ಕೆ ಹೋಗುವಾಗ ಸ್ಪೂನ್ ಜೊತೆಗೆ ಒಯ್ಯುತ್ತೇನೆ ಎಂದು ಸುಧಾಮೂರ್ತಿ ಹೇಳಿದ್ದರು.

ದೊಡ್ಡಾಸ್ಪತ್ರೆಗೆ ಬಂದರೆ ಇನ್ನೂ ನೋವೆ...!

ಎಲ್ಲಾ ಟೆಸ್ಟ್ ಹೊರಗಡೆ ಮಾಡಿಸಬೇಕು; ಇಷ್ಟೆಲ್ಲಾ ಮಾಡಿಸಿ ತಂದರೆ ವೈದ್ಯರೇ ಮಾಯ!



"ನಮ್ಮ ತಾಯಿಯ ಚಿಕಿತ್ಸೆಗೆಂದು ಕೆ.ಆರ್.ನಗರದಿಂದ ಬಂದಿದ್ದೇವೆ. ಇಲ್ಲಿ ವೈದ್ಯರನ್ನು ಸಂಪರ್ಕಿಸಿದಾಗ ಸ್ಕ್ಯಾನಿಂಗ್ ಮಾಡಲು ಹೇಳಿದರು. ಹೊರ ರೋಗಿ ಎಂಬ ಕಾರಣಕ್ಕೆ ಒಂದು ವಾರ ಬಿಟ್ಟು ಬರುವಂತೆ ಬರೆದು ಕಳುಹಿಸಿದರು. ದಿಕ್ಕೇ ತೋಚದಂತಾಯಿತು. ತಕ್ಷಣ ನನ್ನ ತಮ್ಮನಿಗೆ ಕಾಲ್ ಮಾಡಿ ವಿಷಯ ತಿಳಿಸಿದಾಗ, ಪರಿಚಯಸ್ಥರ ಮೂಲಕ ಸ್ಕ್ಯಾನಿಂಗ್ ಮಾಡಿಸಲಾಯಿತು. ಹೀಗೆ ಪ್ರಭಾವ ಇದ್ದರೆ ಮಾತ್ರ ಇಲ್ಲಿ ಚಿಕಿತ್ಸೆ. ಇಲ್ಲಿ ಹೇಳೋರು, ಕೇಳೋರು ಯಾರೂ ಇಲ್ಲ. ಅವರು ಮಾಡಿದ್ದೇ ನಿಯಮ. –ರಮೇಶ್.



"ತಿಂಗಳ ಹಿಂದೆ ನಾನು ಇಲ್ಲಿಗೆ ಗರ್ಭಕೋಶದ ಚಿಕಿತ್ಸೆಗೆಂದು ಬಂದಿದ್ದೆ. ವೈದ್ಯರಿಗಿಂತ ನರ್ಸ್, ಆಯಾ ಸಿಬ್ಬಂದಿಗಳ ಹಾವಳಿ ಜಾಸ್ತಿಯಾಗಿದೆ. 100 ರೂ. ಕೊಟ್ಟರೆ ಚಿಕಿತ್ಸೆ ನಾಜೂಕಾಗಿ ಸಾಗುತ್ತದೆ. ದುಡ್ಡು ಕೊಡಲಿಲ್ಲ ಅಂದರೆ, ನಮ್ಮ ಕೈಗಳು ಊದಿಕೊಳ್ಳುವ ಹಾಗೇ ಚುಚ್ಚಿ ನೋವು ಮಾಡುತ್ತಾರೆ. ಹಾಗಾಗಿ ಅಂದೇ ಮತ್ತೆ ಬರೋದು ಬೇಡ ಅಂತಾ ತೀರ್ಮಾನ ಮಾಡಿದ್ದೆ. ಆದರೆ ಏನು ಮಾಡೋದು ನಮ್ಮಂತ ಬಡವರಿಗೆ ಬೇರೆ ದಾರಿ ಇಲ್ಲ. ಈಗ ಮತ್ತೆ ಬಂದಿದ್ದೇನೆ. –ರುಕ್ಮಿಣಿ.







"ಇಲ್ಲಿಗೆ ಸ್ಕ್ಯಾನಿಂಗ್ ಮಾಡಿಸಲು ಬೆಳಗ್ಗೆ ಬಂದೆ. ಸಂಜೆವರೆಗೂ ಕಾದರೂ ಮಾಡದೇ ವಾಪಸ್ ಕಳಿಸಿದರು. ಕೇಳಿದರೆ ನಮ್ಮ ಟೈಂ ಆಯ್ತು ನಾಳೆ ಬನ್ನಿ ಅಂತಾರೆ. ನಾವು ಹಳ್ಳಿಗೆ ಹೋಗಿ ಮತ್ತೆ ಬರಬೇಕು. –ಮಹದೇವಮ್ಮ.

ಚೇತನ್ ನರಸಿಂಹ ವಿ.

ಮೈಸೂರು, ಜು.27–ಮೆಡಿಕಲ್ ಟೆಸ್ಟ್ ಹೊರಗಡೆ ಮಾಡಿಸ್ಬೇಕು.. ಆಸ್ಪತ್ರೆಗೆ ದಾಖಲಾಗುವುದೇ ಆದರೆ ಎಲ್ಲಾ ಟೆಸ್ಟ್ ಮತ್ತೊಮ್ಮೆ ಆಗಬೇಕು, ಕನಿಷ್ಠ ಒಂದು ಟಿಟಿ ಇಂಜೆಕ್ಷನ್ ಕೂಡ ಇಲ್ಲಿ ಸರಿಯಾಗಿ ಲಭ್ಯವಿರಲ್ಲ.. ಎಕ್ಸ್‌ರೇ, ಸಿಟಿ ಸ್ಕ್ಯಾನ್ ಆಗಬೇಕಿದ್ದರೆ, ಒಂದು ದಿನ ಕಾಯಬೇಕು. ಗಂಟೆಗಟ್ಟಲೇ ಕಾದೂ ಟೆಸ್ಟ್ ವರದಿ ತಂದರೆ ಇಲ್ಲಿ ವೈದ್ಯರೇ ನಾಪತ್ತೆ... ಹನುಮಂತನ ಬಾಲದಂತೆ ಸರದಿ ಸಾಲಿದ್ದರೂ ಯಾರೂ ಕೇಳೋರೆ ಇಲ್ಲ. ಒಮ್ಮೆ ನೀವು ಮೈಸೂರಿನ ಹೃದಯ ಭಾಗದಲ್ಲಿರುವ, ದೊಡ್ಡ ಆಸ್ಪತ್ರೆ ಎಂದೇ ಕರೆಸಿಕೊಳ್ಳುವ ಕೆ.ಆರ್.ಆಸ್ಪತ್ರೆಗೆ ಹೋದರೆ ಬದುಕೇ ಬೇಸತ್ತು ಹೋಗುತ್ತದೆ.

ಕಡು ಬಡವರು, ಆರ್ಥಿಕವಾಗಿ ಹಿಂದುಳಿದವರು, ಮಧ್ಯಮ ವರ್ಗದವರು, ದಿನನಿತ್ಯ ಸಾವಿರಾರು ಸಂಖ್ಯೆಯಲ್ಲಿ ಕೆ.ಆರ್ ಆಸ್ಪತ್ರೆಗೆ ಬರುತ್ತಾರೆ. ದೊಡ್ಡ ಆಸ್ಪತ್ರೆ ಇದೆಯಲ್ಲಾ, ಚಿಕಿತ್ಸೆ ಖಾತರಿ. ಆದರೆ ಇಲ್ಲಿ ಚಿಕಿತ್ಸೆ ಪಡೆಯೋದೆ ಒಂದು ಸವಾಲಿನ ಕೆಲಸವಾಗಿದೆ. ಹತ್ತು ರೂ. ಚೀಟಿ ಕೊಂಡು ಸರದಿ ಸಾಲಿನಲ್ಲಿ ಗಂಟೆಗಟ್ಟಲೇ ನಿಂತು, ಇನ್ನೇನು ಚಿಕಿತ್ಸೆ ಸಿಗ್ತು ಅನ್ನೋವಾಗ ವೈದ್ಯರ ಟೆಸ್ಟ್ ಪಟ್ಟಿ ಶುರುವಾಗುತ್ತದೆ. ಒಂದು ವೇಳೆ ಜ್ವರ, ಬಿಪಿ ಇದ್ದರೆ ಅದು ಇಮ್ಮಡಿ ಗ್ಯಾರಂಟಿ.

ಇಲ್ಲಿ ಉತ್ತಮವಾದ ಸ್ಕ್ಯಾನಿಂಗ್ ಸೌಲಭ್ಯವಿದ್ದರೂ, ಎಕ್ಸ್‌ರೇ, ಅಲ್ಟ್ರಾಸೌಂಡ್ ಸ್ಕ್ಯಾನಿಂಗ್, ಹೆಪಟೈಟಿಸ್ ಬಿ, ಎಂಆರ್‌ಐ ಸ್ಕ್ಯಾನಿಂಗ್, ವಿವಿಧ ಔಷಧ, ರಕ್ತ ಪರೀಕ್ಷೆಗಳು ಖಾಸಗಿ ಪ್ರಯೋಗಾಲಯಕ್ಕೆ ಬರೆದುಕೊಡಲಾಗುತ್ತಿದೆ.

ಅಲ್ಲದೇ ತುರ್ತು ಚಿಕಿತ್ಸಾ, ಹೊರರೋಗಿಗಳ ವಿಭಾಗ ಮತ್ತು ವೈದ್ಯರು ಕರ್ತವ್ಯ ನಿರ್ವಹಿಸುವ ಕೊಠಡಿಗಳ ಟೇಬಲ್ ಮೇಲೆ ಖಾಸಗಿ ಲ್ಯಾಬ್‌ಗಳಿಗೆ ಸಂಬಂಧಿಸಿದ ಸ್ಲಿಪ್‌ಗಳು, ವಿಸಿಟಿಂಗ್ ಕಾರ್ಡ್ ಇರುವುದು ಇದಕ್ಕೆ ಸ್ಪಷ್ಟ ನಿದರ್ಶನವಾಗಿದೆ.

ಇತ್ತ ಖಾಸಗಿ ಲ್ಯಾಬ್‌ಗಳಲ್ಲಿ ಅಧಿಕ ದರ. ಬಡರೋಗಿಗಳು ಇತ್ತ ಚಿಕಿತ್ಸೆಯನ್ನು ಪಡೆಯದೆ, ಪರೀಕ್ಷೆಗಳನ್ನು ಮಾಡಿಸಿಕೊಳ್ಳಲು ಸಾಧ್ಯವಾಗದ ಪರಿಸ್ಥಿತಿ ಎದುರಾಗುತ್ತಿದೆ. ಇನ್ನು ತುರ್ತು ಚಿಕಿತ್ಸಾ ಪ್ರಕರಣಗಳು ಬಂದಾಗ ಅಗತ್ಯವಾಗಿ ಬೇಕಾಗುವ ಟಿಟಿ ಇಂಜೆಕ್ಷನ್‌ಗಳು ಕೂಡ ಲಭ್ಯವಿಲ್ಲ. ಹೊರಗಡೆಯಿಂದ ತಂದು ಪಡೆಯಬೇಕಿದೆ.

ವೈದ್ಯರು, ದಾದಿಯರು ಟೈಂ ಪಾಸ್: ಇನ್ನು ವೈದ್ಯರು, ನರ್ಸ್‌ಗಳು ಸಮಯವರಿತು ಚಿಕಿತ್ಸೆ ನೀಡುವ ಅಂತಃಕರಣ ರೂಢಿಸಿಕೊಂಡಿಲ್ಲ ಎಂಬುದು ನೋಡಿದರೇ ತಿಳಿಯುತ್ತದೆ. ಎಲ್ಲರ ಕೈಲೂ ಮೊಬೈಲ್ ರಾರಾಜಿಸುತ್ತಿದ್ದು, ಅದರಲ್ಲೇ ಮುಳುಗಿರುತ್ತಾರೆ. ತುರ್ತುಚಿಕಿತ್ಸಾ ವಿಭಾಗದಲ್ಲಿ ಕಿರಿಯ ವೈದ್ಯರದ್ದೇ ಕಾರುಬಾರು. ಕೆಲವರು ಚಿಕಿತ್ಸೆ ನೀಡುವಲ್ಲಿ ನಿರತರಾದರೆ ಹಲವರು ಮೊಬೈಲ್‌ಗಳಲ್ಲೇ ಮುಳುಗಿರುತ್ತಾರೆ. ವೈದ್ಯರೇ ಮೊಬೈಲ್‌ಗಳಲ್ಲಿ ಮೈಮರೆತರೆ, ರೋಗಿಗಳ ಪಾಡೇನು ಎಂದು ರೋಗಿಯೊಬ್ಬರು 'ಮೈಸೂರು ಮಿತ್ರ'ನಲ್ಲಿ ತಮ್ಮ ಅಳಲು ತೋಡಿಕೊಂಡರು.

ಉದ್ಯಾನ ಪಾರ್ಕಿಂಗ್ ಅಡ್ಡ: ಆಸ್ಪತ್ರೆ ಮುಂಭಾಗದ ಉದ್ಯಾನವನ ಸಂಪೂರ್ಣ ವಾಹನ ಪಾರ್ಕಿಂಗ್ ಸ್ಥಳವಾಗಿ ಮಾರ್ಪಟ್ಟಿದೆ. ಆಸ್ಪತ್ರೆ ಆವರಣ ಸ್ವಚ್ಛ ಮತ್ತು ಹಸಿರಿನಿಂದ ಕೂಡಿರಲಿ ಎಂದು ವಿವಿಧ ಬಗೆ ಮರ–ಗಿಡಗಳನ್ನು ಬೆಳೆಸಿದ್ದರೂ, ಅವುಗಳ ನಡುವೆಯೇ ಕಾರು, ಬೈಕ್‌ಗಳನ್ನು ಪಾರ್ಕಿಂಗ್ ಮಾಡುತ್ತಿರುವುದರಿಂದ ಹಸಿರೆಂಬುದೇ ಮಾಯವಾಗಿದೆ. ಅಲ್ಲದೆ ಒಳ ಅಥವಾ ಹೊರರೋಗಿಗಳ ಸಂಬಂಧಿಕರು ಕುಳಿತು ವಿಶ್ರಾಂತಿ ಪಡೆಯಲು ಸ್ಥಳವಿಲ್ಲದಂತಾಗಿದೆ.

ಅನೈರ್ಮಲ್ಯ ತಾಂಡವ: ಆಸ್ಪತ್ರೆಯ ಶೌಚಾಲಯಗಳಂತೂ ದುರ್ವಾಸನೆ ಬೀರುತ್ತಿವೆ. ಈ ಶೌಚಾಲಯಗಳಿಗೆ ಹೋದರೆ ಯಾವುದಾದರೊಂದು ರೋಗ ಅಂಟಿಕೊಳ್ಳುವುದು ಗ್ಯಾರಂಟಿ. ರೋಗಿಗಳು, ಅವರ ಕಡೆಯವರು ಬಳಸಲು ಹಿಂದೇಟು ಹಾಕುತ್ತಿದ್ದಾರೆ. ಇನ್ನು ಹಳೇ ಜಯದೇವ ಆಸ್ಪತ್ರೆ ಕಟ್ಟಡದಲ್ಲಂತೂ ಶೌಚಾಲಯ ವ್ಯವಸ್ಥೆ ಸಂಪೂರ್ಣ ಹದಗೆಟ್ಟಿದ್ದು ಒಳರೋಗಿಗಳು ಪರದಾಡುವ ದುಸ್ಥಿತಿ ಉಂಟಾಗಿದೆ. ಜತೆಗೆ ಆಸ್ಪತ್ರೆ ಆವರಣದ ಎಲ್ಲೆಂದರಲ್ಲಿ ಪ್ಲಾಸ್ಟಿಕ್ ಕಸದ ರಾಶಿ ಸಾಮಾನ್ಯವಾಗಿದ್ದು, ಅನೈರ್ಮಲ್ಯ ತಾಂಡವವಾಡುತ್ತಿದೆ.

ನಕ್ಕರೆ ಅದೇ ಸ್ವರ್ಗ

ಗುಂಡ : ಡಾಕ್ಟರ್ ಈ ಹೂವಿನ ಹಾರ ಇಲ್ಲಿ ಯಾಕೆ?
ಡಾಕ್ಟರ್ : ಇದು ನನ್ನ ಮೊದಲನೇ ಆಪರೇಷನ್...
ಸಕ್ಸಸ್ ಆಯಿತಂದ್ರ ನನಗೆ...
ಫೇಲ್ ಆಯಿತಂದ್ರೆ ಅದು ನಿನಗೆ...!

ಮೈಸೂರು ಮಿತ್ರ

ಶುಕ್ರವಾರ, 28 ಜುಲೈ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಕೊಂಬೆ ಮೇಲೆ ಕುಳಿತ ಹಕ್ಕಿ ಅಲುಗಾಡುವ ಆ ಕೊಂಬೆಯನ್ನು ನೋಡಿ ಭಯ ಪಡುವುದಿಲ್ಲ. ಕಾರಣ ಅದು ನಂಬಿದ್ದು ಕೊಂಬೆಯನ್ನಲ್ಲ, ತನ್ನ ರೆಕ್ಕೆಗಳನ್ನು. –ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬಾಯಿ ಬಿಟ್ಟರೆ ಬಣ್ಣಗೇಡು.

ನಿಮ್ಮ ಪತ್ರಗಳು

ನೀರು ಹರಿಯುವ ಪ್ರವಾಸಿ ತಾಣಗಳಲ್ಲಿ ಸೆಲ್ಫಿ ತೆಗೆಯುವುದನ್ನು ನಿಷೇಧಿಸಿ

ಮಾನ್ಯರೆ,

ನಮ್ಮ ರಾಜ್ಯದಲ್ಲಿ ಹಲವಾರು ಪ್ರವಾಸಿ ತಾಣಗಳಿವೆ. ಅದರಲ್ಲೂ ಮಳೆಗಾಲದಲ್ಲಿ ಹೆಚ್ಚು ಆಕರ್ಷಣೆಯಿಂದ ಕೂಡಿದ್ದು, ಕೆಲವು ಕಡೆ ಕೆರೆ, ನದಿ, ಕಾಲುವೆಗಳು ಹಾಗೂ ಜಲಪಾತಗಳಲ್ಲಿ ನೀರು ತುಂಬಿ ಹರಿಯುವ ರಮಣೀಯ ದೃಶ್ಯವನ್ನು ಸವಿಯಲು ದೇಶ ವಿದೇಶಗಳಿಂದ ಕುಟುಂಬ ಸಮೇತ, ಸ್ನೇಹಿತರು, ಪ್ರೇಮಿಗಳು, ಶಾಲಾ–ಕಾಲೇಜಿನ ವಿದ್ಯಾರ್ಥಿಗಳು, ಮಹಿಳೆಯರು, ಮಕ್ಕಳು ಹಾಗೂ ಸಾರ್ವಜನಿಕರು ಹೆಚ್ಚಾಗಿ ಬರುತ್ತಾರೆ. ಇಂತಹ ಸಂದರ್ಭಗಳಲ್ಲಿ ನೀರು ಹರಿಯುವ ಮತ್ತು ಆಳ ಹೆಚ್ಚಾಗಿರುವ ಪ್ರದೇಶಗಳಲ್ಲಿ ಹಾಗೂ ಅಪಾಯಕಾರಿ ಸ್ಥಳಗಳಲ್ಲಿ ನಿಂತು ಫೋಟೋ ತೆಗೆಯುವ ಸಂದರ್ಭಗಳಲ್ಲಿ ಅದೃಷ್ಟದಿಂದ ಬದುಕಿದವರು ಸ್ವಲ್ಪ ಜನವಾದರೆ ಆಕಸ್ಮಿಕವಾಗಿ ಪ್ರಾಣ ಕಳೆದುಕೊಳ್ಳುತ್ತಿರುವವರು ಮತ್ತಷ್ಟು ಜನ ಎಂದು ಹೇಳಬಹುದು. ಕೂಡಲೇ ರಾಜ್ಯದ ಪ್ರವಾಸೋದ್ಯಮ ಸಚಿವರು ಹಾಗೂ ಇದಕ್ಕೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಸಭೆ ನಡೆಸಿ ಸಾರ್ವಜನಿಕರ ಪ್ರಾಣವನ್ನು ರಕ್ಷಿಸಲು ಸೆಲ್ಫಿ ತೆಗೆದುಕೊಳ್ಳುವುದನ್ನು ನಿಷೇಧಿಸಬೇಕು.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು.

ಕಾಂಗ್ರೆಸ್ ಐದು ವರ್ಷ ಪೂರ್ಣ ಆಡಳಿತ ನಡೆಸಲಿ

ಮಾನ್ಯರೆ,

ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದು ಎರಡು ತಿಂಗಳಾಗಿದೆ. ಆಗಲೇ ಸರ್ಕಾರದ ಮುಂದಿನ ಐದು ವರ್ಷಗಳ ಅಳಿವು–ಉಳಿವಿನ ಬಗ್ಗೆ ಚರ್ಚೆ ನಡೆಯುತ್ತಿದೆ. ಇದಕ್ಕೆ ಮುಖ್ಯ ಕಾರಣ ಇತ್ತೀಚೆಗೆ ಕಾಂಗ್ರೆಸ್ ಪಕ್ಷದ ಹಿರಿಯ ನಾಯಕ ಬಿ.ಕೆ.ಹರಿಪ್ರಸಾದ್ ಅವರು ಹೇಳಿದ ಮಾತು, ನಮಗೆ ಮುಖ್ಯಮಂತ್ರಿ ಮಾಡುವುದು ಗೊತ್ತು, ಇಳಿಸುವುದು ಗೊತ್ತು ಎಂಬ ಹೇಳಿಕೆ ನೀಡಿದ ಮರುದಿನವೇ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನಮ್ಮ ಸರ್ಕಾರ ಉರುಳಿಸಲು ಸಿಂಗಾಪುರದಲ್ಲಿ ಕುಳಿತು ಕೆಲವರು ಪಿತೂರಿ ನಡೆಸುತ್ತಿದ್ದಾರೆ ಎಂದು ಹೇಳಿಕೆ ಕೊಟ್ಟಿದ್ದು, ಕಂದಾಯ ಸಚಿವ ಕೃಷ್ಣಬೈರೇಗೌಡ ಅವರು ಜನರಿಂದ ಆಯ್ಕೆಗೊಂಡ ಸರ್ಕಾರಗಳನ್ನು ಉರುಳಿಸಲು ಕೇಂದ್ರ ಸರ್ಕಾರ ತನ್ನ ಅಧಿಕಾರ ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದಿದ್ದಾರೆ.

ಈ ರೀತಿಯ ಹೇಳಿಕೆಗಳನ್ನು ಗಮನಿಸಿದರೆ, ಸರ್ಕಾರಕ್ಕೆ ಎಲ್ಲೋ ಒಂದು ಕಡೆ ಅಭದ್ರತೆ ಕಾಡುತ್ತಿರಬಹುದು ಎಂಬ ಪ್ರಶ್ನೆ ಸಾರ್ವಜನಿಕರಲ್ಲಿ ಇದೆ. ರಾಜ್ಯದ ಜನತೆ ಒಂದೇ ರಾಜಕೀಯ ಪಕ್ಷ ಅಧಿಕಾರಕ್ಕೆ ಬರಲಿ ಐದು ವರ್ಷಗಳ ಪೂರ್ಣ ಆಡಳಿತ ನಡೆಸಲಿ ಎಂದು ಆಶೀರ್ವಾದ ಮಾಡಿದ್ದಾರೆ. ಒಂದು ವೇಳೆ ಕಾಂಗ್ರೆಸ್ ಪಕ್ಷದ ಒಳ ಜಗಳದಿಂದ ಅಧಿಕಾರ ಕಳೆದುಕೊಂಡರೆ, ಭವಿಷ್ಯದಲ್ಲಿ ಇನ್ನು ಎಂದಿಗೂ ಅಧಿಕಾರಕ್ಕೆ ಬರಲು ಸಾಧ್ಯವೇ ಇಲ್ಲ?

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಜನತೆಗೆ ತಪ್ಪು ಸಂದೇಶ ರವಾನೆ

ಮಾನ್ಯರೇ,

ಡಿಜೆ ಹಳ್ಳಿ– ಕೆಜೆ ಹಳ್ಳಿ ಸೇರಿದಂತೆ ಇತರ ಹಿಂಸಾಚಾರ ಪ್ರಕರಣಗಳ ವಿರುದ್ಧ ಇರುವ ಪೊಲೀಸ್ ಕೇಸುಗಳನ್ನು ಹಿಂಪಡೆಯಬೇಕೆಂಬ ಬೇಡಿಕೆ ಹಿನ್ನೆಲೆಯಲ್ಲಿ ಪರಿಶೀಲಿಸಿ ವರದಿ ನೀಡುವಂತೆ ಗೃಹ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ಗೃಹಮಂತ್ರಿ ಪರಮೇಶ್ವರ್ ಸೂಚನೆ ನೀಡಿದ್ದಾರೆ ಎಂದು ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಹಿಂಸಾಚಾರ ಪ್ರಕರಣಗಳ ಮೇಲಿನ ಕೇಸ್ ಹಿಂಪಡೆಯುವುದು ಖಂಡಿತಾ ಬೇಡ. ಇದರಿಂದ ಸಮಾಜಕ್ಕೆ ತಪ್ಪು ಸಂದೇಶ ರವಾನೆಯಾಗುತ್ತದೆ.

ಈಗಾಗಲೇ ರಾಜ್ಯದ ಕಾರಾಗೃಹಗಳಲ್ಲಿ ಏನೂ ಅರಿಯದ ಅಮಾಯಕರ ವಿರುದ್ಧ ಪೋಲೀಸರು, ರಾಜಕೀಯ ಕಾರಣಗಳಿಗಾಗಿ ಕೇಸುಗಳನ್ನು ಹಾಕಿ, ಜೈಲಿನೊಳಗಡೆ ಖೈದಿಗಳಿಗೆ ಹಿಂಸೆ ಕೊಡುತ್ತಿದ್ದಾರೆ. ಮೊದಲು ಅಂತಹ ನಿರಪರಾಧಿ ಖೈದಿಗಳನ್ನು ಬಿಡಿಸಿ ಅವರಿಗೆ ಬದುಕಲು ಒಂದು ಉತ್ತಮ ಮಾರ್ಗವನ್ನು ಆದಷ್ಟು ಬೇಗ ಕಲ್ಪಿಸಲಿ. ಅದು ಬಿಟ್ಟು ಸಮಾಜಘಾತುಕ ಶಕ್ತಿಗಳನ್ನು ಜೈಲಿನಿಂದ ಬಿಡುಗಡೆ ಮಾಡಿ ಸಮಾಜದಲ್ಲಿ ಅಲ್ಲೋಲ ಕಲ್ಲೋಲವನ್ನು ಉಂಟು ಮಾಡುವುದು ಎಷ್ಟು ಸರಿ? ನೆಮ್ಮದಿಯಾಗಿರುವ ಸಮಾಜದಲ್ಲಿ ಅಲ್ಲೋಲ ಕಲ್ಲೋಲವನ್ನು ಉಂಟುಮಾಡುವುದು ಸರ್ಕಾರದ ಕೆಲಸವೇ? ಖಂಡಿತಾ ಅಲ್ಲ. ಒಂದು ನಿರ್ದಿಷ್ಟ ಜನಾಂಗದವರನ್ನು ಓಲೈಸುವುದಕ್ಕಾಗಿ ಈ ರೀತಿ ಮಾಡುವುದು ಸರಿಯೇ?

ಸಿದ್ಧರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರ ಆಡಳಿತಕ್ಕೆ ಬಂದ ತಕ್ಷಣ ಒಂದು ನಿರ್ದಿಷ್ಟ ಜನಾಂಗದ ಓಲೈಕೆ ಶುರುವಾಯಿತು ಎಂದು ಕರ್ನಾಟಕದ ಜನತೆ ಅಂದು ಕೊಳ್ಳುವುದು ನಿಜವಾಗಬೇಕೆ? ತಮ್ಮ ಪಕ್ಷ ಅಧಿಕಾರದಲ್ಲಿ ಇದೆ ಎಂದ ಮಾತ್ರಕ್ಕೆ ಹೀಗೆಲ್ಲಾ ಜನದ್ರೋಹಿ ಕೆಲಸಗಳನ್ನು ಮಾಡಬಹುದೆ? ಕರ್ನಾಟಕದ ಜನತೆಗೆ ಯೋಚಿಸಲು ಇದು ಸಕಾಲ. –ಬೇಲೂರು ದ.ಶಂ.ಪ್ರಕಾಶ್, ಮೈಸೂರು

ಸಿಮೆಂಟ್ ತುಂಡುಗಳನ್ನು ತೆರವುಗೊಳಿಸಿ

ಮಾನ್ಯರೆ,

ಮೈಸೂರಿನ ರಾಮಸ್ವಾಮಿ ವೃತ್ತದಿಂದ ಆರ್‌ಟಿಓ ಕಡೆಗೆ ಬರುವ ರಸ್ತೆಯಲ್ಲಿರುವ ಬಸ್ ನಿಲ್ದಾಣದಲ್ಲಿ ಹಳೆ ಬಸ್ ನಿಲ್ದಾಣದ ಒಡೆದ ದಪ್ಪ ಸಿಮೆಂಟ್ ತುಂಡುಗಳನ್ನು ಹಾಗೇ ಬಿಟ್ಟಿದ್ದು, ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿದೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ತೆರವುಗೊಳಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕಾಗಿ ಮನವಿ.

–ಎನ್. ವೆಂಕಟಾಚಲಪ್ಪ, ಕಂದಾಯನಗರ, ಮೈಸೂರು.

ಒಳಚರಂಡಿ ಕಾಮಗಾರಿ ಶೀಘ್ರ ಪೂರ್ಣಗೊಳಿಸಿ

ಮಾನ್ಯರೆ,

ಮೈಸೂರಿನ ಶ್ರೀರಾಂಪುರ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಕುಪ್ಪಲೂರು ಸಮೀಪದ ಭವಾನಿ ನಗರ ಬಡಾವಣೆಯು 2001ರಿಂದ ಯಾವುದೇ ಮೂಲಭೂತ ಸೌಲಭ್ಯವಿಲ್ಲದೆ ನಿವಾಸಿಗಳು ತೊಂದರೆ ಅನುಭವಿಸುವಂತಾಗಿದೆ. ಮಳೆಗಾಲ ಪ್ರಾರಂಭವಾಗಿರುವುದರಿಂದ ಚರಂಡಿಯಲ್ಲಿ ನೀರು ತುಂಬಿ ಭೂಮಿ ಕುಸಿದಿದೆ. ಇದರಿಂದ ಜನರು ಗುಂಡಿಗೆ ಬಿದ್ದು ಅನಾಹುತವಾದರೆ ಅದಕ್ಕೆ ಯಾರು ಹೊಣೆಗಾರರು ಎಂಬ ಪ್ರಶ್ನೆ ಸಾರ್ವಜನಿಕರಲ್ಲಿ ಕಾಡುತ್ತಿದೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಶೀಘ್ರವಾಗಿ ಕಾಮಗಾರಿ ಪೂರ್ಣಗೊಳಿಸಿ ಸಾರ್ವಜನಿಕರು, ವಾಹನ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕೆಂದು ಮನವಿ.

–ಸಿ.ಎನ್. ಮಹೇಶ್, ಶ್ರೀರಾಂಪುರ ಗ್ರಾಪಂ ಮಾಜಿ ಸದಸ್ಯ.




ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು

ಸಂಸ್ಕೃತಿ ಚಿಂತನಾ

ಮುದ್ದುರಾಮ ಲಹರಿ

ಮಂಕುತಿಮ್ಮನಿಂದ ಜಗತ್ತಿನ ಒಳ ಹೊರಗುಗಳನ್ನು ಡಿವಿಜಿ ಲೋಕಕ್ಕೆ ತಿಳಿಸಿದಂತೆ ಮುದ್ದುರಾಮನಿಂದ ಪ್ರಪಂಚದ ಮನಸ್ಸನ್ನೂ ಕನಸನ್ನೂ ನನಸನ್ನೂ ಕೆ.ಸಿ.ಶಿವಪ್ಪನವರು ತಿಳಿಸಿದ್ದಾರೆ ಎಂಬುದು ಕನ್ನಡಿಗರಿಗೆ ತಿಳಿದ ವಿಷಯವೇ. ಅವರು ಎಷ್ಟು ಲೀಲಾಜಾಲವಾಗಿ, ಅಪ್ರಯತ್ನವಾಗಿ ಪದ್ಯಗಳನ್ನು ರಚಿಸಬಲ್ಲರೆಂದರೆ ಅದು ಅಚ್ಚರಿಯನ್ನುಂಟು ಮಾಡುತ್ತದೆ. ವಾಲ್ಮೀಕಿಯ ರಾಮಾಯಣದಲ್ಲಿರುವುದು ಇಪ್ಪತ್ನಾಲ್ಕು ಸಾವಿರ ಶ್ಲೋಕಗಳಷ್ಟೆ. ಕೆ.ಸಿ.ಶಿವಪ್ಪನವರು ಇದುವರೆಗೆ ರಚಿಸಿರುವ ಚೌಪದಿಗಳ ಸಂಖ್ಯೆ ಮೂರು ಸಾವಿರಕ್ಕಿಂತ ಹೆಚ್ಚು. ಇವುಗಳಲ್ಲಿ ಎಲ್ಲೂ ಪುನರುಕ್ತಿಯಿಲ್ಲ, ಒಂದೊಂದು ಚೌಪದಿಯಲ್ಲೂ ಹೊಸ ಸೊಬಗು ಮಿಂಚಿದೆ. ಕನ್ನಡ ನುಡಿಯ ಬೆಡಗಿಗೆ ಈ ಪದ್ಯಗಳು ಹಿರಿಮೆಯನ್ನೂ ಗರಿಮೆಯನ್ನೂ ತಂದಿವೆ.



ಕೆ.ಸಿ.ಶಿವಪ್ಪ

ಮುದ್ದುರಾಮನನ್ನು ಸಾಮಾನ್ಯ ಜನರ ಮನಸ್ಸಿಗೆ ಮುಟ್ಟಿಸುವುದರಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿರುವವರು ಕನ್ನಡದ ಪೂಜಾರಿ ಶ್ರೀ ಹಿರೇಮಗಳೂರು ಕಣ್ಣನ್ ಅವರು. ಕನ್ನಡದ ಪೂಜಾರಿ ಎನ್ನುವುದರಲ್ಲೂ ಎರಡು ಅರ್ಥಗಳಿವೆ. ಅವರ ದೇವಸ್ಥಾನದಲ್ಲಿ ಕನ್ನಡದ ಮಂತ್ರಗಳನ್ನೇ ಹೇಳಿ ಪೂಜೆಯನ್ನು ಅವರು ನೆರವೇರಿಸುವುದರಿಂದ ಅವರು ಕನ್ನಡದ ಪೂಜಾರಿ ಎಂಬುದೊಂದು ಅರ್ಥ. ಕನ್ನಡ ಭಾಷೆಯನ್ನು ಪ್ರೀತಿಸುವ, ಕನ್ನಡಮ್ಮನ ಬಲ್ಮೆಯನ್ನು ಸರ್ವಥಾ ಎತ್ತಿ ಹಿಡಿದು, ಎಲ್ಲ ವಿಧದಿಂದ ಕನ್ನಡಕ್ಕೆ ಹಗಲೂ ಇರುಳೂ ಪೂಜೆಯನ್ನು ಸಲ್ಲಿಸುತ್ತಿರುವುದರಿಂದ ಅವರು ಕನ್ನಡದ ಪೂಜಾರಿ ಎನ್ನುವುದು ಇನ್ನೊಂದು ಅರ್ಥ. ಅವರ ಮಾತು ಎಂದರೆ ಶ್ರೋತೃಗಳ ಕಿವಿಗಳಿಗೆ ಹಬ್ಬದೂಟ. ಅದರಲ್ಲಿ ಹಾಸ್ಯದ ಲಾಸ್ಯವೂ ಇರುತ್ತದೆ. ಅಧ್ಯಾತ್ಮದ ರಹಸ್ಯವೂ ಇರುತ್ತದೆ. ಮುದ್ದುರಾಮನ ಪದ್ಯಗಳು ಅವರಿಗೆ ಕಂಠಸ್ಥ. ಹೃದ್ಯವಾದ ಅವರ ಕಂಠದಿಂದ ಅವುಗಳನ್ನು ಕೇಳುವುದು ಲೋಕೋತ್ತರವಾದ ಅನುಭವವನ್ನು ತರುತ್ತದೆ. ಆ ಪದ್ಯಗಳ ವ್ಯಾಖ್ಯಾನವನ್ನು ಕಣ್ಣನ್ ಅವರು ಮಾಡುವಾಗ ವೇದೋಪನಿಷತ್ತುಗಳ ವಾಕ್ಯಗಳನ್ನೂ ಉದಾಹರಿಸುತ್ತಾರೆ. ಶರಣರ ವಚನಗಳನ್ನೂ ಹೇಳುತ್ತಾರೆ, ಗಾದೆಗಳನ್ನೂ ನುಡಿಯುತ್ತಾರೆ. ಇದರಿಂದ ಕೇಳುಗರ ಮುಂದೆ ವಿಶಾಲ ಅರ್ಥ ಪ್ರಪಂಚವೇ ತೆರೆದುಕೊಳ್ಳುತ್ತದೆ. ಒಂದೇ ಪದ್ಯವನ್ನು ನಾವು ಓದಿದಾಗ ಅದರ ಬೆಳಕು ಹಣತೆಯ ಬೆಳಕಿನಷ್ಟಿದ್ದುದು ಕಣ್ಣನ್ ಅವರ ವ್ಯಾಖ್ಯಾನವನ್ನು ಕೇಳಿದಾಗ ಸೂರ್ಯಪ್ರಕಾಶ ದಂತೆ ಜಗದ್ವ್ಯಾಪಿ ಆಗುತ್ತದೆ. ಈ ಮಂತ್ರಶಕ್ತಿ ಅವರ ತಪಸ್ಸಿನ ಫಲ.

ಉದಯ ವಾಹಿನಿಯಲ್ಲಿ ಪೂಜ್ಯ ಕಣ್ಣನ್ ಅವರು ಸರ್ವಜ್ಞಾಮೃತ ಕಾರ್ಯಕ್ರಮದಲ್ಲಿ ಮುದ್ದುರಾಮನ ಮನಸಿನ ಪದ್ಯಗಳನ್ನೂ ಹೇಳುವಾಗ ಅಂಕುರಾರ್ಪಣ. ಆ ಪದ್ಯಗಳ ಜನಪ್ರಿಯತೆ, ಚಿತ್ತಾಕರ್ಷಣೆ ಎಷ್ಟು ಹೆಚ್ಚಾಯಿತೆಂದರೆ ಚೌಪದಿಗಳ ವಾಚನ ವ್ಯಾಖ್ಯಾನದ ಅನೇಕ ಸಿಡಿಗಳು ಹೊರಬಂದುವು. ಲಹರಿ ಸಂಸ್ಥೆಯ ಮೂಲಕ ಧ್ವನಿ ಮುದ್ರಿಕೆಗಳು ಎಲ್ಲೆಡೆಯೂ ಲಭ್ಯವಾದುವು.

ಇವುಗಳ ಬಗೆಗೆ ಜನರ ಕುತೂಹಲ ನೂರ್ಮಡಿಯಾಯಿತು. ಮಾತಿನ ರೂಪದಲ್ಲಿ ಶ್ರವಣೇಂದ್ರಿಯಕ್ಕೆ ಲಭ್ಯವಾದುದು ಅಕ್ಷರ ರೂಪದಲ್ಲಿ ನಯನೇಂದ್ರಿಯಕ್ಕೂ ಲಭ್ಯವಾಗಲಿ ಎಂದು ಡಾ. ಸಿ.ಜಿ.ಬೆಟಸೂರ ಮಠ ಅವರು ಮುದ್ದುರಾಮನ ಧ್ವನಿಮುದ್ರಿಕೆಗಳನ್ನಾಲಿಸಿ ಲಿಪಿರೂಪವನ್ನು ಅವಕ್ಕೆ ಕೊಟ್ಟರು. ಈಗ ಅದು ಮುದ್ರಿತವಾಗಿ ಮುದ್ದುರಾಮ ಪ್ರತಿಷ್ಠಾನದಿಂದ ಪ್ರಕಾಶಿತವಾಗಿ 'ಮುದ್ದುರಾಮ ಲಹರಿ' ಎಂಬ ಹೆಸರಿನಿಂದ ಪುಸ್ತಕ ರೂಪದಲ್ಲಿ ಉಪಲಭ್ಯವಾಗಿದೆ.

ಈ ಪುಸ್ತಕದಲ್ಲಿ ಮೂವತ್ತಾರು ವ್ಯಾಖ್ಯಾನಗಳ ಮಾಲೆ ಇದೆ. ವ್ಯಾಖ್ಯಾನಗಳಿಗೆ ಶೀರ್ಷಿಕೆ ಮುದ್ದುರಾಮನ ಪದ್ಯದ ನಾಲ್ಕನೆಯ ಚರಣವಾಗಿರುತ್ತದೆ. ಉದಾಹರಣೆಗೆ –

'ಯಾರ ನಾಮಾವಳಿಯ ಬಲದಿಂದ ಈ ವಿಶ್ವ
ಇನಿತು ಅದರದೆ ತನ್ನ ಕಕ್ಷೆಯಲ್ಲಿದೆಯೊ
ನೆನೆದಾರ ಹನುಮಂತ ಸಾಗರವ ದಾಟಿದನೊ
ನಮಿಸೊ ಆ ಮಹಿಮನಿಗೆ–ಮುದ್ದುರಾಮ'

ಎಂಬ ಪದ್ಯದ ವ್ಯಾಖ್ಯಾನದ ಶೀರ್ಷಿಕೆ 'ನಮಿಸೊ ಆ ಮಹಾಮಹಿಮನಿಗೆ'. ಇದರ ವ್ಯಾಖ್ಯಾನದಲ್ಲಿ ಕಣ್ಣನ್ ಅವರು ಜಗದ್ರಹಸ್ಯದ ಮೂಲತತ್ತ್ವಗಳನ್ನೇ ಹೇಳುತ್ತಾರೆ.

"ಈ ವಿಶ್ವದ ನಿಜವಾದ ಸ್ವರೂಪವೇನು? ಇದನ್ನು ಸೃಷ್ಟಿಸಿದ್ದು ಯಾರು? ಸೃಷ್ಟಿಯ ಹಿಂದೆ ಉದ್ದೇಶವೊಂದು ಇದೆಯೇ? ಜಗತ್ತಿನಲ್ಲಿ ಇಷ್ಟೊಂದು ಕಷ್ಟ ದುಃಖಗಳು ಏಕಿವೆ? ಸುಖ ಎಂಬುದು ಪ್ರಮಾಣದಲ್ಲಿ ಕಾಲದ ದೃಷ್ಟಿಯಿಂದ ಅಲ್ಪಾಯುವಾಗಿರುವುದೇಕೆ? ಇಂತಹ ಅನೇಕಾನೇಕ ಪ್ರಶ್ನೆಗಳಿಗೆ ಚೌಪದಿಯಲ್ಲಿ ಮುದ್ದುರಾಮ ಮಂಥನ ನಡೆಸುತ್ತಾನೆ". ಇದಕ್ಕೆ ಸಮರ್ಥಕವಾದ ವಿವರಣೆಯಲ್ಲಿ–

"ನಮಸ್ತೆ ಅಸ್ತು ಭಗವನ್ ವಿಶ್ವೇಶ್ವರಾಯ ತ್ರಿಪುರಾಂತಕಾಯ, ತ್ರಿಪುರಾಂತಕಾಯ, ತ್ರಿಕಾಗ್ನಿಕಾಲಾಯ, ಕಾಲಾಗ್ನಿ ರುದ್ರಾಯ, ನೀಲಕಂಠಾಯ, ಮೃತ್ಯುಂಜಯಾಯ, ಸರ್ವೇಶ್ವರಾಯ, ಸದಾಶಿವಾಯ, ಶ್ರೀಮನ್ಮಹಾ ದೇವಾಯ ನಮಃ" ವೇದಮಂತ್ರಗಳನ್ನೂ ಉದಾಹರಿಸುತ್ತಾರೆ. ಬೇಂದ್ರೆಯವರ "ಕಂಡೆ ಯೆನಲಾರೆ, ಕಾಣುತ್ತಿರುಯೆಂಬೆ, ನಿನ್ನ ಪಕ್ಕದಲ್ಲಿ ನಾನು ಪುಟ್ಟ ಗೊಂಬೆ. ಅವನ ಕಂಡವರಿಲ್ಲ, ಅವನ ಅರಿತವರುಂಟು, ವ್ಯಾಖ್ಯಾನಿಸಿದರೆ ತರತರದ ಗಂಟು ಎಂಬ ಕವಿತೆಯನ್ನು ಕೊಡುತ್ತಾರೆ.

ಕೆಲವು ಪದ್ಯಗಳಿಗೆ ಕಣ್ಣನ್ ಅವರ ವ್ಯಾಖ್ಯಾನ ನಿಜವಾಗಿ ಅದ್ಭುತವಾಗಿದೆ. ಅವರ ಗದ್ಯವೂ ಪದ್ಯದಂತೆ ಹೃದ್ಯವಾಗಿದೆ.

ಶ್ರುತಿಯಲಿದ್ದರೆ ತಂತಿ ನೂರೊಂದು ಮುದಭಾವ
ಇಲ್ಲದಿರೆ ಮನ ಮಿಡಿವ ರಾಗದಲೆ ಎಲ್ಲಿ?
ಬಿಗಿತ ಸಡಿಲತೆಯಿಂದ ತುಂತು ಸುಖ ಈ ಎದೆಗೆ
ಬದುಕು ವೀಣೆಯ ನಾದ ಮುದ್ದುರಾಮ ॥

ಈ ಪದ್ಯದ ವ್ಯಾಖ್ಯಾನದಲ್ಲಿ ಕಣ್ಣನ್ ಅವರ ಮಾತುಗಳ ಅಂದ ಕನ್ನಡವನ್ನು ಬರೆಯುವವರಿಗೆ ಸ್ಫೂರ್ತಿಯನ್ನು ಕೊಡುತ್ತದೆ.

"ಹಿಂದಿನ ಕಾಲದಲ್ಲಿ ನಮ್ಮ ಬೆಳವಣಿಗೆಗೆ, ನಮ್ಮ ನಮ್ಮ ಮನೆಯಲ್ಲಿ ಹಿರಿಯರು ಏನೆಲ್ಲಾ ಹೇಳಿಕೊಡುತ್ತಿದ್ದರು. ಜೀವನದ ಸೂತ್ರ ಏನು ಎಂದು ಕೇಳುವ ಮುಂಚೆಯೇ ಅವರು ಕಿವಿಗೆ ಬಿತ್ತುತ್ತಿದ್ದರು. ಹತ್ತಾರು ಗುಣಗಳನ್ನು ಒಗ್ಗೂಡಿಸಿ ಆಭರಣವಾಗಿಸುತ್ತಿದ್ದರು. ಅವನ್ನೆಲ್ಲ ನೆನಪು ಮಾಡಿಕೊಳ್ಳೋಣ. 'ಗುರುವಿನೊಳ್ ನಮ್ರತೆ, ವಿದ್ಯೆಯಲ್ಲಿ ಕೌತುಕ, ಸತ್ಸಂಗದಲ್ಲಿ ವಾಂಛೆ, ಶಂಕರನಲ್ಲಿ ಭಕ್ತಿ, ಜನಾಪವಾದಕ್ಕೆ ಭಯ, ದಾಂಪತ್ಯದಲ್ಲಿ ಆಸಕ್ತಿ, ಜತೆಗೆ ಅರಿವು ಗಳಿಸುವುದರಲ್ಲಿ ಸಾಹಸ, ಒಲುಮೆ ಅನ್ಯಗುಣದಲ್ಲಿ.' ಇಷ್ಟೇ ಅಲ್ಲ. ದುಸ್ಸಂಗದ ವರ್ಜನೆ. ಇಷ್ಟಿದ್ದರೆ ಸಾಕಯ್ಯಾ, ನೀ ಉತ್ತಮೋತ್ತಮನಾಗುತ್ತೀಯಾ, ಹಿತಭಾವದಿಂದ, ಸ್ಮಿತಭಾವದಿಂದ ಬದುಕುತ್ತಿಯಾ ಎನ್ನುತ್ತಿದ್ದರು".

ಪ್ರಕೃತಿಯ ಸೊಬಗನ್ನೂ, ಸೊಗಸನ್ನೂ ಸೌಂದರ್ಯವನ್ನೂ ಕಂಡು ಸಂಭ್ರಿಸುವುದು ಕವಿಚೇತನ. ಆಕಾಶವನ್ನು, ನಕ್ಷತ್ರ ಪುಂಜಗಳಿಂದ ಕಂಗೊಳಿಸುವ ರಾತ್ರಿಯ ಮುಗಿಲನ್ನು ನಾವೆಲ್ಲರೂ ಕಂಡಿದ್ದರೂ ಕವಿ ಶಿವಪ್ಪ ಅದನ್ನು ಕಂಡು ಉದ್ಗರಿಸುವ ನುಡಿಗಳು ಎಷ್ಟು ಚೆನ್ನ!

ಯಾರು ಇಟ್ಟರೊ ಇಂಥ ಬಿಳಿಮುಗಿಲ ರಂಗೋಲಿ
ನೀಲಿ ಬಾನಿನ ಹಸೆಯ ಈ ಮಣೆಯ ಮೇಲೆ?
ಕವಿ ಕನಸು ಕಣ್ತೆರೆದು ನನಸಾದ ನಿಜಭಾವ
ಜಗ ಬಣ್ಣದೋಕುಳಿಯೊ ಮುದ್ದುರಾಮ॥

ಇದರ ವ್ಯಾಖ್ಯಾನವನ್ನು ಮಾಡುವಾಗ ಕಣ್ಣನ್ ಅವರು ಡಿವಿಜಿ ಅವರ ಒಂದು ಭಾವಬಂಧುರ ರಚನೆಯನ್ನು ನಮ್ಮ ಮುಂದೆ ಇಡುತ್ತಾರೆ.

ಮೇಲೆ ನೋಡೆ ಕಣ್ಣ ತನಿಪ
ನೀಲಿಪಟದಿ ವಿವಿಧ ರೂಪ
ಜಾಲಗಳನು ಬಣ್ಣಿಸಿರ್ಪ
ಚಿತ್ರಚತುರನಾರ್?
ವಸ್ತು ಚಯವ ನಿಂತು ರಚಿಪ
ಶಿಲ್ಪಿವರ್ಯನಾರ್?
ಜ್ಯೋತಿಗಳನು ಗಗನತಲದಿ
ಗೀತೆಗಳನ್ನು ವಿಹಗಮುಖದಿ
ಪ್ರೀತಿಗಳನು ಜನದ ಮನದಿ
ತೋರುತಿರ್ಪನಾರ್?

ಇದೆಲ್ಲ ಕನ್ನಡಿಗರ ಸೌಭಾಗ್ಯ. ಕಣ್ಣನ್ ಅವರ ಭಾವಲಹರಿ ಅವರ ಮಾತುಗಳಲ್ಲಿ ಹರಿಯುವ ಚೆಲುವಿಗೆ ಯಾರ ಮನಸ್ಸು ಸೋಲದು? ಈ ಕೆಳಗಿನ ನುಡಿಗಡಣವನ್ನು ನೋಡಿ –

"ನಾವು ಬದುಕಬೇಕು, ನಾವು ಬಾಳಬೇಕು, ಮುಕ್ತತೆಯಲ್ಲೇ ಸಾಗಬೇಕು. ಅದಕ್ಕೆ ನಮಗೆ ಹಕ್ಕಿಯೇ ಉದಾಹರಣೆ. ನೋಡಿ, ಗರಿಬಿಚ್ಚಿ ಹಾರುತ್ತಾ ಏನೆಲ್ಲ ಪಾಠ ಕಲಿಸುತ್ತೆ. ಗಗನದೊಡಲ ಕಂಪಿನಲ್ಲಿ, ರವಿಯ ಸಿರಿಯ ಸೊಂಪಿನಲ್ಲಿ, ರಜನಿರಾಜನಿಂಪಿನಲ್ಲಿ ನಾವು ನೀವು ಹಕ್ಕಿಯಂತೆ ಗರಿಗೆದರಿ ಹಾರಬೇಕು, ಸಾಲು ಸೇರಿ ಕೂಗಬೇಕು, ಸಿಕ್ಕ ಮರಕೆ ಇಳಿಯಬೇಕು, ತಳಿರಿನೊಳಗೆ ಕೂಗಬೇಕು." (ಪು.94)

ಇದು ಯಾವ ಕಾವ್ಯಕ್ಕೆ ಕಡಿಮೆ? ಇಂತಹ ಒಳ್ಳೆಯ ಕನ್ನಡವನ್ನು ಸದಾ ಮಾತನಾಡುವ, ಬರೆಯುವ ಪ್ರಕೃತಿ ನಮ್ಮದಾಗಬೇಕು.

ಕವಿ ಯಾವಾಗ ಕಾವ್ಯ ರಚಿಸುತ್ತಾನೆ? ಕವಿ ಒಂದು ಯಂತ್ರವಲ್ಲ. ಯಾವಾಗಲೂ ಅವನು ಕಾವ್ಯಧಾರೆಯನ್ನು ಹರಿಸುತ್ತಿರಲೆಂದು ನಿರೀಕ್ಷಿಸಬಾರದು. ಶಿವಪ್ಪನವರು ಹೇಳುತ್ತಾರೆ –

ಕವಿ ಮನಸು ಹೂವಂತೆ ಚಿಗುರುವುದು, ಬಾಡುವುದು
ಅದು ಒಮ್ಮೆ ಜಲಪಾತ, ಒಮ್ಮೆ ಅದು ಬರಡು.
ಇಂದು ಅದು ರಸಗಂಗೆ, ಇನ್ನೆಂದೊ ಕೆಸರಮಡು
ಕೃತಿ ದೈವಕೃಪೆಯಿಂದ – ಮುದ್ದುರಾಮ.

ಇದರ ವ್ಯಾಖ್ಯಾನದಲ್ಲಿ ಕನ್ನಡದ ಪೂಜಾರಿ ಕಣ್ಣನ್ ಜಿ.ಎಸ್.ಶಿವರುದ್ರಪ್ಪನವರ 'ಪ್ರಕೃತಿಯಂತೆ ಕವಿಯ ಮನಸು ವಿಪುಲ ರೂಪ ತಾರಿಣಿ' ಎಂಬ ಕವಿತೆಯನ್ನೂ ರಾಷ್ಟ್ರಕವಿ ಕುವೆಂಪು ಅವರ 'ಕವಿಯ ಮನ ನಂದನವನ, ಆನಂದದ ರಸ ನಿಕೇತನ, ಅಲ್ಲಿ ಪಾಪವೂ ಪುಣ್ಯದ ವಾಹನ' ಎಂಬ ಕವನವನ್ನೂ ಉದಾಹರಿಸಿದ್ದಾರೆ. ಹೀಗೆ ಕನ್ನಡದ ಆಧುನಿಕ ಕವಿಗಳ ರಸಮಯ ಕಾವ್ಯಗಳ ಸಾರವನ್ನೆಲ್ಲ ಸಂಗ್ರಹಿಸಿ ಕೇಳುಗರಿಗೆ, ಓದುಗರಿಗೆ ಕೊಡುವ ವ್ಯಾಖ್ಯಾನಕಾರರು ವಿರಳ, ಅತಿವಿರಳ.

ಕಣ್ಣನ್ ಅವರಿಗೆ ಪ್ರಾಸ ಪ್ರೀತಿಯಿದೆ. ಅದಕ್ಕಾಗಿ ಅವರು ಇಂಗ್ಲೀಷ್ ಪದಗಳನ್ನು ಸಾಕಷ್ಟು ಬಳಸಿಕೊಳ್ಳುತ್ತಾರೆ. ಉದಾಹರಣೆಗೆ –

"ಈ ಶಿವನದೇ ಈ ಜಗತ್ತಿನ ಲೀಲೆಯ ಈ ಚಾರ್ಟು. ಅವನದೇ ಇದರಲ್ಲಿ ಇರತಕ್ಕಂತ ಹದ್ದು ಹಾರ್ಟು. ಅವನ ಕೈಚಳಕವೇ ಈ ಜಗತ್ತಿನ ಸೃಷ್ಟಿಯ ಲೀಲಾವಿನೋದದ ಒಂದು ಆರ್ಟು. ನಾವುಗಳೇನಿದ್ದರೂ ಅವನು ಹಾಕಿದಂತೆ ನಡೆದಾಡಬೇಕಾದಂತಹ ಒಂದು ಪಾರ್ಟು. ಈ ಪಾರ್ಟಿನ ಈ ಬದುಕಿನ ಕೋರ್ಟಿಗೆ ನಾವು ಬಂದಿರತಕ್ಕಂತಹುದು ಅವನಿಂದ ಪಡೆದ ಸಪೋರ್ಟು. ಅವನು ಎಲ್ಲಿಯವರೆಗೆ ನಮಗೆ ಅನುಗ್ರಹಿಸುತ್ತಾನೋ ಅಲ್ಲಿಯವರೆಗಷ್ಟೇ ಇಲ್ಲಿ ನಮ್ಮ ಅಪಾರ್ಟು. ನಾವು ತೆರಳುವಾಗ ಕೊಡಬೇಕಾದುದು ಅವನ ಸಪೋರ್ಟಿನಲ್ಲಿ ಒಂದು ರಿಪೋರ್ಟು." (ಪು. 2–3)

ಹೀಗೆ ಕನ್ನಡದಲ್ಲಿ ಇಂಗ್ಲೀಷ್ ಪದಗಳನ್ನು ಹೆಚ್ಚು ಹೆಚ್ಚಾಗಿ ಉಪಯೋಗಿಸಿಕೊಳ್ಳುವುದು ಅಪೇಕ್ಷಿತವೇ ಎಂದು ವಿದ್ವಾಂಸರು ವಿಮರ್ಶಿಸಬೇಕು.

(ಪ್ರಕಾಶಕರಿಗೊಂದು ಕಿವಿಮಾತು. ಈ ಪುಸ್ತಕದಲ್ಲಿ ಹಲವು ಸಂಸ್ಕೃತೋಕ್ತಿಗಳನ್ನು ಅಲ್ಲಲ್ಲಿ ಕೊಡಲಾಗಿದೆ. ಅವುಗಳಲ್ಲಿರುವ ದೋಷಗಳು ಸಂಸ್ಕೃತಜ್ಞರಿಗೆ ಬೇಸರವನ್ನು ತರಿಸುತ್ತವೆ. ಸಂಸ್ಕೃತವನ್ನು ತಿಳಿಯದವರು ಇಲ್ಲಿ ಕೊಟ್ಟಿರುವುದೇ ಸರಿಯಾದ ಮೂಲ ವಾಕ್ಯವೆಂದು ಭಾವಿಸುವುದಲ್ಲದೆ ಅದನ್ನೇ ತಮ್ಮ ಲೇಖನಗಳಲ್ಲಿ ಹಾಗೇ ಬಳಸುವ ಅಪಾಯವಿದೆ. ಮುಂದೆ ಹೀಗಾಗದಂತೆ ಎಚ್ಚರ ವಹಿಸಬೇಕೆಂದು ನನ್ನ ನಮ್ರ ನಿವೇದನೆ. ಹೀಗೆ ಬರೆದದ್ದು ತಪ್ಪೆಂದು ನಿಮಗೆ ಅನಿಸಿದರೆ ಕ್ಷಮಿಸಬೇಕೆಂದು ಕೋರುತ್ತೇನೆ.

ಅಂದಾಜಿಗಿಂತ ಮೊದಲೇ ಭಾರತ ಮೂರನೇ ಅತಿದೊಡ್ಡ ಆರ್ಥಿಕ ಶಕ್ತಿ

ಎಸ್‌ಬಿಐ ಸಂಶೋಧನಾ ವರದಿ



ನವದೆಹಲಿ, ಜು.27– ಈ ಹಿಂದಿನ ಅಂದಾಜಿಗಿಂತ 2 ವರ್ಷ ಮೊದಲೇ ಅಂದರೇ 2027ರ ವೇಳೆಗೆ ಭಾರತವು ಜಗತ್ತಿನ 3ನೇ ಅತಿದೊಡ್ಡ ಆರ್ಥಿಕತೆಯಾಗಲಿದೆ ಎಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಸಂಶೋಧನಾ ವರದಿಯಲ್ಲಿ ತಿಳಿಸಿದೆ.

ಭಾರತವು ಈಗಿರುವ ಪ್ರಸ್ತುತ ಬೆಳವಣಿಗೆಯ ದರವನ್ನು ಉತ್ತಮವಾಗಿ ನಿರ್ವಹಿಸಿದರೆ 2027ರಲ್ಲಿ (2027–28) 3ನೇ ಅತಿದೊಡ್ಡ ಆರ್ಥಿಕತೆ ಟ್ಯಾಗ್ ಪಡೆಯುವ ಸಾಧ್ಯತೆಯಿದೆ ಮತ್ತು ಈ ಪ್ರಕ್ರಿಯೆಯಲ್ಲಿ ಜಪಾನ್ ಮತ್ತು ಜರ್ಮನಿ ಎರಡನ್ನೂ ಮೀರಿಸುತ್ತದೆ ಎಂದು ಎಸ್‌ಬಿಐ ರಿಸರ್ಚ್ ತನ್ನ 'ಇಕೋವ್ರಾಪ್' ವರದಿಯಲ್ಲಿ ತಿಳಿಸಿದೆ.

ಈ ಹಿಂದೆ, 2029 ರ ವೇಳೆಗೆ ಭಾರತವು ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕತೆಯಾಗಲಿದೆ ಎಂದು ಎಸ್‌ಬಿಐ ಸಂಶೋಧನೆ ನಿರೀಕ್ಷಿಸಿತ್ತು ಆದರೆ ನೂತನ ವರದಿಯಲ್ಲಿ ಭಾರತ ನಿಗಧಿತ ಸಮಯಕ್ಕಿಂತ 2 ವರ್ಷ ಮೊದಲೇ ಅಂದರೆ 2027ರ ವೇಳೆಗೆ ಭಾರತವು ಮೂರನೇ ಸ್ಥಾನಕ್ಕೇರಲಿದೆ. ಇದು 2014 ರಲ್ಲಿದ್ದಕ್ಕಿಂತ ಏಳು ಸ್ಥಾನಗಳ ಮೇಲಕ್ಕೆ ಚಲಿಸುತ್ತದೆ. ಕುತೂಹಲಕಾರಿಯಾಗಿ, 2022–2027ರ ನಡುವೆ ಭಾರತದಿಂದ ಹೆಚ್ಚುತ್ತಿರುವ ಹೆಚ್ಚಳವು ಆಸ್ಟ್ರೇಲಿಯಾದ ಆರ್ಥಿಕತೆಯ ಪ್ರಸ್ತುತ ಗಾತ್ರದ 1.8 ಟ್ರಿಲಿಯನ್ ಅಮೆರಿಕನ್ ಡಾಲರ್‌ಗಿಂತ ಹೆಚ್ಚಾಗಿರುತ್ತದೆ ಎಂದು ವರದಿ ಹೇಳಿದೆ.

ಹಾಲಿ ಇರುವ ಉತ್ತಮ ದರದಲ್ಲಿ ಮುಂದುವರೆದರೆ, ಭಾರತವು ಇನ್ನೆರಡು ವರ್ಷಗಳಲ್ಲಿ ತನ್ನ ಆರ್ಥಿಕತೆಗೆ 0.75 ಟ್ರಿಲಿಯನ್ ಡಾಲರ್ ಅನ್ನು ಸೇರಿಸುವ ಸಾಧ್ಯತೆಯಿದೆ. ಅಂತೆಯೇ ಭಾರತವು 2047ರ ವೇಳೆಗೆ ಆರ್ಥಿಕತೆದೆ 20 ಟ್ರಿಲಿಯನ್ ಡಾಲರ್ ಗುರಿಯನ್ನು ಮುಟ್ಟಲು ಸಿದ್ಧವಾಗಿದೆ ಎಂದು ವರದಿ ಹೇಳಿದೆ. GDPಯಲ್ಲಿ ಭಾರತದ ಜಾಗತಿಕ ಪಾಲು 2027ರ ವೇಳೆಗೆ ಶೇ.4 ದಾಟಲಿದೆ. ಭಾರತದ GDPಯ ಪಾಲು ಈಗ 3.5 ಪ್ರತಿಶತದಷ್ಟಿದ್ದು, ಇದೇ ಸಂಖ್ಯೆ 2014 ರಲ್ಲಿ ಶೇಕಡಾ 2.6 ರಷ್ಟಿತ್ತು ಮತ್ತು 2027ರಲ್ಲಿ 4 ಶೇಕಡಾವನ್ನು ತಲುಪುವ ಸಾಧ್ಯತೆಯಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ರಾಜ್ಯವಾರು, ಎಸ್‌ಬಿಐ ಸಂಶೋಧನೆಯು ಅಂದಾಜಿನ ಪ್ರಕಾರ ಕನಿಷ್ಠ ಎರಡು ಭಾರತದ ರಾಜ್ಯಗಳಾದ ಮಹಾರಾಷ್ಟ್ರ ಮತ್ತು ಉತ್ತರ ಪ್ರದೇಶಗಳು ಆರ್ಥಿಕತೆಯ ವಿಷಯದಲ್ಲಿ ಭಾರತವು ಜಾಗತಿಕ ಆರ್ಥಿಕತೆಯಲ್ಲಿ 3ನೇ ಸ್ಥಾನವನ್ನು ಸಾಧಿಸುವಾಗ 2027ರಲ್ಲಿ USD 500 ಶತಕೋಟಿ ಗುರಿಯನ್ನು ಮುಟ್ಟುತ್ತವೆ. 2027ರಲ್ಲಿ ಪ್ರಮುಖ ಭಾರತೀಯ ರಾಜ್ಯಗಳ ಜಿಡಿಪಿ ಗಾತ್ರವು ವಿಯೆಟ್ನಾಂ, ನಾರ್ವೆ ಮುಂತಾದ ಕೆಲವು ಏಷ್ಯಾ ಮತ್ತು ಯುರೋಪಿಯನ್ ರಾಷ್ಟ್ರಗಳ ಗಾತ್ರಕ್ಕಿಂತ ಹೆಚ್ಚಾಗಿರುತ್ತದೆ ಎಂದು ವರದಿಯಲ್ಲಿ ಹೇಳಿದೆ.

ಉಡುಪಿ ಕಾಲೇಜ್ ವಿಡಿಯೋ ಪ್ರಕರಣ

ಪೊಲೀಸರಿಂದ ಸರಿಯಾದ ಕ್ರಮ



ಉಡುಪಿ, ಜು.27– ಉಡುಪಿಯ ನೇತ್ರಾಜ್ಯೋತಿ ಪ್ಯಾರಾ ಮೆಡಿಕಲ್ ಕಾಲೇಜಿನ ಶೌಚಾಲಯದಲ್ಲಿ ಮುಸ್ಲಿಂ ಸಮುದಾಯದ ವಿದ್ಯಾರ್ಥಿನಿಯರು ಹಿಂದೂ ಯುವತಿಯ ವಿಡಿಯೋ ರೆಕಾರ್ಡ್ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ಪೊಲೀಸರು ಕಾನೂನು ಪ್ರಕಾರ ಕ್ರಮಕೈಗೊಂಡಿದ್ದಾರೆ ಎಂದು ರಾಷ್ಟ್ರೀಯ ಮಹಿಳಾ ಆಯೋಗ (ಎನ್‌ಸಿಡಬ್ಲ್ಯು)ದ ಸದಸ್ಯೆ ಖುಷ್ಬು ಸುಂದರ್ ಗುರುವಾರ ಹೇಳಿದ್ದಾರೆ.

ಇಂದು ಉಡುಪಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹಾಕೆ ಅಕ್ಷಯ್ ಮಚ್ಚೀಂದ್ರ ಅವರೊಂದಿಗೆ ಸಭೆನಡೆಸಿದ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಖುಷ್ಬು ಇದೊಂದು ಸೂಕ್ಷ್ಮ ವಿಷಯವಾಗಿದ್ದು, ರಾಜಕೀಯ ಮಾಡಬಾರದು ಎಂದು ಸಮರ್ಥಿಸಿಕೊಂಡರು. ಪೊಲೀಸರಿಂದ ನನಗೆ ಮಾಹಿತಿ ಸಿಕ್ಕಿದೆ. ತನಿಖೆ ಮುಗಿದಿಲ್ಲ ಮತ್ತು ಇದು ಬಹಳ ಸಮಯ ತೆಗೆದುಕೊಳ್ಳುತ್ತದೆ ಎಂದರು.

ಇದು ಒಂದೇ ದಿನದಲ್ಲಿ ತೀರ್ಮಾನ ಆಗುವುದಿಲ್ಲ, ಪೊಲೀಸರು ಕಾನೂನು ಪ್ರಕಾರ ಕ್ರಮ ಕೈಗೊಂಡಿದ್ದಾರೆ. ಕಾಲೇಜು ಆಡಳಿತ ಮಂಡಳಿ ಪತ್ರಿಕಾಗೋಷ್ಠಿ ನಡೆಸಿ ವಿಡಿಯೋ ಡಿಲೀಟ್ ಮಾಡಿರುವ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಿದ ನಂತರ ಪೊಲೀಸರು ದೂರು ದಾಖಲಿಸಿದ್ದಾರೆ ಎಂದರು.

ಈ ವಿಚಾರವಾಗಿ ಮಾತನಾಡುವವರು ಕಾನೂನನ್ನು ಅರಿತು ಮಾತನಾಡಬೇಕು. ವದಂತಿ ಹಬ್ಬಿಸಬಾರದು. ಹೆಣ್ಣು ಮಕ್ಕಳ ರಕ್ಷಣೆ ನಮಗೆ ಮುಖ್ಯ. ಆ ಹೆಣ್ಣುಮಕ್ಕಳು ನಮ್ಮ ಕುಟುಂಬಕ್ಕೆ ಸೇರಿದವರು. ಸಮಸ್ಯೆ ಪರಿಹರಿಸುವುದು ಮುಖ್ಯ. ಧಾರ್ಮಿಕ ಅಥವಾ ರಾಜಕೀಯ ಕಾರಣಗಳಿಗಾಗಿ ನಾನು ಇಲ್ಲಿಗೆ ಬಂದಿಲ್ಲ. ಪೋಷಕರಾಗಿ ಸಮಸ್ಯೆಯನ್ನು ಪರಿಹರಿಸಲು ಪ್ರಯತ್ನಿಸಲಾಗುವುದು ಖುಷ್ಬು ಹೇಳಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ನಾನು ಎಂಬ ಅಹಂಕಾರ ನೆತ್ತಿಗೇರಲು ಬಿಡಬೇಡಿ: ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ



ಮೈಸೂರು.ಜು.27(ಸಿಎನ್)–ದೇವ, ಋಷಿ, ಪಿತೃ, ಮನುಷ್ಯ, ಭೂತ ಗಣ ಎಂಬ ಐದು ಋಣಗಳನ್ನು ಹೊತ್ತುಕೊಂಡು ಭೂಮಿ ಮೇಲೆ ಮನುಷ್ಯನ ಜನನವಾಗುತ್ತದೆ. ಅವುಗಳನ್ನು ತೀರಿಸದೇ ಮನುಷ್ಯನಿಗೆ ಮುಕ್ತಿ ಮಾರ್ಗ ದೊರಕುವುದಿಲ್ಲ ಎಂದು ಉಡುಪಿ ಪೇಜಾವರ ಮಠದ ಶ್ರೀ ವಿಶ್ವ ಪ್ರಸನ್ನ ತೀರ್ಥ ಸ್ವಾಮೀಜಿ ಅಭಿಪ್ರಾಯಪಟ್ಟರು.

ನಗರದ ಸರಸ್ವತಿಪುರಂನ ಕೃಷ್ಣಧಾಮದಲ್ಲಿ 36ನೇ ಚಾತುರ್ಮಾಸ್ಯ ಸಂಕಲ್ಪ ಅಂಗವಾಗಿ ಗುರುವಾರ ಆಯೋಜಿಸಲಾಗಿದ್ದ ಶ್ರೀಮದ್ರಾಮಾಯಣ ಪ್ರವಚನ ವೇಳೆ ಮಾತನಾಡಿದರು.

ನಾವು ಹುಟ್ಟುವಾಗ ಏನನ್ನೂ ತಂದಿಲ್ಲ, ಹುಟ್ಟಿದ ಮೇಲೆ ಭಗವಂತನ ಜಾಗ, ಅವನದೇ ಧಾನ್ಯದ ಸಹಾಯದಿಂದ ಬಿತ್ತನೆ ಮಾಡಿ ಒಂದು ಹಿಡಿ ಅನ್ನ ಮಾಡಲು ಕಲಿತಿದ್ದೇವೆ ಅಷ್ಟೇ. ಹಾಗಾಗಿ ನಾನು ಎಂಬ ಅಹಂಕಾರ ನೆತ್ತಿಗೇರಲು ಬಿಡಬೇಡಿ. ಒಮ್ಮೆ ಅಹಂ ನಮ್ಮೊಳಗೆ ಬಂದರೆ ನಾಶದ ಸಮೀಪದಲ್ಲಿದ್ದೇವೆ ಎಂದೇ ಭಾವಿಸಬೇಕಾಗುತ್ತದೆ ಎಂದರು.

ಈಗಾಗಲೇ ಸಿದ್ಧವಾಗಿರುವುದನ್ನು ನಾನು ಮಾಡಿದೆ ಅಂದರೆ, ಭಗವಂತನ ದೃಷ್ಟಿಯಲ್ಲಿ ಕಳ್ಳನಾದಂತೆ. ಇದು ನಮ್ಮದಲ್ಲ ಎಚ್ಚರ ಇರಬೇಕು. ಯಾರು ಇದನ್ನು ನಮಗೆ ಕೊಟ್ಟಿದ್ದಾರೋ, ಅವರ ಬಗ್ಗೆ ಕೃತಜ್ಞತಾ ಮನೋಭಾವ ಬೆಳೆಸಿಕೊಂಡರೆ ದೋಷವಾಗಿ ಕಾಡುವುದಿಲ್ಲ. ಯಾವುದಕ್ಕಾದರೂ ದೋಷ, ಪರಿಹಾರ ಎಂದು ಇದ್ದೇ ಇರುತ್ತದೆ ಎಂದರು.

ಕೆರೆಯ ನೀರನ್ನು ಕೆರೆಗೆ ಚೆಲ್ಲಿ ಎಂಬಂತೆ ನೀವು ಮಾಡುವ ಕರ್ತವ್ಯವನ್ನು ಭಗವಂತನಿಗೆ ಅರ್ಪಿಸಿ, ಅದರ ಫಲವನ್ನು ಸ್ವೀಕಾರ ಮಾಡುವ ಗುಣ ಬೆಳೆಸಿಕೊಳ್ಳಬೇಕು. ಭಗವಂತ ನೀ ನೀಡಿದೆ ಎಂದರೆ ಅದೇ ಅವನಿಗೆ ಮಹಾ ನೈವೇದ್ಯ. ಈ ಸದ್ಗುಣಗಳನ್ನು ಬೆಳೆಸಿಕೊಳ್ಳಬೇಕು. ಕನ್ನಡಿ ಮುಂದೆ ನಿಂತು ಸುಂದರವಾಗಿ ಕಾಣಬೇಕು ಎಂದರೆ ಕನ್ನಡಿಗೆ ಶೃಂಗಾರ ಮಾಡಿಕೊಳ್ಳಲಾಗಲ್ಲ. ಬದಲಾಗಿ ನಿಮ್ಮ ಮುಖಕ್ಕೆ ಶೃಂಗಾರ ಮಾಡಿದರೆ ಮಾತ್ರ ಸುಂದರವಾಗಿ ಕಾಣುತ್ತೀರಿ. ಹಾಗೆಯೇ ಮನುಷ್ಯ–ದೇವರು ಎಂಬ ಬಿಂಬ–ಪ್ರತಿಬಿಂಬದ ಕೃತಜ್ಞತಾ ಭಾವ ಸಮರ್ಪಣೆಯೇ ಭಗವಂತನ ಆರಾಧನೆಯಾಗಿದೆ ಎಂದರು.

ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕವಾಗಿ ನಾವು ಎತ್ತರಕ್ಕೆ ಬೆಳೆದಿದ್ದೇವೆ ಎಂದರೆ 1000 ವರ್ಷಗಳ ಹಿಂದೆ ನಮ್ಮ ಪೂರ್ವಜರು ನೀಡಿದ ಜ್ಞಾನಾರ್ಜನೆ ಕಾರಣವಾಗಿದೆ. ಉಪಕಾರಕ್ಕೆ ಪ್ರತ್ಯುಪಕಾರ ಮಾಡಬೇಕು. ಈ ಮೂಲಕ ಅವರ ಋಣ ತೀರಿಸಬಹುದು ಎಂದರು.

ನಾವು ಹುಟ್ಟಿ ಬರುವಾಗ ನಾವೆಲ್ಲರೂ ಮಾಂಸದ ಮುದ್ದೆಗಳಂತೆ, ಬೇಕು–ಬೇಡಗಳನ್ನು ತಿಳಿಯದಂತೆ ಇರುತ್ತೇವೆ. ಅದನ್ನು ಕಲಿಸಿ ನಮ್ಮ ಬೇಕು ಬೇಡಗಳ ನಿರ್ಧಾರ ಮಾಡಿ ಜೋಪಾನ ಮಾಡುವವರು ಪೋಷಕರು. ಅವರ ಋಣವನ್ನು ಏಳೇಳು ಜನ್ಮದಲ್ಲಿ ತೀರಿಸಲು ಸಾಧ್ಯವಿಲ್ಲ. ತಂದೆ–ತಾಯಿ ಬದುಕಿದ್ದರೆ ಅವರನ್ನು ಪೋಷಿಸುವುದೇ ನಿಜವಾದ ಪಿತೃಯಜ್ಞ ಎಂದರು.

ಈ ವೇಳೆ ವಿದ್ವಾನ್ ಖೇಡ ವೇದವ್ಯಾಸಚಾರ್ಯ ಸೇರಿದಂತೆ ಮತ್ತಿತರರಿದ್ದರು.

ರಾಜ್ಯದಲ್ಲಿ ಹುಲಿಗಳ ಸಂಖ್ಯೆ ಏರಿಕೆ

ಕ್ಯಾಮರಾ ಟ್ರಾಪ್‌ನಲ್ಲಿ ವ್ಯಾಘ್ರಗಳು ಪತ್ತೆ; ಅಂತಾರಾಷ್ಟ್ರೀಯ ಹುಲಿ ದಿನಕ್ಕೆ ಮುನ್ನವೇ ಗಣತಿ ವಿವರ ಬಿಡುಗಡೆ



2018ರಲ್ಲಿ ನಡೆದಿದ್ದ ಅಖಿಲ ಭಾರತ ಹುಲಿ ಗಣತಿಯ ಪ್ರಕಾರ ಕರ್ನಾಟಕದಲ್ಲಿ ನಡೆದ ಕ್ಯಾಮರಾ ಟ್ರ್ಯಾಪ್‌ನಲ್ಲಿ 404 ಹುಲಿಗಳು ಪತ್ತೆಯಾಗಿದ್ದವು. ಇದನ್ನು ವನ್ಯಜೀವಿ ಸಂಖ್ಯಾಶಾಸ್ತ್ರದ ಪ್ರಕಾರ ವಿಶ್ಲೇಷಿಸಿದಾಗ ರಾಜ್ಯದಲ್ಲಿ 475 ರಿಂದ 573 ಹುಲಿಗಳು ಇರಬಹುದು ಎಂದು ಅಂದಾಜಿಸಲಾಗಿತ್ತು. 2022ರಲ್ಲಿ ರಾಜ್ಯದಲ್ಲಿ 435 ಹುಲಿಗಳು ಪತ್ತೆಯಾಗಿದ್ದು ಈ ಬಾರಿ ಹುಲಿಗಳ ಸಂಖ್ಯೆ ಇನ್ನಷ್ಟು ಹೆಚ್ಚಾಗಲಿದೆ ಎಂದರು.
– ಈಶ್ವರ ಬಿ.ಖಂಡ್ರೆ, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ

ಬೆಂಗಳೂರು, ಜು.27 (ಎಂಟಿವೈ)– ರಾಜ್ಯದಲ್ಲಿ ಹುಲಿ ಸಂತತಿ ಸಂರಕ್ಷಣೆಗಾಗಿ ಕೈಗೊಂಡ ವಿವಿಧ ಕಠಿಣ ಕ್ರಮಗಳಿಂದಾಗಿ ರಾಜ್ಯದಲ್ಲಿ ಹುಲಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚಳವಾಗಿದೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ.ಖಂಡ್ರೆ ತಿಳಿಸಿದ್ದಾರೆ.

ಅಂತಾರಾಷ್ಟ್ರೀಯ ಹುಲಿ ದಿನದ ಅಂಗವಾಗಿ ಗುರುವಾರ ಬೆಂಗಳೂರಿನ ವಿಕಾಸ ಸೌಧದಲ್ಲಿ 'ಹುಲಿ ಗಣತಿ'ಯ ವಿವರ ಬಿಡುಗಡೆ ಮಾಡಿ ಮಾತನಾಡಿದ ಅವರು, ರಾಷ್ಟ್ರೀಯ ಹುಲಿ ಪ್ರಾಧಿಕಾರ (ಎನ್‌ಟಿಸಿಎ) ಮಾರ್ಗಸೂಚಿಯಂತೆ ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಹುಲಿ ಗಣತಿ ಮಾಡಲಾಗುತ್ತದೆ. ಈ ಬಾರಿ ಆನೆಯೊಂದಿಗೆ ಮಾಂಸಾಹಾರಿ ಮತ್ತು ಸಸ್ಯಾಹಾರಿ ಪ್ರಾಣಿಗಳ ಗಣತಿಯನ್ನೂ ನಡೆಸಲಾಗುತ್ತದೆ ಎಂದರು.

ಪಶ್ಚಿಮ ಘಟ್ಟದ ಹೆಚ್ಚಿನ ಭಾಗ ಹೊಂದಿರುವ ಕರ್ನಾಟಕವು ಹುಲಿಗಳ ಸಂರಕ್ಷಣೆಯಲ್ಲಿ ಮುಂಚೂಣಿಯಲ್ಲಿದ್ದು, 2021–22ನೇ ಸಾಲಿನಲ್ಲಿ ಹುಲಿ ಗಣತಿಯನ್ನು ವೈಜ್ಞಾನಿಕವಾಗಿ ನಡೆಸಲಾಗಿತ್ತು. ರಾಜ್ಯದ 5 ಹುಲಿ ಸಂರಕ್ಷಿತ ಪ್ರದೇಶಗಳಾದ ನಾಗರಹೊಳೆ, ಬಂಡೀಪುರ, ಭದ್ರಾ, ಬಿಳಿಗಿರಿರಂಗನಾಥಸ್ವಾಮಿ ಹುಲಿ ಸಂರಕ್ಷಿತ ಪ್ರದೇಶ ಹಾಗೂ ಕಾಳಿ ಕಾನನ ಸೇರಿದಂತೆ 37 ವನ್ಯಜೀವಿ ಧಾಮಗಳಲ್ಲಿ ಒಟ್ಟು 37 ವಿಭಾಗದಲ್ಲಿ ಸಮೀಕ್ಷೆ ನಡೆಸಲಾಗಿದೆ. ಹುಲಿ ಗಣತಿಗೆ ಕ್ಯಾಮರಾ ಟ್ರ್ಯಾಪ್ ಮತ್ತು ಲೈನ್ ಟ್ರಾನ್ಸ್ಯಾಕ್ಟ್ ವಿಧಾನ ಬಳಸಲಾಗಿದೆ. ರಾಜ್ಯದ ಎಲ್ಲ ಸಂರಕ್ಷಿತ ಅರಣ್ಯಗಳಲ್ಲಿ ಅಳವಡಿಸಲಾಗಿದ್ದ 5399 ಕ್ಯಾಮರಾ ಟ್ರ್ಯಾಪ್‌ನಲ್ಲಿ 66 ಲಕ್ಷಕ್ಕೂ ಹೆಚ್ಚು ವನ್ಯಜೀವಿಗಳ ಛಾಯಾಚಿತ್ರ ಕ್ರೋಡೀಕರಣವಾಗಿತ್ತು. ಆಧುನಿಕ ತಂತ್ರಜ್ಞಾನ ಬಳಸಿ ಹುಲಿಗಳ ಚಲನವಲನ, ಪ್ರಾದೇಶಿಕ ಪರಿಮಿತಿ (ಸರಹದ್ದು) ಹುಲಿಗಳ ಮೈಮೇಲಿನ ಪಟ್ಟೆಗಳ ಆಧಾರದ ಮೇಲೆ ಹುಲಿಗಳ ಸಂಖ್ಯೆಯನ್ನು ಲೆಕ್ಕಹಾಕಲಾಗಿದೆ ಎಂದು ವಿವರಿಸಿದರು.

ಬಂಡಿಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ 612, ಭದ್ರಾದಲ್ಲಿ 330, ಬಿಆರ್‌ಟಿಯಲ್ಲಿ 288, ಕಾಳಿಯಲ್ಲಿ 448, ನಾಗರಹೊಳೆಯಲ್ಲಿ 502 ಕ್ಯಾಮರಾ ಪಾಯಿಂಟ್ ಅಳವಡಿಸಲಾಗಿತ್ತು. ಇದರಲ್ಲಿ 376 ಅನನ್ಯ (ವಿಶಿಷ್ಟ) ಹುಲಿಗಳು ಪತ್ತೆಯಾಗಿವೆ. ಇದಲ್ಲದೆ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದಲ್ಲಿ 80, ಬೆಳಗಾವಿ ವಿಭಾಗದಲ್ಲಿ 119, ಭದ್ರಾವತಿ ವಿಭಾಗದಲ್ಲಿ 121, ಕಾವೇರಿ ವನ್ಯಜೀವಿ ಧಾಮದಲ್ಲಿ 473, ಚಿಕ್ಕಮಗಳೂರು ವನ್ಯಜೀವಿ ಅರಣ್ಯದಲ್ಲಿ 41, ಹಳಿಯಾಳದಲ್ಲಿ 106, ಕಾರವಾರ ವಿಭಾಗದಲ್ಲಿ 135, ಕೊಪ್ಪ ವನ್ಯಜೀವಿ ಧಾಮದಲ್ಲಿ 50, ಕುದುರೆಮುಖ ವಿಭಾಗದಲ್ಲಿ 173, ಮಡಿಕೇರಿ (ಬ್ರಹ್ಮಗಿರಿ, ಪುಷ್ಪಗಿರಿ ಮತ್ತು ತಲಕಾವೇರಿ) ವಿಭಾಗದಲ್ಲಿ 175, ಮಲೆ ಮಹದೇಶ್ವರ ಬೆಟ್ಟದಲ್ಲಿ 432, ಮೈಸೂರು ವಿಭಾಗದಲ್ಲಿ 36, ಶಿವಮೊಗ್ಗ ವನ್ಯಜೀವಿ ಧಾಮದಲ್ಲಿ 182, ಶಿರಸಿ ವಿಭಾಗದಲ್ಲಿ 107, ವಿರಾಜಪೇಟೆ ವಿಭಾಗದಲ್ಲಿ 111, ಯಲ್ಲಾಪುರ ವಿಭಾಗದಲ್ಲಿ 94 ಸೇರಿ ರಾಜ್ಯದಲ್ಲಿ ಒಟ್ಟಾರೆ 4786 ಕ್ಯಾಮರಾ ಪಾಯಿಂಟ್ ಅಳವಡಿಸಲಾಗಿತ್ತು. ಈ ಎಲ್ಲ ಕ್ಯಾಮರಾಗಳಿಂದ 1,61,053 ಫೋಟೊ ಚಿತ್ರೀಕರಣವಾಗಿದೆ ಎಂದು ತಿಳಿಸಿದರು.



ನಮ್ಮ ದೇಶದಲ್ಲಿ ಅರಣ್ಯ ಪ್ರದೇಶ ಸುರಕ್ಷಿತವಾಗಿ ಉಳಿದಿರುವುದಕ್ಕೆ ದೇಶದ ಪ್ರಧಾನಮಂತ್ರಿಗಳಾದ ಇಂದಿರಾಗಾಂಧಿ ಮತ್ತು ರಾಜೀವ್ ಗಾಂಧಿ ಅವರು ಕಾರಣ ಎಂದರೆ ತಪ್ಪಾಗಲಾರದು. ಇಂದಿರಾಗಾಂಧಿ ಮತ್ತು ರಾಜೀವ್ ಗಾಂಧಿ ಅವರು ನಿಜವಾದ ಪರಿಸರ ಪ್ರೇಮಿಗಳಾಗಿದ್ದರು. ಅವರು ಅರಣ್ಯ ಸಂರಕ್ಷಣಾ ಕಾಯಿದೆ, ವನ್ಯಜೀವಿ ಸಂರಕ್ಷಣಾ ಕಾಯಿದೆ, ಅರಣ್ಯ ಹಕ್ಕು ಕಾಯಿದೆಗಳನ್ನು ಜಾರಿಗೆ ತಂದಿದ್ದಷ್ಟೇ ಅಲ್ಲದೆ, ಅದನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತಂದರು. ಇಲ್ಲದಿದ್ದರೆ ಈ ವೇಳೆಗೆ ಅರಣ್ಯವೂ ಇರುತ್ತಿರಲಿಲ್ಲ. ಅರಣ್ಯವಾಸಿಗಳಿಗೆ ಅವರ ಹಕ್ಕೂ ದೊರಕುತ್ತಿರಲಿಲ್ಲ. ವನ್ಯಮೃಗಗಳೂ ಉಳಿಯುತ್ತಿರಲಿಲ್ಲ. ಪ್ರಪಂಚದಲ್ಲೇ ಮೊದಲ ಬಾರಿಗೆ ಹುಲಿ ಗಣತಿ ನಡೆದಿದ್ದು ಭಾರತದಲ್ಲೇ. ಜಾರ್ಖಂಡ್‌ನ ಪಲ್ಮಾವ್ ಹುಲಿ ರಕ್ಷಿತಾರಣ್ಯದಲ್ಲಿ ಪ್ರಾಯೋಗಿಕವಾಗಿ ಗಣತಿ ನಡೆದಿತ್ತು. 1972ರಲ್ಲಿ ವನ್ಯಜೀವಿ ಕಾಯ್ದೆ ಜಾರಿಗೆ ಬಂದ ನಂತರ 1972ರಿಂದ ಹುಲಿ ಗಣತಿಯನ್ನು ಆರಂಭಿಸಲಾಯಿತು ಮತ್ತು ಪ್ರತಿ 4 ಸಾಲಿನಲ್ಲಿ ಒಮ್ಮೆ ಗಣತಿ ಕಾರ್ಯ ನಡೆಸಲಾಗುತ್ತಿದೆ ಎಂದು ಸಚಿವರು ವಿವರಿಸಿದರು.

ಮೈಸೂರಲ್ಲಿ ಡಾ.ಎಪಿಜೆ ಅಬ್ದುಲ್ ಕಲಾಂ ಸಂಸ್ಮರಣೆ



ಮೈಸೂರು, ಜು.27(ಎಸ್‌ಬಿಡಿ)– ಮಾಜಿ ರಾಷ್ಟ್ರಪತಿ ದಿವಂಗತ ಡಾ.ಎಪಿಜೆ ಅಬ್ದುಲ್ ಕಲಾಂ ಅವರ 8ನೇ ವರ್ಷದ ಪುಣ್ಯಸ್ಮರಣೆಯನ್ನು ಟೀಂ ಮೈಸೂರು ವತಿಯಿಂದ ಆಚರಿಸಲಾಯಿತು.


ತಂಡದ ಸದಸ್ಯರು ನಗರದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಲ್ಲಿ ಗುರುವಾರ ರಾತ್ರಿ ಮೇಣದಬತ್ತಿ ಬೆಳಗಿಸುವ ಮೂಲಕ ಡಾ.ಅಬ್ದುಲ್ ಕಲಾಂ ಅವರಿಗೆ ನಮನ ಸಲ್ಲಿಸಿದರು.

ಈ ವೇಳೆ ತಂಡದ ಸದಸ್ಯ ಕಿರಣ್ ಜೈರಾಮ್ ಗೌಡ ಮಾತನಾಡಿ, ದೇಶದ ಕ್ಷಿಪಣಿ ಪುರುಷ, ಭಾರತರತ್ನ, ಜನಸಾಮಾನ್ಯರ ರಾಷ್ಟ್ರಪತಿ, ಅಪ್ರತಿಮ ದೇಶಭಕ್ತರಾಗಿದ್ದ ಡಾ.ಎಪಿಜೆ ಅಬ್ದುಲ್ ಕಲಾಂ ಅವರು ದೇಶಕ್ಕಾಗಿ ತಮ್ಮ ಬದುಕನ್ನೇ ಸಮರ್ಪಿಸಿದರು. ಅವರ ಸರಳ ಜೀವನ ಎಲ್ಲರಿಗೂ ಮಾದರಿಯಾಗಿತ್ತು. ರಾಷ್ಟ್ರಪತಿಗಳಾದ ಸಂದರ್ಭದಲ್ಲಿ ಒಂದು ಚಿಕ್ಕ ಪೆಟ್ಟಿಗೆಯಲ್ಲಿ ನಾಲ್ಕು ಜೊತೆ ಬಟ್ಟೆ, ಕೆಲವು ಪುಸ್ತಕಗಳೊಂದಿಗೆ ರಾಷ್ಟ್ರಪತಿ ಭವನಕ್ಕೆ ಹೋಗಿದ್ದರು. ಅಧಿಕಾರಾವಧಿ ಮುಗಿದಾಗ ಅಷ್ಟೇ ವಸ್ತುಗಳೊಂದಿಗೆ ಹೊರಬಂದಿದ್ದರು ಎಂದು ಸ್ಮರಿಸಿಕೊಂಡರು.

ಸದಾ ಚಟುವಟಿಕೆಯಿಂದ, ಲವಲವಿಕೆಯಿಂದ ಇರುತ್ತಿದ್ದ ಡಾ.ಕಲಾಂ ಅವರು, ವಿದ್ಯಾರ್ಥಿಗಳೊಂದಿಗೆ ಹೆಚ್ಚಿನ ಸಮಯ ಕಳೆಯುತ್ತಿದ್ದರು. ಮಾರ್ಗದರ್ಶನದೊಂದಿಗೆ ಪ್ರೇರಣಾತ್ಮಕ ನುಡಿಗಳಿಂದ ಮಕ್ಕಳಲ್ಲಿ ನವಚೈತನ್ಯ ಮೂಡಿಸುತ್ತಿದ್ದರು. ತಮ್ಮಿಚ್ಛೆಯಂತೆ ಉಪನ್ಯಾಸ ನೀಡುವಾಗಲೇ ಕೊನೆಯುಸಿರೆಳೆದರು. ಯುವಪೀಳಿಗೆ ರಾಜಕಾರಣಿಗಳು, ನಟ–ನಟಿಯರನ್ನು ಅನುಸರಿಸುವುದನ್ನು ಬಿಟ್ಟು ಡಾ.ಕಲಾಂ ಅವರ ಆದರ್ಶಗಳನ್ನು ಪಾಲಿಸುವ ಮೂಲಕ ದೇಶದ ಸಂಪತ್ತಾಗಬೇಕು ಎಂದು ಆಶಿಸಿದರು.

ಈ ಸಂದರ್ಭದಲ್ಲಿ ತಂಡದ ಸಂಚಾಲಕ ಗೋಕುಲ್ ಗೋವರ್ಧನ್, ಹರೀಶ್ ಬಾಬು, ಹಿರಿಯಣ್ಣ ಹರೀಶ್ ಶೆಟ್ಟಿ, ಸತೀಶ್, ಲಿಂಗರಾಜು, ನವೀನ್, ಹರೀಶ್, ನಿತ್ಯಾನಂದ, ಸುನಿಲ್, ಆನಂದ್, ಮುರಳಿ ಮಂಜು, ಚಂದ್ರಶೇಖರ್ ಮತ್ತಿತರರು ಉಪಸ್ಥಿತರಿದ್ದರು.

ವೆಸ್ಟ್ ಇಂಡೀಸ್ ವಿರುದ್ಧ ಭಾರತಕ್ಕೆ ಗೆಲುವು



ಬ್ರಿಜ್‌ಟೌನ್,ಜು.27(ಸಿಎನ್)– ಇಶಾನ್ ಕಿಶಾನ್ ಅರ್ಧಶತಕ, ಸ್ಪಿನ್ನರ್ ಕುಲದೀಪ್ ಯಾದವ್ ಅವರ ನಾಲ್ಕು ವಿಕೆಟ್ ಹಾಗೂ ರವೀಂದ್ರ ಜಡೇಜಾ ಮೂರು ವಿಕೆಟ್ ಕಬಳಿಸಿದ ನೆರವಿನಿಂದ ಭಾರತ ತಂಡ ಆತಿಥೇಯ ವೆಸ್ಟ್ ಇಂಡೀಸ್ ವಿರುದ್ಧದ ಮೊದಲ ಏಕದಿನ ಪಂದ್ಯದಲ್ಲಿ 5 ವಿಕೆಟ್‌ಗಳ ಭರ್ಜರಿ ಗೆಲುವು ಕಂಡಿದೆ.

ಬಾರ್ಬಡೋಸ್‌ನ ಕೆನ್ಸಿಂಗ್‌ಟನ್ ಓವಲ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ವೆಸ್ಟ್ ಇಂಡೀಸ್, 23 ಓವರ್‌ಗಳಲ್ಲಿ ಕೇವಲ 114 ರನ್‌ಗೆ ಆಲೌಟ್ ಆಯಿತು. ಅಲ್ಪ ಮೊತ್ತವನ್ನು ಚೇಸ್ ಮಾಡಿದ ಟೀಮ್ ಇಂಡಿಯಾ 22.5 ಓವರ್‌ಗಳಲ್ಲಿ 5 ವಿಕೆಟ್‌ಗೆ 118 ರನ್ ಬಾರಿಸಿ ಗೆಲುವು ಕಂಡಿತು.

ಭಾರತ ತಂಡಕ್ಕೆ ಆಸರೆಯಾದ ಇಶಾನ್ ಕಿಶನ್ 46 ಎಸೆತಗಳಲ್ಲಿ 7 ಬೌಂಡರಿ, 1 ಸಿಕ್ಸರ್ ಸಿಡಿಸಿ 52 ರನ್ ನೆರವಿನಿಂದ ಗೆಲುವು ಕಂಡಿತು. ಇದಕ್ಕೂ ಮುನ್ನ ಬ್ಯಾಟಿಂಗ್ ಮಾಡಿದ ವೆಸ್ಟ್ ಇಂಡೀಸ್ ಪರ ಕೈಲ್ ಮೇಯರ್ಸ್ ಕೇವಲ 2 ರನ್ ಬಾರಿಸಿ ಹಾರ್ದಿಕ್ ಪಾಂಡ್ಯಗೆ ವಿಕೆಟ್ ನೀಡಿದರು. ನಂತರ ಬ್ರಾಂಡನ್ ಕಿಂಗ್ (17), ಅಲಿಕ್ ಅಥಾನಾಜೆ (22) ರನ್ ಗಳಿಸಿದರು. ನಾಯಕ ಹಾಗೂ ವಿಕೆಟ್ ಕೀಪರ್ ಶೈ ಹೋಪ್ (43ರನ್, 45 ಎಸೆತ, 4 ಬೌಂಡರಿ, 1 ಸಿಕ್ಸರ್) ಹೋರಾಟ ಮಾಡಿದರಾದರೂ ಅವರಿಗೆ ಇತರ ಬ್ಯಾಟ್ಸ್‌ಮನ್‌ಗಳಿಂದ ಸಾಥ್ ಸಿಗಲಿಲ್ಲ. ತಂಡದ ಮೊತ್ತ 88 ರನ್ ಆಗುವವರೆಗೆ ಹೆಟ್ಮೆಯರ್ (11) ಕ್ರೀಸ್‌ನಲ್ಲಿದ್ದರೆ, ನಂತರದ ಬಂದ ಎಲ್ಲಾ ಬ್ಯಾಟ್ಸ್‌ಮನ್‌ಗಳು ಒಂದಂಕಿ ಮೊತ್ತ ದಾಟಲಿಲ್ಲ. ಕುಲ್‌ದೀಪ್ ಯಾದವ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಬೋಧಕೇತರ ಕಾರ್ಯಗಳಿಗೆ ಶಿಕ್ಷಕರನ್ನು ನಿಯೋಜಿಸದಂತೆ ಸೂಚನೆ

ಬೆಂಗಳೂರು, ಜು.27– ಶಾಲಾ ಶಿಕ್ಷಣ ಇಲಾಖೆಯು ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರನ್ನು ಬೂತ್ ಮಟ್ಟದ ಅಧಿಕಾರಿಗಳನ್ನಾಗಿ (ಬಿಎಲ್‌ಒ) ಹಾಗೂ ಬೋಧಕೇತರ ಕಾರ್ಯಗಳಿಗೆ ನಿಯೋಜಿಸದಂತೆ ಬಿಬಿಎಂಪಿ ವಿಶೇಷ ಆಯುಕ್ತರಿಗೆ (ಚುನಾವಣೆ) ಶಾಲಾ ಶಿಕ್ಷಣ ಇಲಾಖೆಯು ಸೂಚನೆ ನೀಡಿದೆ.

ಶಿಕ್ಷಕರು ಆಯಾ ತರಗತಿಯಲ್ಲಿ ನಿಗದಿ ಮಾಡಿರುವ ಪಠ್ಯವನ್ನು ಪೂರ್ಣಗೊಳಿಸಲು 180 ಮತ್ತು ಒಟ್ಟಾರೆ ಶಾಲಾ ಕೆಲಸದ ದಿನಗಳನ್ನು 244ಕ್ಕೆ ನಿಗದಿ ಮಾಡಿದೆ. ಆದರೆ, ಶಾಲಾ ಶಿಕ್ಷಕರನ್ನು ಜನಗಣತಿ, ಚುನಾವಣಾ ಕಾರ್ಯ, ಮಕ್ಕಳ ಗಣತಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವುದರ ಪರಿಣಾಮ, ಶಾಲಾ ಕರ್ತವ್ಯದ ದಿನಗಳಲ್ಲಿ ಪರೀಕ್ಷೆಗಳು ಮತ್ತು ಮೌಲ್ಯಂಕನ ಕಾರ್ಯ, ಪಠ್ಯೇತರ ಚಟುವಟಿಕೆಗಳಿಗೆ 64 ದಿನಗಳು ಬಳಕೆಯಾಗುತ್ತಿದೆ. ಉಳಿದ 180 ದಿನಗಳನ್ನು ಬೋಧನಾ ಕಾರ್ಯಕ್ಕೆ ನಿಗದಿ ಮಾಡಲಾಗಿದೆ. ಆದರೆ, ವಾಸ್ತವವಾಗಿ ಅಷ್ಟು ದಿನಗಳು ಬೋಧನಾ ಕಾರ್ಯಕ್ಕೆ ಲಭ್ಯವಾಗುತ್ತಿಲ್ಲ. ಇದರಿಂದ ಬೋಧನಾ ಕಾರ್ಯಗಳು ಕುಂಠಿತವಾಗುತ್ತಿದ್ದು, ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದೆ.

ವಿದ್ಯಾರ್ಥಿಗಳ ಶೈಕ್ಷಣಿಕ ಬೆಳವಣಿಗೆಗೆ ಹೆಚ್ಚಾಗಿ ಸ್ಪಂದಿಸಿ ಹಾಗೂ ಉತ್ತಮ ಫಲಿತಾಂಶ ತರುವ ದೃಷ್ಟಿಯಿಂದ ಸರ್ಕಾರವು ಹಲವು ಆದೇಶಗಳ ಮೂಲಕ ಶಿಕ್ಷಕರನ್ನು ಬೋಧಕೇತರ ಕೆಲಸಗಳಿಗೆ ನಿಯೋಜಿಸುವುದನ್ನು ನಿಷೇಧಿಸಿದೆ. ಶಿಕ್ಷಕರನ್ನು ಮತದಾರರ ಪಟ್ಟಿ ಪರಿಷ್ಕರಣೆಗೆ ನಿಯೋಜಿಸುವುದರಿಂದ ಉಚ್ಚ ಮತ್ತು ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳು ಉಲ್ಲಂಘನೆಯಾಗಲಿವೆ. ಆದ್ದರಿಂದ ಶಿಕ್ಷಕರನ್ನು ಬೂತ್ ಮಟ್ಟದ ಅಧಿಕಾರಿಗಳನ್ನಾಗಿ ನಿಯೋಜಿಸದಂತೆ ಸೂಚಿಸಿದ್ದಾರೆ.

ಲಾರಿ ಡಿಕ್ಕಿಯಾಗಿ ಹಳ್ಳಕ್ಕೆ ಬಿದ್ದ ಬೈಕ್; ಸ್ಥಳದಲ್ಲೇ ಮೂವರು ದುರ್ಮರಣ

ಹೊಸಕೋಟೆ, ಜು.27– ಬೈಕ್‌ಗೆ ಲಾರಿಯೊಂದು ಡಿಕ್ಕಿ ಹೊಡೆದ ಪರಿಣಾಮ ಮೂವರು ಮೃತಪಟ್ಟಿರುವ ದಾರುಣ ಘಟನೆ ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೊಸಕೋಟೆ ತಾಲೂಕಿನ ಜಡಿಗೇನಹಳ್ಳಿ ಬಳಿ ನಡೆದಿದೆ. ಒಂದೇ ಕುಟುಂಬದ ಮೂವರು ಪ್ರಾಣ ಕಳೆದುಕೊಂಡಿದ್ದು ಮೃತರನ್ನು ಹೊಸಕೋಟೆ ತಾಲೂಕಿನ ಗೋಣಕನಹಳ್ಳಿ ಗ್ರಾಮದ 38 ವರ್ಷದ ಶ್ವೇತಾ, 19 ವರ್ಷದ ಮನೋಹರ್ ಮತ್ತು 4 ವರ್ಷದ ಸುಕೃತಾ ಎಂದು ಗುರುತಿಸಲಾಗಿದೆ. ಮೂವರು ಬೈಕ್‌ನಲ್ಲಿ ತೆರಳುತ್ತಿದ್ದಾಗ ಹಿಂಬದಿಯಿಂದ ಲಾರಿ ಡಿಕ್ಕಿ ಹೊಡೆದಿದ್ದು ಡಿಕ್ಕಿಯ ರಭಸಕ್ಕೆ ಬೈಕ್ ಹಳ್ಳಕ್ಕೆ ಬಿದ್ದು ಮೂವರು ಸ್ಥಳದಲ್ಲೇ ಪ್ರಾಣಬಿಟ್ಟಿದ್ದಾರೆ. ಹೊಸಕೋಟೆ ಸಂಚಾರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಹೆಚ್.ಪಿ.ಮಹದೇವಸ್ವಾಮಿ ನಿಧನ



ಮೈಸೂರು, ಜು.27– ಮೈಸೂರು ಜೆ.ಪಿ.ನಗರ, ಸಿದ್ಧಲಿಂಗೇಶ್ವರ ಬಡಾವಣೆ ನಿವಾಸಿ, ನಿವೃತ್ತ ಪಶು ವೈದ್ಯಾಧಿಕಾರಿ ಹೆಚ್.ಪಿ. ಮಹದೇವಸ್ವಾಮಿ(61) ಅವರು ಗುರುವಾರ ನಿಧನರಾದರು. ಮೃತರು ಪತ್ನಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ನಂಜನಗೂಡು ತಾಲೂಕು, ಹೊಸಕೋಟೆ ಗ್ರಾಮದಲ್ಲಿರುವ ತೋಟದಲ್ಲಿ ಶುಕ್ರವಾರ ಮಧ್ಯಾಹ್ನ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೆಆರ್‌ಎಸ್ ನೀರಿನ ಮಟ್ಟ



ಗರಿಷ್ಠ ಮಟ್ಟ	124.80 ಅಡಿ
ಗುರುವಾರ	109.60 ಅಡಿ
ಒಳಹರಿವು	37577 ಕ್ಯುಸೆಕ್
ಹೊರಹರಿವು	3071 ಕ್ಯುಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284.00 ಅಡಿ
ಗುರುವಾರ	2282.46 ಅಡಿ
ಒಳ ಹರಿವು	21300 ಕ್ಯುಸೆಕ್
ಹೊರ ಹರಿವು	20000 ಕ್ಯುಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಗುರುವಾರ	2853.82 ಅಡಿ
ಒಳ ಹರಿವು	9326 ಕ್ಯುಸೆಕ್
ಹೊರ ಹರಿವು	5000 ಕ್ಯುಸೆಕ್

ಮೈಸೂರಲ್ಲಿ ಕಸ ವಿಂಗಡಣೆಗೆ ಕಟ್ಟುನಿಟ್ಟಿನ ಕ್ರಮ; ಜನರಿಂದಲೂ ಸಹಕಾರ

ಸಮರ್ಪಕ ರೀತಿ ತ್ಯಾಜ್ಯ ವಿಲೇವಾರಿ ಸಂಬಂಧ ಪಾಲಿಕೆ ಜಿಗಿ ನಿಲುವು

ಮೈಸೂರು, ಜು.27(ಎಸ್‌ಬಿಡಿ)– ಮೈಸೂರು ನಗರದಲ್ಲಿ ಕಟ್ಟುನಿಟ್ಟಾಗಿ ಹಸಿ ಹಾಗೂ ಒಣ ಕಸವನ್ನು ಪ್ರತ್ಯೇಕವಾಗಿ ಸಂಗ್ರಹಿಸಲಾಗುತ್ತಿದ್ದು, ಇದಕ್ಕೆ ಸಾರ್ವಜನಿಕರ ಸಹಕಾರವೂ ಉತ್ತಮವಾಗಿದೆ.

ನಿತ್ಯ ಆಟೋ ಟಿಪ್ಪರ್‌ನಲ್ಲಿ ಸಾರ್ವಜನಿಕರ ಮನೆ ಬಳಿ ಹೋಗಿ ಕಸ ಸಂಗ್ರಹಿಸುವ ಪೌರಕಾರ್ಮಿಕರು, ಹಸಿ ಹಾಗೂ ಒಣ ಕಸವನ್ನು ಪ್ರತ್ಯೇಕವಾಗಿ ನೀಡುವಂತೆ ಮನವರಿಕೆ ಮಾಡಿಕೊಟ್ಟಿದ್ದರು. ಇದೀಗ ಸಂಗ್ರಹಣೆ ಹಂತದಲ್ಲೇ ಕಸ ವಿಂಗಡಣೆಯನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದಾರೆ. ಆಟೋಗೆ ಸುರಿಯುವ ಮುನ್ನ ಸೂಕ್ಷ್ಮವಾಗಿ ಪರಿಶೀಲಿಸುತ್ತಾರೆ. ಮಿಶ್ರಣ ಕಸ ತಂದವರನ್ನು ತಡೆದು, ಸ್ಥಳದಲ್ಲೇ ಬೇರ್ಪಡಿಸಿದ ನಂತರ ವಾಹನಕ್ಕೆ ಸುರಿಯಲು ಅವಕಾಶ ನೀಡುತ್ತಾರೆ. ಧ್ವನಿ ಮುದ್ರಿಕೆ ಮೂಲಕವೂ ಕಸ ವಿಂಗಡಣೆ ಬಗ್ಗೆ ನಿರಂತರವಾಗಿ ಜಾಗೃತಿ ಮೂಡಿಸಲಾಗುತ್ತಿದೆ. ಆದಾಗ್ಯೂ ನಿರ್ಲಕ್ಷಿಸಿದರೆ ಅಂತಹವರಿಂದ ಕಸ ಸ್ವೀಕರಿಸುವುದಿಲ್ಲ.

ಉತ್ತಮ ಸಹಕಾರ: ಸಂಗ್ರಹಣೆ ಹಂತದಲ್ಲೇ ಕಸ ವಿಂಗಡಿಸುವ ಪಾಲಿಕೆ ಕಾರ್ಯಕ್ಕೆ ನಾಗರಿಕರಿಂದ ಉತ್ತಮ ಸ್ಪಂದನೆ ವ್ಯಕ್ತವಾಗುತ್ತಿದೆ. ಪ್ಲಾಸ್ಟಿಕ್ ನಿಷೇಧ, ಹಸಿ ಹಾಗೂ ಒಣ ಕಸ ವಿಂಗಡಣೆ ಬಗ್ಗೆ ವರ್ಷಗಳಿಂದ ಧ್ವನಿ ಮುದ್ರಿಕೆ ಮೂಲಕ ಜಾಗೃತಿ ಮೂಡಿಸುತ್ತಿದ್ದರೂ ಸಾರ್ವಜನಿಕರು ಅದನ್ನು ಗಂಭೀರವಾಗಿ ಪರಿಗಣಿಸಿರಲಿಲ್ಲ. ಕಾರಣ ಪ್ರತ್ಯೇಕವಾಗಿ ನೀಡಿದರೂ ಆಟೋದಲ್ಲಿ ಒಟ್ಟಿಗೆ ಹಾಕಿಕೊಂಡು ಸಾಗಿಸಲಾಗುತ್ತಿತ್ತು. ಹಾಗಾಗಿ ಜನರೂ ಬೇರ್ಪಡಿಸುವ ಗೋಜಿಗೆ ಹೋಗಿರಲಿಲ್ಲ. ಆದರೆ ಕೆಲ ದಿನಗಳಿಂದ ಹಸಿ ಮತ್ತು ಒಣ ಕಸವನ್ನು ಪ್ರತ್ಯೇಕವಾಗಿ ಸಂಗ್ರಹಿಸುತ್ತಿರುವುದರಿಂದ ಸಾರ್ವಜನಿಕರೂ ಸಹಕರಿಸುತ್ತಿದ್ದಾರೆ. ಉತ್ಪತ್ತಿಯಾಗುವ ಕಸವನ್ನು ಮನೆಯಲ್ಲೇ ವಿಂಗಡಿಸಿಟ್ಟುಕೊಂಡು ಪಾಲಿಕೆ ಆಟೋಗೆ ಹಾಕುತ್ತಿದ್ದಾರೆ.



ಬೆಂಗಳೂರು ನಂತರ ಅತೀ ವೇಗವಾಗಿ ಬೆಳೆಯುತ್ತಿರುವ ಮೈಸೂರು ನಗರದಲ್ಲಿ ತ್ಯಾಜ್ಯ ಸಮಸ್ಯೆಯೂ ಜಟಿಲವಾಗುತ್ತಿದೆ. ನಿತ್ಯ 450 ಟನ್‌ಗೂ ಹೆಚ್ಚು ಪ್ರಮಾಣದ ಘನತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು, ಎಲ್ಲಾ ತ್ಯಾಜ್ಯವನ್ನೂ ಸಂಸ್ಕರಣೆ ಮಾಡಲು ಸಾಧ್ಯವಾಗುತ್ತಿಲ್ಲ. ಪರಿಣಾಮ ವಿದ್ಯಾರಣ್ಯಪುರಂನ ಸೀವೆಜ್ ಫಾರಂನಲ್ಲಿರುವ ತ್ಯಾಜ್ಯದ ರಾಶಿ ಹಾಗೆಯೇ ಇದೆ. ಸದ್ಯ ಕೆಸರೆ ತ್ಯಾಜ್ಯ ವಿಲೇವಾರಿ ಘಟಕ ಆರಂಭಿಸಲಾಗಿದೆ. ಈ ಹಿನ್ನೆಲೆಯಲ್ಲಿ ಸಂಗ್ರಹಣೆ ಹಂತದಲ್ಲೇ ಕಸ ವಿಂಗಡಿಸುವ ಕ್ರಮವನ್ನು ಮುಂದಿನ ದಿನಗಳಲ್ಲಿ ಮತ್ತಷ್ಟು ಪರಿಣಾಮಕಾರಿಯಾಗಿ ಅನುಸರಿಸಲಾಗುತ್ತದೆ.

ಸಮರ್ಪಕ ವ್ಯವಸ್ಥೆ: ಡೋರ್ ಟು ಡೋರ್ ಕಸ ಸಂಗ್ರಹಣೆ ವ್ಯವಸ್ಥೆ ಉತ್ತಮವಾಗಿದೆ. ಪ್ರತಿ ವಾರ್ಡ್‌ಗೆ 4–5 ಆಟೋ ಟಿಪ್ಪರ್, ಒಂದು ಟ್ರ್ಯಾಕ್ಟರ್ ಇದೆ. ಪ್ರತಿ ವಲಯ ಕಚೇರಿ ವ್ಯಾಪ್ತಿಯಲ್ಲಿ 3 ಕಾಂಪ್ಯಾಕ್ಟರ್ ವಾಹನಗಳಿವೆ. ಪ್ರತಿ ವಾಹನಗಳಿಗೂ ಚಾಲಕರು, ಕಾರ್ಮಿಕರನ್ನು ನಿಯೋಜಿಸಲಾಗಿದೆ. ಪ್ರಾಯೋಗಿಕವಾಗಿ ಕೆಸರೆ ಪ್ಲಾಂಟ್ ಆರಂಭಿಸಲಾಗಿದ್ದು, ಮುಂದಿನ ದಿನಗಳಲ್ಲಿ ಯಂತ್ರೋಪಕರಣಗಳನ್ನು ಬಳಸಿಕೊಳ್ಳಲಾಗುವುದು. ಎಲ್ಲಾ ರೀತಿಯ ವ್ಯವಸ್ಥೆ ಇರುವುದರಿಂದ ಸಂಗ್ರಹಣೆ ಹಂತದಲ್ಲೇ ಹಸಿ ಮತ್ತು ಒಣ ಕಸವನ್ನು ವಿಂಗಡಿಸಲಾಗುತ್ತಿದೆ. ಇದಕ್ಕೆ ಸಾರ್ವಜನಿಕರಿಂದ ಉತ್ತಮ ಸ್ಪಂದನೆ ವ್ಯಕ್ತವಾಗಿದೆ. ಅಪಾರ್ಟ್‌ಮೆಂಟ್, ಹೋಟೆಲ್, ಛತ್ರ ಇನ್ನಿತರ ಅಧಿಕ ಪ್ರಮಾಣದ ತ್ಯಾಜ್ಯ ಉತ್ಪಾದನೆಯಾಗುವ ಸ್ಥಳಗಳಲ್ಲಿ ಕಡ್ಡಾಯವಾಗಿ ಬೇರ್ಪಡಿಸಿಕೊಡುವಂತೆ ಸೂಚಿಸಲಾಗಿದೆ. ಡೋರ್ ಟು ಡೋರ್ ಸಂಗ್ರಹಿಸುವಾಗಲೂ ಸಾರ್ವಜನಿಕರಿಗೆ ಜಾಗೃತಿ ಮೂಡಿಸಲಾಗುತ್ತಿದೆ. ನಿರ್ಲಕ್ಷಿಸಿದರೆ ಕಸ ನಿರಾಕರಿಸುವ ಹಾಗೂ ದಂಡ ವಿಧಿಸುವುದಕ್ಕೂ ಅವಕಾಶವಿದೆ. ಆದರೆ ಎಲ್ಲರೂ ಉತ್ತಮ ಸಹಕಾರ ನೀಡುತ್ತಿದ್ದಾರೆ. ಶೇ.100ರಷ್ಟು ಅನುಷ್ಠಾನವಾದರೆ ಹಸಿ ಕಸದಿಂದ ಉತ್ತಮ ಗುಣಮಟ್ಟದ ಗೊಬ್ಬರ ಮಾಡಬಹುದು. ಒಣಕಸವನ್ನು ವೈಜ್ಞಾನಿಕವಾಗಿ ಸಂಸ್ಕರಣೆ ಮಾಡಬಹುದು ಎಂದು ನಗರ ಪಾಲಿಕೆ ಆರೋಗ್ಯಾಧಿಕಾರಿ ಡಾ.ನಾಗರಾಜು ತಿಳಿಸಿದ್ದಾರೆ.

ಈ ಕ್ರಮ ಹೊಸದೇನಲ್ಲ: ಇಡೀ ರಾಜ್ಯದಲ್ಲೇ ಮೊದಲು ಹಸಿ ಹಾಗೂ ಒಣ ಕಸ ಬೇರ್ಪಡಿಸಿ, ವೈಜ್ಞಾನಿಕವಾಗಿ ತ್ಯಾಜ್ಯ ಸಂಸ್ಕರಣೆ ಮಾಡಿದ ಹಿರಿಮೆ ಮೈಸೂರಿಗಿದೆ. ಕುಂಬಾರಕೊಪ್ಪಲು ತ್ಯಾಜ್ಯ ಸಂಸ್ಕರಣೆ ಘಟಕ ಇದಕ್ಕೆ ಸಾಕ್ಷಿಯಾಗಿದೆ. ಆದರೆ ಇಡೀ ನಗರದಲ್ಲಿ ಕಸ ಬೇರ್ಪಡಿಸುವ ಕಾರ್ಯ ಅನುಷ್ಠಾನವಾಗಿರಲಿಲ್ಲ. ದಶಕದ ಹಿಂದೆಯೂ ಕಟ್ಟುನಿಟ್ಟಾಗಿ ಪಾಲಿಸಲು ಮುಂದಾಗಿತ್ತಾದರೂ ಸಾಧ್ಯವಾಗಿರಲಿಲ್ಲ. ಈ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲೆಂದು ಹಸಿ ಮತ್ತು ಒಣ ಕಸ ಬೇರ್ಪಡಿಸಲು 2 ಬಕೆಟ್‌ಗಳನ್ನು ಉಚಿತವಾಗಿ ವಿತರಿಸಲಾಗಿತ್ತು. ಆದರೆ ನಂತರದಲ್ಲಿ ಸಮರ್ಪಕ ಸೌಕರ್ಯವಿಲ್ಲದ ಕಾರಣ ಪಾಲಿಕೆಯೇ ಈ ಬಗ್ಗೆ ನಿರ್ಲಕ್ಷ್ಯ ವಹಿಸಿತ್ತು. ಡೋರ್ ಟು ಡೋರ್ ಕಸ ಸಂಗ್ರಹಿಸುವ ವ್ಯವಸ್ಥೆ ಮುಂದುವರೆಯಿತಾದರೂ ವಿಂಗಡಣೆ ಅನುಷ್ಠಾನವಾಗಲಿಲ್ಲ. ಪಾಲಿಕೆಯಿಂದ ನೀಡಿದ್ದ ಬಕೆಟ್‌ಗಳು ರಾಗಿ ಹಿಟ್ಟು–ಅಕ್ಕಿ ಹಿಟ್ಟು ತುಂಬಿಟ್ಟುಕೊಳ್ಳಲು ಬಳಸಿಕೊಳ್ಳಲಾಯಿತು. ಸದ್ಯ ಹಲವು ದಿನಗಳಿಂದ ಸಂಗ್ರಹಣೆ ಹಂತದಲ್ಲೇ ಕಸ ವಿಂಗಡಿಸುವ ಕಾರ್ಯವನ್ನು ಕಟ್ಟುನಿಟ್ಟಾಗಿ ಅನುಸರಿಸಲಾಗುತ್ತಿದ್ದು, ಹೀಗೆಯೇ ಮುಂದುವರೆದರೆ ಒಳಿತು.

ತೊಲಗಿಲ್ಲ ಪ್ಲಾಸ್ಟಿಕ್

ಒಮ್ಮೆ ಬಳಸಿ ಬಿಸಾಡುವ(ಸಿಂಗಲ್ ಯೂಸ್ಡ್) ಪ್ಲಾಸ್ಟಿಕ್ ನಿಷೇಧಿಸಿ ವರ್ಷಗಳಾದರೂ ಇನ್ನೂ ಅವ್ಯಾಹತವಾಗಿ ಬಳಸಲಾಗುತ್ತಿದೆ. ಸಾರ್ವಜನಿಕರು ಕಸ ವಿಂಗಡಿಸಿ ಪ್ಲಾಸ್ಟಿಕ್ ಕವರ್‌ನಲ್ಲೇ ನೀಡುವುದು ಕಂಡುಬರುತ್ತಿದೆ. ಆಟೋ ಟಿಪ್ಪರ್‌ಗೆ ಕಸ ಸುರಿದ ಬಳಿಕ ಪೌರ ಕಾರ್ಮಿಕರು ಪ್ಲಾಸ್ಟಿಕ್ ಅನ್ನು ಪ್ರತ್ಯೇಕವಾಗಿ ಸಂಗ್ರಹಿಸುತ್ತಿದ್ದಾರೆ. ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಅಧ್ಯಕ್ಷರು ಹಾಗೂ ವಿಶ್ರಾಂತ ಉಪಲೋಕಾಯುಕ್ತ ನ್ಯಾಯಮೂರ್ತಿ ಸುಭಾಷ್ ಬಿ.ಆಡಿ ಅವರು ಇತ್ತೀಚೆಗೆ ಮೈಸೂರಲ್ಲಿ ಸಭೆ ನಡೆಸಿ, ಪ್ಲಾಸ್ಟಿಕ್ ನಿಯಂತ್ರಣಕ್ಕೆ ಪರಿಣಾಮಕಾರಿ ಕ್ರಮಕ್ಕೆ ಸೂಚನೆ ನೀಡಿದ್ದಾರೆ. ದಸರಾ ವೇಳೆಗೆ ಚಾಮುಂಡಿ ಬೆಟ್ಟ ಪ್ಲಾಸ್ಟಿಕ್ ಮುಕ್ತವಾಗಬೇಕೆಂದು ಸೂಚಿಸಿದ್ದಾರೆ. ಅತ್ತ ಪಾಲಿಕೆ ಅಧಿಕಾರಿಗಳೂ ನಿರಂತರ ಕಾರ್ಯಾಚರಣೆ ನಡೆಸಿ, ಪ್ಲಾಸ್ಟಿಕ್ ವಶಪಡಿಸಿಕೊಳ್ಳುತ್ತಿದ್ದಾರೆ. ಆದರೂ ಪ್ಲಾಸ್ಟಿಕ್ ಭೂತ ಮರೆಯಾಗಿಲ್ಲ.



ಸಾರ್ವಜನಿಕರ ಸಹಕಾರ ಬಹಳ ಮುಖ್ಯ

ಮೈಸೂರಲ್ಲಿ ಹಸಿ ಮತ್ತು ಒಣ ಕಸವನ್ನು ಮೂಲದಲ್ಲೇ ಬೇರ್ಪಡಿಸಿ, ಸಂಗ್ರಹಿಸುವ ಪ್ರಯತ್ನ ಬಹಳ ಹಿಂದಿನದ್ದು. ಕೇಂದ್ರ ಸರ್ಕಾರದ ಜೆ ನರ್ಮ್ ಯೋಜನೆಯಡಿ ದಶಕದ ಹಿಂದೆಯೇ ನಗರದ 65 ವಾರ್ಡ್‌ಗಳಲ್ಲೂ ಸುಮಾರು ಒಂದೂವರೆ ಲಕ್ಷ ಬಕೆಟ್‌ಗಳನ್ನು ವಿತರಿಸಲಾಗಿತ್ತು. ಆದರೆ ಉದ್ದೇಶ ಮಾತ್ರ ಕಸದೊಂದಿಗೆ ಕಸವಾಗಿ ಹೋಗಿತ್ತು. 'ಸ್ವಚ್ಛ ಸರ್ವೇಕ್ಷಣ್' ಸಮೀಕ್ಷೆಯಲ್ಲಿ ಕಡಿಮೆ ಅಂಕ ಬರಲು ಅಸಮರ್ಪಕ ತ್ಯಾಜ್ಯ ಸಂಸ್ಕರಣೆ ಹಾಗೂ ವಿಲೇವಾರಿಯೂ ಕಾರಣವಾಗಿತ್ತು. ಸದ್ಯ ಮೂಲದಲ್ಲೇ ಕಸ ವಿಂಗಡಣೆಯನ್ನು ಕಟ್ಟುನಿಟ್ಟಾಗಿ ಅನುಸರಿಸುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ. ಸಾರ್ವಜನಿಕರು ಶೇ.100ರಷ್ಟು ಸಹಕಾರ ನೀಡಬೇಕಿದೆ.

ಹಸಿ ಕಸ: ಅಡುಗೆ ಮನೆಯಲ್ಲಿ ಉತ್ಪತ್ತಿಯಾಗುವ ಎಲ್ಲ ರೀತಿಯ ದ್ರವರೂಪದ ವಸ್ತುಗಳು, ಮಣ್ಣಿನಲ್ಲಿ ಗೊಬ್ಬರವಾಗುವ ಅಥವಾ ಕರಗಿಹೋಗುವ ಆಹಾರ ವಸ್ತುಗಳು, ಹೂವು, ಹಣ್ಣಿನ ಸಿಪ್ಪೆ, ಸೊಪ್ಪು, ತರಕಾರಿ ಇನ್ನಿತರ ತ್ಯಾಜ್ಯ.

ಒಣ ಕಸ: ಪೇಪರ್, ಪ್ಲಾಸ್ಟಿಕ್ ಚೀಲಗಳು, ಬಾಟಲುಗಳು, ರಬ್ಬರ್, ಕಬ್ಬಿಣದ ವಸ್ತು ಟೂತ್‌ಪೇಸ್ಟ್ ಕವರ್, ಬಟ್ಟೆ, ಹಾಲಿನ ಪ್ಯಾಕೆಟ್, ಕಡ್ಡಿ, ಸೋಪ್ ಕವರ್ ಸೇರಿದಂತೆ ಎಲ್ಲಾ ರೀತಿಯ ಪ್ಯಾಕಿಂಗ್ ಕವರ್, ಹೀಗೆ ಮರುಬಳಕೆ ಮಾಡಬಹುದಾದ ವಸ್ತುಗಳು.

ಪ್ರೇಕ್ಷಕರ ಕೊರತೆ: ನಂದಾ ಚಿತ್ರಮಂದಿರ ತೆರೆಮರೆಗೆ

- ದರ್ಶನ್, ಸುದೀಪ್, ಯಶ್‌ರಂತಹ ನಟರಿಗೆ ಸ್ಟಾರ್‌ಗಿರಿ ಕೊಟ್ಟ ಥಿಯೇಟರ್
- 61 ವರ್ಷ ಇತಿಹಾಸವುಳ್ಳ ಚಿತ್ರಮಂದಿರ ಸ್ಥಳದಲ್ಲಿ ಮಾಲ್



● ಎಂ.ಕೆ.ಮೋಹನ್‌ರಾಜ್

ಮಂಡ್ಯ, ಜು.27– ಕನ್ನಡ ಸೇರಿದಂತೆ ತಮಿಳು, ತೆಲುಗು ಭಾಷಿಕರ ನೆಚ್ಚಿನ ಚಿತ್ರಮಂದಿರವಾಗಿದ್ದ ನಂದಾ ತೆರೆಮರೆಗೆ ಸರಿಯುತ್ತಿದ್ದು, ಪ್ರೇಕ್ಷಕರ ಕೊರತೆಯಿಂದ ಚಿತ್ರಮಂದಿರವನ್ನು ನೆಲಸಮ ಮಾಡಲಾಗುತ್ತಿದೆ. ಮಂಡ್ಯ ನಗರದ ಹೃದಯ ಭಾಗದಲ್ಲಿದ್ದ ಒಂದು ಎಕರೆಗೂ ಹೆಚ್ಚಿರುವ ಚಿತ್ರಮಂದಿರದ ಜಾಗದಲ್ಲಿ ಬೃಹತ್ ಮಾಲ್ ತಲೆ ಎತ್ತಲಿದೆ.

ನಗರದ ಮತ್ತೊಂದು ಪ್ರತಿಷ್ಠಿತ ಗುರುಶ್ರೀ ಚಿತ್ರಮಂದಿರದ ಸೋದರ ಸಂಸ್ಥೆಯಾದ ನಂದಾ ಚಿತ್ರಮಂದಿರ 1962ರ ಜ.14ರಂದು ಆರಂಭಗೊಂಡಿತು. ಬರೋಬ್ಬರಿ 61 ವರ್ಷಗಳಿಂದ ಸಕ್ಕರೆ ನಾಡು ಮಂಡ್ಯ ಜಿಲ್ಲೆ ಜನರನ್ನು ರಂಜಿಸಿಕೊಂಡು ಬರುತ್ತಿದ್ದ ಚಿತ್ರಮಂದಿರ ಇದೀಗ ಪ್ರೇಕ್ಷಕರ ಕೊರತೆಯಿಂದ ನೆಲಸಮವಾಗುತ್ತಿದ್ದು, ಇದು ನಿಜಕ್ಕೂ ಸಿನಿಪ್ರಿಯರ ಬೇಸರಕ್ಕೆ ಕಾರಣವಾಗಿದೆ.

ಕೊರೊನಾ ಬಳಿಕ ಮಂಡ್ಯ ಸೇರಿದಂತೆ ರಾಜ್ಯದಲ್ಲೇ ಚಿತ್ರಮಂದಿರಗಳ ಪರಿಸ್ಥಿತಿ ಶೋಚನೀಯವಾಗಿದ್ದು, ದಿನಕ್ಕೊಂದು ಪ್ರದರ್ಶನ ಕಂಡರೆ ದೊಡ್ಡದು ಎನಿಸಿದೆ. ನಂದಾ ಚಿತ್ರಮಂದಿರದಲ್ಲಿ ಕೊರೊನಾ ಬಳಿಕ ಸಿಬ್ಬಂದಿಗೆ ಸಂಬಳ ಕೊಡುವಷ್ಟು ಆದಾಯ ಬರುತ್ತಿರಲಿಲ್ಲ. ಜೊತೆಗೆ ಮಾಲೀಕರು ಹೇಳುವಂತೆ ಉತ್ತಮ ಸಿನಿಮಾಗಳ ಕೊರತೆ. ಸ್ಟಾರ್ ನಟರ ಸಿನಿಮಾ ಬಾರದಿರುವುದು ಚಿತ್ರಮಂದಿರ ಸ್ಥಗಿತಗೊಳಿಸುವುದಕ್ಕೆ ಪ್ರಮುಖ ಕಾರಣವಾಗಿದೆ.

ಎಲ್ಲಾ ವರ್ಗದ ಜನರ ನೆಚ್ಚಿನ ಥಿಯೇಟರ್: 1962ರಲ್ಲಿ ನಂದಾ ಚಿತ್ರಮಂದಿರ ಆರಂಭವಾದಾಗ ಮಂಡ್ಯದಲ್ಲಿ ಸಂಜಯ, ಗಿರಿಜಾ ಹಾಗೂ ಜಯಲಕ್ಷ್ಮಿ ಚಿತ್ರಮಂದಿರಗಳು ಮಾತ್ರ ಇದ್ದವು. ಅದರಲ್ಲೂ ಮಂಡ್ಯ ಹೃದಯ ಭಾಗದಲ್ಲಿ ಸಂಜಯ ಚಿತ್ರಮಂದಿರವೊಂದೇ ಇದ್ದ ಕಾರಣ ನಂದಾ ಚಿತ್ರಮಂದಿರಕ್ಕೆ ಬಹಳ ಬೇಡಿಕೆ ಇತ್ತು ಡಾ.ರಾಜ್‌ಕುಮಾರ್, ಡಾ.ವಿಷ್ಣುವರ್ಧನ್, ರೆಬಲ್‌ಸ್ಟಾರ್ ಅಂಬರೀಶ್, ಶಂಕರ್‌ನಾಗ್, ಪ್ರಭಾಕರ್, ಅನಂತ್‌ನಾಗ್, ಶಿವರಾಜ್‌ಕುಮಾರ್, ರವಿಚಂದ್ರನ್‌ರಂತಹ ಸ್ಟಾರ್ ನಟರ ಸಿನಿಮಾ ಬಿಡುಗಡೆಯಾಗಲು ನಂದಾ ಚಿತ್ರಮಂದಿರದಲ್ಲಿ ಬಹಳ ಪೈಪೋಟಿ ಇತ್ತು.

ಚಿತ್ರಮಂದಿರದಲ್ಲಿ ಬಾಲ್ಕನಿ ಇಲ್ಲದಿದ್ದರೂ, ಆಧುನಿಕತೆಗೆ ತಕ್ಕಂತೆ ಡಿಟಿಎಸ್ ತಂತ್ರಜ್ಞಾನ ಹೊಂದಿದ್ದ ಚಿತ್ರಮಂದಿರದಲ್ಲಿ ವಿಶಾಲವಾಗ ಋರ್ಚಿ ಹಾಗೂ ಪಾರ್ಕಿಂಗ್ ವ್ಯವಸ್ಥೆ ಇತ್ತು. ಚಿತ್ರಮಂದಿರ ಆರಂಭವಾದ ಬಳಿಕ ಎಡಕಲ್ಲು ಗುಡ್ಡದ ಮೇಲೆ, ನಾನೊಬ್ಬ ಕಳ್ಳ, ಕರ್ಣ, ಜನನಾಯಕ, ಕರುಣಾಮಯಿ, ಮುತ್ತಿನಹಾರ, ಮನೆಯೇ ಮಂತ್ರಾಲಯ, ಕಲಿಯುಗ ಭೀಮ, ರಣಧೀರ, ಅಂಜದಗಂಡು, ಎಸ್.ಪಿ.ಸಾಂಗ್ಲಿಯಾನ ಭಾಗ–1, ಭಾಗ–2, ಜೋಡಿ, ಚಕ್ರವ್ಯೂಹ, ಮಿಡಿದ ಹೃದಯಗಳು, ಒಲವಿನ ಉಡುಗೊರೆ, ವೀರಾಧಿವೀರ ಚಿತ್ರಮಂದಿರಗಳು ಶತದಿನೋತ್ಸವ ಆಚರಿಸಿದ್ದವು.

ಥಿಯೇಟರ್ ಹೆಚ್ಚಾದಂತ ಬೇಡಿಕೆ ಕಡಿಮೆ: ಹೆಚ್ಚಿನ ತಂತ್ರಜ್ಞಾನವುಳ್ಳ ಗುರುಶ್ರೀ, ಮಹಾವೀರ ಸೇರಿದಂತೆ ಇನ್ನಿತರ ಚಿತ್ರಮಂದಿರಗಳು ಮಂಡ್ಯದಲ್ಲಿ ನಿರ್ಮಾಣವಾದ ಪರಿಣಾಮ ಬಾಲ್ಕನಿ ಇಲ್ಲದ ನಂದಾ ಚಿತ್ರಮಂದಿರಕ್ಕೆ ಬೇಡಿಕೆ ಕಡಿಮೆಯಾಯಿತು. ಆಗ ತಮಿಳು, ತೆಲುಗು, ಹಿಂದಿ ಚಿತ್ರಮಂದಿರದ ಸೆಂಟರ್ ಆಗಿ ಬದಲಾದರೂ, ಕನ್ನಡ ಚಿತ್ರಕ್ಕೆ ಹೆಚ್ಚಿನ ಆದ್ಯತೆ ಸಿಗುತ್ತಿತ್ತು. ಆದಾಗ್ಯೂ ಕಳೆದ 20 ವರ್ಷಗಳಿಂದೀಚೆಗೆ ಬಿಡುಗಡೆಯಾದ ಜಮೀನ್ದಾರು, ಲೇಡಿ ಕಮಿಷನರ್, ಅಣ್ಣ–ತಂಗಿ, ದುನಿಯಾ, ರಂಗಿತರಂಗ, ಆಪ್ತರಕ್ಷ, ಕರಿಯಾ, ಗೌರಮ್ಮ, ಸ್ವಾತಿಮುತ್ತು, ದೃಶ್ಯ, ಈಗ ಸೇರಿದಂತೆ ಇನ್ನು ಹಲವು ಸಿನಿಮಾಗಳು ನೂರು ದಿನ ಪೂರೈಸಿದೆ.

ಈಗಾಗಲೇ ಹೇಳಿದಂತೆ ಗುರುಶ್ರೀ ಚಿತ್ರಮಂದಿರದ ಸಹೋದರ ಸಂಸ್ಥೆಯಾದ ನಂದಾದಲ್ಲಿ ಗುರುಶ್ರೀಯಲ್ಲಿ ಬಿಡುಗಡೆಯಾದ ಅನೇಕ ಸ್ಟಾರ್ ನಟರ ಸಿನಿಮಾಗಳ ಬೆಳಗ್ಗಿನ ಆಟ ಪ್ರದರ್ಶನವಾದರೆ, ನಂದಾದಲ್ಲಿ ಬಿಡುಗಡೆಯಾಗುತ್ತಿದ್ದ ಚಿತ್ರದ ಮೊದಲ ಆಟ ಗುರುಶ್ರೀಯಲ್ಲಿ ಪ್ರದರ್ಶನಗೊಳ್ಳುತ್ತಿತ್ತು.

ನಟರಿಗೆ ಸ್ಟಾರ್‌ಪಟ್ಟ ತಂದುಕೊಟ್ಟ ಚಿತ್ರಮಂದಿರ: 90–2000ರ ದಶಕದಲ್ಲಿ ವಿಷ್ಣುವರ್ಧನ್, ಅಂಬರೀಶ್, ರವಿಚಂದ್ರನ್, ಶಿವರಾಜ್ ಕುಮಾರ್‌ರಂತಹ ನಟರಿಗೆ ಹೆಚ್ಚಿನ ಬೇಡಿಕೆ ಇದ್ದ ವೇಳೆ ಚಿತ್ರರಂಗಕ್ಕೆ ಪಾದರ್ಪಣೆ ಮಾಡಿದ್ದ ದರ್ಶನ್, ಸುದೀಪ್, ನಂತದ ಯಶ್, ದುನಿಯಾ ವಿಜಯ್, ಗಣೇಶ್‌ರಂತಹ ನಟರ ಸಿನಿಮಾಗಳಿಗೆ ಮಂಡ್ಯದಲ್ಲಿ ಚಿತ್ರಮಂದಿರಗಳ ಕೊರತೆ ಉಂಟಾದಾಗ ದರ್ಶನ್‌ರ ಕಿಟ್ಟಿ, ಧರ್ಮ, ಸುದೀಪ್ ನಟನೆಯ ಹುಚ್ಚ, ಚಂದು, ಯಶ್ ನಟನೆಯ ಮೊದಲ ಸಲ, ಗಣೇಶ್ ಅವರ ಮೊದಲ ಸಿನಿಮಾ ಚೆಲ್ಲಾಟ, ದುನಿಯಾ ವಿಜಯ್ ಮೊದಲ ಸಿನಿಮಾ ದುನಿಯಾ ಸೇರಿದಂತೆ ಹಲವು ಹೊಸ ನಟರಿಗೆ ಈ ಚಿತ್ರಮಂದಿರ ಲಕ್ಕಿಯಾಗಿತ್ತು. ಅದಾದ ನಂತರ ತಮಿಳು, ತೆಲುಗು, ಹಿಂದಿ ಸೆಂಟರ್ ಆಗಿ ಪರಿವರ್ತನೆಯಾಯಿತು.

ಒಂದೊಂದೇ ಚಿತ್ರಮಂದಿರಗಳು ತೆರೆಮರೆಗೆ: ಕಳೆದ 2 ದಶಕಗಳ ಹಿಂದೆ 10ಕ್ಕೂ ಹೆಚ್ಚು ಚಿತ್ರಮಂದಿರಗಳನ್ನು ಹೊಂದಿದ್ದ ಮಂಡ್ಯ ನಗರದಲ್ಲಿ ಒಂದೊಂದೇ ಚಿತ್ರಮಂದಿರಗಳು ತೆರೆ ಮರೆಗೆ ಸರಿಯುತ್ತಿವೆ. ರಾಮಕೃಷ್ಣ ಚಿತ್ರಮಂದಿರ ಸ್ಥಗಿತಗೊಂಡು ಹಲವು ದಶಕಗಳೇ ಕಳೆದರೆ, ಧರ್ಮಶ್ರೀ ಕಲ್ಯಾಣ ಮಂಟಪವಾಗಿದೆ. ಸಿದ್ಧಾರ್ಥ ಚಿತ್ರಮಂದಿರ ಇತ್ತೀಚೆಗೆ ನೆಲಸಮವಾದರೆ, ಗಿರಿಜಾ ಚಿತ್ರಮಂದಿರ ಸ್ಥಗಿತಗೊಂಡಿದೆ. ಇನ್ನು ಜಯಲಕ್ಷ್ಮಿ ಚಿತ್ರಮಂದಿರ ಆಗಾಗ ಸ್ಥಗಿತಗೊಂಡು ಮತ್ತೆ ಪುನರ್ ಪ್ರಾರಂಭವಾದರೆ, ನಂದಾ ಇದೀಗ ನೆಲಸಮಗೊಳ್ಳುತ್ತಿದೆ. ಮಂಡ್ಯ ನಗರದಲ್ಲಿ ಸದ್ಯ ಪ್ರದರ್ಶನಕ್ಕೆ ಸೀಮಿತವಾಗಿರುವುದು ಗುರುಶ್ರೀ, ಸಂಜಯ, ಮಹಾವೀರ ಚಿತ್ರಮಂದಿರ ಮಾತ್ರ. ಇವುಗಳಾದರೂ ತಕ್ಕಮಟ್ಟಿಗೆ ನಡೆದುಕೊಂಡು ಹೋಗಲಿ ಎಂಬುದು ಸಿನಿಪ್ರಿಯರ ಅಭಿಲಾಷೆ.

> ಕಳೆದ ಎರಡ್ಮೂರು ವರ್ಷಗಳ ಹಿಂದೆಯೇ ಚಿತ್ರಮಂದಿರ ನೆಲಸಮ ಮಾಡುವ ಚಿಂತನೆ ಇತ್ತು. ಆದರೆ ಸಾಧ್ಯವಾಗಿರಲಿಲ್ಲ. ಪ್ರೇಕ್ಷಕರ ಕೊರತೆ ಹಾಗೂ ಒಳ್ಳೆಯ ಚಲನಚಿತ್ರ ಬರದಿರುವುದರಿಂದ ಚಿತ್ರಮಂದಿರ ನಡೆಸಲು ದುಸ್ತರವಾಗಿತ್ತು. ಈ ನಿಟ್ಟಿನಲ್ಲಿ 61 ವರ್ಷ ಇತಿಹಾಸವುಳ್ಳ ನಂದಾ ಚಿತ್ರಮಂದಿರವನ್ನು ನೆಲಸಮ ಮಾಡಿ ವಾಣಿಜ್ಯ ಮಳಿಗೆ ನಿರ್ಮಿಸಲು ಸಿದ್ಧತೆ ಮಾಡಿಕೊಂಡಿದ್ದೇವೆ. ಇತ್ತೀಚೆಗೆ ರುದ್ರಾಂಗಿ ಎಂಬ ತೆಲುಗು ಚಿತ್ರ ಪ್ರದರ್ಶನ ಮಾಡಿ, ಚಿತ್ರ ಪ್ರದರ್ಶನ ಸ್ಥಗಿತಗೊಳಿಸಿದ್ದು, ಚಿತ್ರಮಂದಿರದ ನೆಲಸಮ ಕಾರ್ಯ ನಡೆಯುತ್ತಿದೆ. ಶೀಘ್ರ ಪೂರ್ಣಗೊಳಿಸಿ, ಹೊಸ ಕಟ್ಟಡ ನಿರ್ಮಾಣವಾಗಲಿದೆ.
>
> – **ಶ್ರೀಕಾಂತ್**, ಮಾಲೀಕರು, ನಂದಾ ಚಿತ್ರಮಂದಿರ.

ವಿದ್ಯಾರ್ಥಿಗಳು ಸೋಲು–ಗೆಲುವನ್ನು ಸಮಾನವಾಗಿ ಸ್ವೀಕರಿಸಿ: ಬಿಇಓ



ಪಾಂಡವಪುರ, ಜು.27– ಕ್ರೀಡಾಕೂಟಗಳಲ್ಲಿ ಭಾಗವಹಿಸುವ ಕ್ರೀಡಾಪಟುಗಳು ಸೋಲು ಮತ್ತು ಗೆಲುವನ್ನು ಸಮಾನವಾಗಿ ಸ್ವೀಕರಿಸಬೇಕು. ಸೋತ ವಿದ್ಯಾರ್ಥಿಗಳು ಕುಗ್ಗದೆ ಸೋಲೆ ಗೆಲುವಿನ ಮೆಟ್ಟಿಲೆಂದು ಮುನ್ನಡೆಯಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಚಂದ್ರಶೇಖರ್ ತಿಳಿಸಿದರು.

ತಾಲೂಕಿನ ಬನ್ನಂಗಾಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ನಡೆದ ಬನ್ನಂಗಾಡಿ ಮತ್ತು ಅರಳಕುಪ್ಪೆ ವೃತ್ತಮಟ್ಟದ 2023–24ನೇ ಸಾಲಿನ ಕ್ರೀಡಾಕೂಟ ಉದ್ಘಾಟಿಸಿ ಅವರು ಮಾತನಾಡಿದರು. ವಿದ್ಯಾರ್ಥಿಗಳು ಕ್ರೀಡಾಕೂಟಗಳಲ್ಲಿ ಭಾಗವಹಿಸುವ ಮನೋಭಾವ ಬೆಳೆಸಿಕೊಳ್ಳಬೇಕು. ಇದರಿಂದ ದೈಹಿಕವಾಗಿ ಸದೃಢವಾಗುವ ಜೊತೆಗೆ ಮನಸ್ಸು ಹತೋಟಿಯಲ್ಲಿರುತ್ತದೆ. ಇದರಿಂದ ನಿಮ್ಮ ಶೈಕ್ಷಣಿಕ ಪ್ರಗತಿಗೆ ನೆರವಾಗಲಿದೆ ಎಂದರು.

ಕ್ರೀಡಾಕೂಟಗಳು ಮಕ್ಕಳಲ್ಲಿ ಸೋದರತ್ವ ಮನೋಭಾವ ಬೆಳೆಸುತ್ತವೆ. ಇದರಿಂದ ಉತ್ತಮ ಸಂಬಂಧ, ಬಾಂಧವ್ಯ ಬೆಳೆಯುತ್ತವೆ ಎಂದರು. ಕ್ರೀಡಾಕೂಟದಲ್ಲಿ ಬನ್ನಂಗಾಡಿ, ಬಿಂಡಹಳ್ಳಿ, ಡಿಂಕಾ, ಮಲ್ಲಿಗೆರೆ, ಹೊಸಸಾಯಪನಹಳ್ಳಿ, ಅಂತನಹಳ್ಳಿ, ಹೊಸಕನ್ನಂಬಾಡಿ, ನಾರ್ಥ್ ಬ್ಯಾಂಕ್, ಕಟ್ಟೇರಿ, ಅರಳಕುಪ್ಪೆ, ಸೀತಾಪುರ, ಹರವು ಸರ್ಕಾರಿ ಹಿ.ಪ್ರಾ.ಶಾಲೆಗಳು, ಬನ್ನಂಗಾಡಿ ಗ್ರಾಮದ ಪ್ರಗತಿ ವಿದ್ಯಾ ಸಂಸ್ಥೆ ಹಾಗೂ ಅರಳಕುಪ್ಪೆಯ ವಿವೇಕನಂದಾ ಶಿಕ್ಷಣ ಸಂಸ್ಥೆಗಳ 400ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಎಸ್‌ಡಿಎಂಸಿ ಅಧ್ಯಕ್ಷ ಲೋಕೇಶ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ದೈಹಿಕ ಶಿಕ್ಷಣ ಪರಿವೀಕ್ಷಕ ಎಸ್.ಬಸವ ರಾಜು, ಪ್ರಾಥಮಿಕ ಶಾಲ ಶಿಕ್ಷಕರ ಸಂಘದ ಅಧ್ಯಕ್ಷ ಮಂಜುನಾಥ್, ಕಾರ್ಯದರ್ಶಿ ಕುಮಾರ್, ಮುಖ್ಯಶಿಕ್ಷಕ ವಿಜೇಂದ್ರ, ಗ್ರಾಪಂ ಉಪಾಧ್ಯಕ್ಷ ತಮ್ಮೇಗೌಡ, ಸದಸ್ಯ ರಾದ ಬಿ.ಜಿ.ಪ್ರಭಾಕರ್, ಪ್ರಕಾಶ್, ಡೇರಿ ಅಧ್ಯಕ್ಷ ಚಂದ್ರಶೇಖರ್, ಮುಖಂಡರಾದ ಪಿ.ನಾಗೇಗೌಡ, ಬಿ.ಡಿ.ಹುಚ್ಚೇಗೌಡ, ಬಿ.ಪಿ.ಶ್ರೀನಿವಾಸ್, ಬಿ.ಜೆ.ಸ್ವಾಮಿ. ಯ.ಕರೀಗೌಡ, ತಮ್ಮಣ್ಣಚಾರ್, ಶಿವೇಗೌಡ, ರಾಮಕೃಷ್ಣೇಗೌಡ, ಶಿಕ್ಷಕರಾದ ಸುರೇಂದ್ರ, ಯುವರಾಜು, ದೈಹಿಕರಾದ ಶಿಕ್ಷಕ ಪ್ರಕಾಶ್, ಮಹೇಶ್ ಸೇರಿದಂತೆ ಹಲವರಿದ್ದರು.

ಸ್ಕಾಲರ್‌ಶಿಪ್‌ಗೆ ಅರ್ಜಿ ಆಹ್ವಾನ

ಮಂಡ್ಯ, ಜು.27– ಪ್ರಸಕ್ತ ಸಾಲಿನ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಕೇಂದ್ರ ಪುರಸ್ಕೃತ Top School ಸ್ಕಾಲರ್‌ಶಿಪ್‌ಗೆ ಅರ್ಜಿ ಆಹ್ವಾನಿಸಿದೆ. ಹಿಂದುಳಿದ ವರ್ಗದವರು, ಆರ್ಥಿಕವಾಗಿ ಹಿಂದುಳಿದವರು, ಅಲೆಮಾರಿ ಮತ್ತು ಅರೆ–ಅಲೆಮಾರಿ ವರ್ಗದವರು ಅರ್ಜಿ ಸಲ್ಲಿಸಬಹುದಾಗಿದ್ದು, ಅರ್ಜಿ ಸಲ್ಲಿಸಲು ಆ.10 ಕೊನೆ ದಿನ.

ಹೆಚ್ಚಿನ ಮಾಹಿತಿಗಾಗಿ http://socialjustice.gob.in/schemes/ ಹಾಗೂ ಹಿಂದುಳಿಗ ವರ್ಗಗಳ ಜಿಲ್ಲಾ ಕಚೇರಿ ಸಂಪರ್ಕಿಸಬಹುದು ಎಂದು ಜಿಲ್ಲಾ ಹಿಂದುಳಿದ ಕಲ್ಯಾಣ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಕ್ಷಾತೀತವಾಗಿ ಪಟ್ಟಣದ ಸಮಗ್ರ ಅಭಿವೃದ್ಧಿಗೆ ಶ್ರಮಿಸೋಣ

ಶಾಸಕ ಹೆಚ್.ಟಿ.ಮಂಜು



ಕೆ.ಆರ್.ಪೇಟೆ, ಜು.27– ಪಟ್ಟಣದ ಅಭಿವೃದ್ಧಿ ವಿಚಾರದಲ್ಲಿ ನಾನು ರಾಜಕಾರಣ ಮಾಡಲ್ಲ. ಹೀಗಾಗಿ ಎಲ್ಲರೂ ಪಕ್ಷಾತೀತವಾಗಿ ಪಟ್ಟಣದ ಸಮಗ್ರ ಅಭಿವೃದ್ಧಿಗೆ ಶ್ರಮಿಸೋಣ ಎಂದು ಶಾಸಕ ಹೆಚ್.ಟಿ.ಮಂಜು ತಿಳಿಸಿದರು.

ಪಟ್ಟಣದ ಪುರಸಭೆ ವತಿಯಿಂದ ಪೌರ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಪಟ್ಟಣದಲ್ಲಿ ಒಳಚರಂಡಿ ಸೇರಿದಂತೆ ಹಲವು ಸಮಸ್ಯೆಗಳಿವೆ. ಪಟ್ಟಣದ ಜನತೆ ತಮ್ಮ ಕೆಲಸಗಳಿಗಾಗಿ ಪುರಸಭೆಗೆ ನಿತ್ಯ ಅಲೆಯುತ್ತಿದ್ದಾರೆ. ನಿವೇಶನ ಸೇರಿದಂತೆ ಮನೆಗಳ ಇ–ಸ್ವತ್ತು ಮಾಡಿಕೊಡಲು ವಿನಾಕಾರಣ ಸತಾಯಿಸಲಾಗುತ್ತಿದೆ. ಜನಸಾಮಾನ್ಯರ ಕಾನೂನು ಬದ್ಧ ಕೆಲಸಗಳನ್ನು ನಿಗದಿತ ಅವಧಿಯೊಳಗೆ ಮಾಡಿಕೊಡುವ ಮೂಲಕ ಪುರಸಭಾ ಸಿಬ್ಬಂದಿ ಬದ್ಧತೆ ಮರೆಯಬೇಕು ಎಂದರು.

ಪಟ್ಟಣದ ಹೇಮಾವತಿ ಮತ್ತು ಟಿಬಿ ಬಡಾವಣೆ ನಿವೇಶನಗಳ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡು ಹಿಡಿಯಲು ಸಂಬಂಧಿಸಿದ ಪೌರಾಡಳಿತ ಇಲಾಖೆ ಮಂತ್ರಿಗಳ ಬಳಿ ನಿಯೋಗ ಹೋಗಲು ನಿಮ್ಮೊಂದಿಗೆ ನಾನು ಬರುತ್ತೇನೆ. ನಗರೋತ್ಥಾನ ಅನುದಾನ ಸೇರಿದಂತೆ ನೆನಗುದಿಗೆ ಬಿದ್ದಿರುವ ಒಳಚರಂಡಿ ಯೋಜನೆ ಪೂರ್ಣಗೊಳಿಸಲು ಪುರಸಭೆಯೊಂದಿಗೆ ನಾನು ಒಗ್ಗೂಡಿ ಕೆಲಸ ಮಾಡುತ್ತೇನೆ ಎಂದರು. ಇದೇ ವೇಳೆ ಇಲ್ಲಿನ ಪುರಸಭೆಯಲ್ಲಿ ಕಾರ್ಯ ನಿರ್ವಹಿಸಿ ಚನ್ನಪಟ್ಟಣ ನಗರಸಭೆಗೆ ವರ್ಗಾವಣೆಗೊಂಡ ಸಹಾಯಕ ಇಂಜಿನಿಯರ್ ಮಧುಸೂದನ್, ಲೆಕ್ಕಾಧಿಕಾರಿ ಚಂದ್ರಕಲಾ ಹಾಗೂ ಶ್ರೀರಂಗಪಟ್ಟಣ ಪುರಸಭೆಗೆ ವರ್ಗಾವಣೆಯಾಗಿರುವ ಕಚೇರಿ ವ್ಯವಸ್ಥಾಪಕ ಸೋಮಶೇಖರ್ ಅವರನ್ನು ಸನ್ಮಾನಿಸಲಾಯಿತು.

ಪೌರ ಸನ್ಮಾನ ಕಾರ್ಯಕ್ರಮದಲ್ಲಿ ಪುರಸಭೆಯ 23 ಸದಸ್ಯರು ಭಾಗವಹಿಸಿದ್ದರು. ನಂತರ ಪುರಸಭಾಧ್ಯಕ್ಷೆ ಮಹಾದೇವಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಉಪಾಧ್ಯಕ್ಷೆ ಗಾಯಿತ್ರಿ, ಪ್ರಮೋದ್ ಕುಮಾರ್, ಬಸ್ ಸಂತೋಷ್ ಕುಮಾರ್, ಎಚ್.ಆರ್. ಲೋಕೇಶ್, ಕೆ.ಸಿ.ಮಂಜುನಾಥ್, ಡಿ.ಪ್ರೇಮಕುಮಾರ್, ಪ್ರವೀಣ್, ಶುಭ, ಶೋಭ ಭಾಗವಹಿಸಿ ವಿವಿಧ ವಿಷಯಗಳ ಅನುಷ್ಠಾನದ ಬಗ್ಗೆ ಚರ್ಚೆ ನಡೆಸಿ ಒಪ್ಪಿಸಿ ಸೂಚಿಸಿದರು.

ಪುರಸಭಾಧ್ಯಕ್ಷೆ ಮಹಾದೇವಿ ವಿರುದ್ಧ ಬಂಡಾಯವೆದ್ದಿರುವ 13 ಸದಸ್ಯರು ಶಾಸಕರ ಪೌರ ಸನ್ಮಾನಕ್ಕೆ ಆಗಮಿಸಿ ನಂತರ ಸಾಮಾನ್ಯ ಸಭೆಯಲ್ಲಿ ಭಾಗವಹಿಸದೆ ಸಭೆಯಿಂದ ಹೊರ ನಡೆದರು. ಸದಸ್ಯರಾದ ಸುಗುಣ, ಕಮ್ಮರ್ ಬೇಗಮ್ ಸಲ್ಲು, ಕಲ್ಪನಾ, ಸೌಭಾಗ್ಯ, ಪದ್ಮ, ಇಂದ್ರಾಣಿ, ಶಾಮಿಯಾನ ತಿಮ್ಮೇಗೌಡ, ಹೆಚ್.ಡಿ.ಅಶೋಕ್, ಗಿರೀಶ್, ರವೀಂದ್ರ ಬಾಬು, ನಟರಾಜ್ ಹಾಗೂ ಪಂಕಜ ಶಾಸಕ ಹೆಚ್.ಟಿ.ಮಂಜು ಅವರನ್ನು ಪ್ರತ್ಯೇಕವಾಗಿ ಸನ್ಮಾನಿಸಿದರು.

ಅರ್ಜಿ ಆಹ್ವಾನ

ಮಂಡ್ಯ, ಜು.27– ಬೆಳ್ಳೂರು ಟೌನ್ ಪಂಚಾಯ್ತಿ ವ್ಯಾಪ್ತಿಯಲ್ಲಿ ಅನುಷ್ಠಾನಗೊಂಡಿರುವ ಕಲ್ಯಾಣ ಕಾರ್ಯಕ್ರಮದಡಿ 2023–24ನೇ ಸಾಲಿಗೆ ಶೇ.7.25ರ ಯೋಜನೆಯಡಿ ಇತರೆ ಹಿಂದುಳಿದ ವರ್ಗದ ಕುಟುಂಬಗಳ ಮನೆ ಮೇಲ್ಛಾವಣಿ ದುರಸ್ಥಿ ಸಾಮಾಗ್ರಿ ಖರೀದಿ/ಸಹಾಯಧನ ನೀಡಲು ಹಾಗೂ ಶೇ.24.10 ಯೋಜನೆಯಡಿ ಬೆಳ್ಳೂರು ಪಪಂ ವ್ಯಾಪ್ತಿಯಲ್ಲಿ ಅಂತಿಮ ವರ್ಷದ ಪದವಿ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ/ ಉತ್ತೀರ್ಣಗೊಂಡಿರುವ ಪೌರಕಾರ್ಮಿಕರ ಮಕ್ಕಳು ಹಾಗೂ ಪರಿಶಿಷ್ಟ ಜಾತಿ ಅಭ್ಯರ್ಥಿಗಳಿಗೆ ಐಎಎಸ್/ಕೆಎಎಸ್ ಹಾಗೂ ಇನ್ನಿತರ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಲು ತರಬೇತಿ ನೀಡಲು ಅರ್ಹರಿಂದ ಅರ್ಜಿ ಆಹ್ವಾನಿಸಿದೆ.

ಅರ್ಜಿಯನ್ನು ಆ.19ರೊಳಗೆ ಸಲ್ಲಿಸುವಂತೆ ತಿಳಿಸಲಾಗಿದೆ. ಹೆಚ್ಚಿನ ಮಾಹಿತಿಗೆ ದೂ:7795972204 ಅನ್ನು ಸಂಪರ್ಕಿಸಿ ಎಂದು ಪ್ರಕಟಣೆ ತಿಳಿಸಿದೆ.

ದಾಖಲಾತಿಗಾಗಿ ಅರ್ಜಿ ಆಹ್ವಾನ

ಮಂಡ್ಯ, ಜು.27– ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಕಾರ್ಯ ನಿರ್ವಹಿಸುತ್ತಿರುವ ಸರ್ಕಾರಿ ಮುಸ್ಲಿಂ ವಸತಿ ಶಾಲೆ, ಕಾವೇರಿ ನಗರ, ಶ್ರೀರಂಗಪಟ್ಟಣ ಟೌನ್ ಇಲ್ಲಿಗೆ 2023–24ನೇ ಶೈಕ್ಷಣಿಕ ಸಾಲಿಗೆ ಪ್ರಥಮ ಪಿಯುಸಿ ಪಿಸಿಎಂಬಿ(ವಿಜ್ಞಾನ ವಿಭಾಗ) ಮತ್ತು ಪ್ರಥಮ ಪಿಯುಸಿ ಸಿಇಬಿಎ(ವಾಣಿಜ್ಯ ವಿಭಾಗ) ಉಚಿತ ದಾಖಲಾತಿಗಾಗಿ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ವಿದ್ಯಾರ್ಥಿಗಳು ಜು.31ರೊಳಗೆ ಅರ್ಜಿ ಸಲ್ಲಿಸಬಹುದು. ಮಾಹಿತಿಗೆ ದೂ:08232–297240 ಸಂಪರ್ಕಿಸಲು ಪ್ರಕಟಣೆ ತಿಳಿಸಿದೆ.

ವಿಶ್ವೇಶ್ವರಯ್ಯ ನಾಲೆಗೆ ಉರುಳಿ ಬಿದ್ದ ಕಾರು; ನೀರಲ್ಲಿ ಕೊಚ್ಚಿಹೋದ ಚಾಲಕ

● ಮಂಡ್ಯದ ತಿಬ್ಬನಹಳ್ಳಿ ಬಳಿ ದುರ್ಘಟನೆ ● ಚಾಲಕನಿಗಾಗಿ ಶೋಧ ಕಾರ್ಯಾಚರಣೆ



ಲೋಕೇಶ್



ಮಂಡ್ಯ, ಜು.27(ಮೋಹನರಾಜ್)– ಚಾಲಕನ ನಿಯಂತ್ರಣ ತಪ್ಪಿದ ಕಾರು ವಿಶ್ವೇಶ್ವರಯ್ಯ ನಾಲೆಗೆ ಉರುಳಿ ಬಿದ್ದು, ಚಾಲಕ ಕೊಚ್ಚಿ ಹೋದ ಘಟನೆ ಮಂಡ್ಯ ತಾಲೂಕಿನ ತಿಬ್ಬನಹಳ್ಳಿ ಬಳಿ ಗುರುವಾರ ಬೆಳಗ್ಗೆ ನಡೆದಿದೆ.

ಮೂಲತಃ ಶಿವಳ್ಳಿ ಗ್ರಾಮದವರಾಗಿದ್ದು, ಮಂಡ್ಯದಲ್ಲಿ ವಾಸಿಸುತ್ತಿದ್ದ ಲೋಕೇಶ್ (40), ನೀರಿನಲ್ಲಿ ಕೊಚ್ಚಿ ಹೋಗಿದ್ದು, ಅಗ್ನಿಶಾಮಕ ದಳದ ಸಿಬ್ಬಂದಿ ಹಾಗೂ ನುರಿತ ಈಜುಗಾರರು ಹುಡುಕಾಟ ನಡೆಸುತ್ತಿದ್ದಾರೆ.

ವಿವರ: ಲೋಕೇಶ್ ಇಂದು ಬೆಳಗ್ಗೆ ಕಾರ್ಯನಿಮಿತ್ತ ಸ್ನೇಹಿತನ ಸ್ವಿಫ್ಟ್ ಕಾರಿನಲ್ಲಿ ತಿಬ್ಬನಹಳ್ಳಿ ಮಾರ್ಗವಾಗಿ ಪಾಂಡವಪುರಕ್ಕೆ ತೆರಳುತ್ತಿದ್ದ ವೇಳೆ ನಿಯಂತ್ರಣ ತಪ್ಪಿದ ಕಾರು ನಾಲೆಗೆ ಉರುಳಿ ಬಿದ್ದಿದೆ.

ಕೆಆರ್‌ಎಸ್‌ನಿಂದ ನಾಲೆಗಳಿಗೆ ನೀರು ಬಿಡುಗಡೆ ಮಾಡಿರುವ ಪರಿಣಾಮ ನಾಲೆ ತುಂಬಿ ಹರಿಯುತ್ತಿದ್ದು, ಬಿದ್ದ ತಕ್ಷಣವೇ ಲೋಕೇಶ್ ಕಾರಿನ ಗಾಜು ಹೊಡೆದು ಹೊರಬಂದು ಕಾಪಾಡಿ, ಕಾಪಾಡಿ ಎಂದು ಚೀರಾಡಿದ್ದಾರೆ. ಆದರೆ ಸ್ಥಳದಲ್ಲಿದ್ದವರಿಗೂ ಈಜು ಬಾರದ ಕಾರಣ ಅಸಹಾಯಕರಾಗಿದ್ದು, ಲೋಕೇಶ್ ಕೊಚ್ಚಿ ಹೋಗುತ್ತಿರುವುದನ್ನು ಕಂಡು ಪೊಲೀಸರಿಗೆ ಹಾಗೂ ಅಗ್ನಿಶಾಮಕ ಸಿಬ್ಬಂದಿಗೆ ಮಾಹಿತಿ ನೀಡಿದ್ದಾರೆ. ತಕ್ಷಣವೇ ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಕಾರನ್ನು ಮೇಲಕ್ಕೆತ್ತಿ, ಕೊಚ್ಚಿಹೋದ ಲೋಕೇಶ್‌ಗಾಗಿ ಹುಡುಕಾಟ ನಡೆಸುತ್ತಿದ್ದಾರೆ.

ಸ್ಥಳೀಯ ನಿವಾಸಿ ವೀರಭದ್ರ ಎಂಬುವರ ಪ್ರಕಾರ ಲೋಕೇಶ್ ಕಾರಿನಿಂದ ಹೊರ ಬಂದಿದ್ದರು. ಈಜು ಬರಲ್ಲ ಕಾಪಾಡಿ ಎಂದು ಚೀರಾಡಿದರು. ಆದರೆ ನಮಗೆ ಈಜು ಬರುತ್ತಿರಲಿಲ್ಲ. ಆದ್ದರಿಂದ ಅವರನ್ನು ಕಾಪಾಡಲು ಆಗಲಿಲ್ಲ. ನೀರಿನಲ್ಲಿ ಮುಳುಗಿದ ಲೋಕೇಶ್ ಮತ್ತೆ ಮೇಲೇಳಲಿಲ್ಲ ಎಂದರು. ವೇಬ್ರಿಡ್ಜ್ ನಿರ್ಮಾಣದ ಕೆಲಸ ಮಾಡುತ್ತಿದ್ದ ಲೋಕೇಶ್, ಪತ್ನಿ ಹಾಗೂ ಮಗಳೊಂದಿಗೆ ಮಂಡ್ಯದಲ್ಲಿ ವಾಸಿಸುತ್ತಿದ್ದರು. ಕಾರ್ಯನಿಮಿತ್ತ ಪಾಂಡವಪುರಕ್ಕೆ ತೆರಳುತ್ತಿದ್ದರು. ಈ ಸಂಬಂಧ ಶಿವಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶಾಸಕ ದರ್ಶನ್, ಎಸ್ಪಿ ಭೇಟಿ: ವಿಶ್ವೇಶ್ವರಯ್ಯ ನಾಲೆಗೆ ಕಾರು ಬಿದ್ದ ವಿಷಯ ತಿಳಿಯುತ್ತಿದ್ದಂತೆಯೇ ಶಾಸಕ ದರ್ಶನ್ ಪುಟ್ಟಣ್ಣಯ್ಯ, ಮಂಡ್ಯ ಎಸ್ಪಿ ಎನ್.ಯತೀಶ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಈ ವೇಳೆ ಹಾಜರಿದ್ದ ಲೋಕೋಪಯೋಗಿ ಇಂಜಿನಿಯರ್ ಜಗದೀಶ್ ಅವರನ್ನು ಶಾಸಕರು ಹಾಗೂ ಎಸ್ಪಿ ಎದುರೇ ಸಾರ್ವಜನಿಕರು ತರಾಟೆಗೆ ತೆಗೆದುಕೊಂಡರು. ರಸ್ತೆ ನಿರ್ಮಾಣ ನೆಪದಲ್ಲಿ ತಡೆಗೋಡೆ ಏಕೆ ತೆರವು ಮಾಡಿದ್ದೀರಿ. ನಿಮ್ಮ ಮತ್ತು ಗುತ್ತಿಗೆದಾರನ ಬೇಜವಾಬ್ದಾರಿತನವೇ ದುರ್ಘಟನೆಗೆ ಕಾರಣ ಎಂದು ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಶಾಸಕ ದರ್ಶನ್ ಪುಟ್ಟಣ್ಣಯ್ಯ, ಅನಾಹುತ ಆದ ಮೇಲೆ ನಾವೆಲ್ಲಾ ಶೋ ಕೊಡಕ್ಕೆ ಬಂದಿದ್ದೀವಿ ಎಂದು ಅಸಹಾಯಕತೆ ವ್ಯಕ್ತಪಡಿಸಿದರು. ಇದೊಂದು ದುಃಖಕರ ಘಟನೆ. ಹಿಂದೆಯೂ ಇಂತಹ ಘಟನೆಗಳು ಸಾಕಷ್ಟು ನಡೆದಿವೆ. ಅನಾಹುತ ನಡೆದಾಗ ತಡೆಗೋಡೆಗೆ ಒತ್ತಾಯಿಸಿದ್ದೆವು. ರಸ್ತೆ ಮಾಡುವಾಗ ತಡೆಗೋಡೆ ನಿರ್ಮಾಣ ಮಾಡದೇ ಇರುವುದು ಗುತ್ತಿಗೆದಾರರ ಜವಾಬ್ದಾರಿ ಆಗಿರುತ್ತದೆ. ತಕ್ಷಣ ತಡೆಗೋಡೆ ನಿರ್ಮಾಣ ಮಾಡಲು ಸೂಚನೆ ನೀಡಲಾಗಿದೆ. ಅವರು ಮಾಡದಿದ್ದರೆ ನಾವೇ ಊರವರ ಜೊತೆ ಸೇರಿ ಏನು ಮಾಡಬೇಕೋ ಮಾಡುತ್ತೇವೆ. ಮುನ್ನೆಚ್ಚರಿಕೆ ಕ್ರಮ ವಹಿಸುವುದು ಮರೆತಿದ್ದೇವೆ. ಕನಗನಮರಡಿ ದುರಂತವೂ ಅಷ್ಟೇ, ಘಟನೆ ಬಳಿಕ ತಡೆಗೋಡೆ ಹಾಕಲಾಯಿತು. ಇಲ್ಲೂ ಯಾರಾದರೂ ಸಾಯಬೇಕು. ಅಲ್ಲಿವರೆಗೂ ಏನು ಕ್ರಮ ಆಗಲ್ಲ ಎಂದು ಅಧಿಕಾರಿಗಳ ವಿರುದ್ಧ ಬೇಸರ ವ್ಯಕ್ತಪಡಿಸಿದರು.

> ## ಎರಡು ಭೀಕರ ದುರಂತವಾದರೂ ಇನ್ನೂ ಎಚ್ಚೆತ್ತುಕೊಳ್ಳದ ಅಧಿಕಾರಿಗಳು
>
> **ಮಂಡ್ಯ:** ನಾಲೆಗೆ ವಾಹನಗಳು ಉರುಳಿ ಬೀಳುವುದು, ಜನರು ಸಾಯುವುದು ಮಂಡ್ಯದಲ್ಲಿ ಹೀಗಾಗಿ ಸಂಭವಿಸಿದ್ದರೂ ಜಿಲ್ಲೆಯ ಅಧಿಕಾರಿಗಳು ಮಾತ್ರ ಶಾಶ್ವತವಾಗಿ ಇವುಗಳಿಗೆ ಪರಿಹಾರ ಕಲ್ಪಿಸಲು ವಿಫಲರಾಗಿದ್ದಾರೆ. ಜಿಲ್ಲೆಯ ವಿವಿಧೆಡೆ ನಾಲೆಗಳಿಗೆ ತಡೆಗೋಡೆ ನಿರ್ಮಿಸಲು ಈವರೆಗೂ ಮುಂದಾಗಿಲ್ಲ. ಮೈಸೂರು ತಾಲೂಕಿನ ಉಂಡುಬತ್ತಿ ಕೆರೆ ಹಾಗೂ ಪಾಂಡವಪುರ ತಾಲೂಕಿನ ಕನಗನಮರಡಿ ದುರಂತದಲ್ಲಿ ಹಲವರು ಸಾವನ್ನಪ್ಪಿದರೂ ಜಿಲ್ಲಾಡಳಿತ ಹಾಗೂ ಜನಪ್ರತಿನಿಧಿಗಳು ಎಚ್ಚೆತ್ತುಕೊಳ್ಳುತ್ತಿಲ್ಲ. 2018ರ ನ.24ರಂದು ಪಾಂಡವಪುರ ತಾಲೂಕಿನ ಕರಗನಮರಡಿ ಬಳಿ ನಾಲೆಗೆ ಬಸ್ ಬಿದ್ದು ಶಾಲಾ ಮಕ್ಕಳು ಸೇರಿದಂತೆ 30 ಮಂದಿ ಸಾವನ್ನಪ್ಪಿದ್ದರು. ಅಂದು ವಿಶ್ವೇಶ್ವರಯ್ಯ ನಾಲೆಗೆ ತಡೆಗೋಡೆ ನಿರ್ಮಿಸುತ್ತೇವೆ ಎಂದು ಭರವಸೆ ನೀಡಿದ್ದ ಅಂದಿನ ಸರ್ಕಾರ ಹಾಗೂ ಜಿಲ್ಲಾಡಳಿತ ಈವರೆಗೂ ತಡೆಗೋಡೆ ನಿರ್ಮಿಸಿಲ್ಲ.

ಸರ್ಕಾರಿ ಶಾಲಾ ಮಕ್ಕಳ ಬಿಸಿಯೂಟದಲ್ಲಿ ಮೀನು ಸಾರು

ತೆಲಂಗಾಣದ ಪ್ರಸ್ತಾಪಕ್ಕೆ ರಾಜ್ಯದ ಕರಾವಳಿಯಲ್ಲೂ ಚರ್ಚೆ

ಬೆಂಗಳೂರು: ರಾಜ್ಯದಲ್ಲಿ ಸರ್ಕಾರಿ ಶಾಲಾ ಮಕ್ಕಳಿಗೆ ನೀಡುವ ಬಿಸಿಯೂಟದ ವಿಚಾರ ಭಾರೀ ಚರ್ಚೆಗೆ ಗ್ರಾಸವಾಗುತ್ತಿದೆ. ಮಕ್ಕಳಿಗೆ ಪೌಷ್ಠಿಕಾಂಶವುಳ್ಳ ಆಹಾರ ನೀಡಬೇಕು ಎಂದು ಸರ್ಕಾರ ಚಿಂತನೆ ನಡೆಸುತ್ತಿರುವುದು ಒಂದೆಡೆಯಾದರೆ, ಮತ್ತೊಂದೆಡೆ ಸಸ್ಯಾಹಾರ, ಮಾಂಸಾಹಾರದ ವಿಚಾರದಲ್ಲಿ ಚರ್ಚೆಗಳು ಆರಂಭವಾಗಿವೆ. ಕಳೆದ ಕೆಲ ವರ್ಷಗಳಿಂದ ಶಾಲಾ ಮಕ್ಕಳಿಗೆ ನೀಡುವ ಮೊಟ್ಟೆ ವಿಚಾರದಲ್ಲೂ ವಿವಾದ ಶುರುವಾಗಿತ್ತು.

ಈ ಎಲ್ಲಾ ಚರ್ಚೆಗಳ ನಡುವಲ್ಲೂ ಶಾಲಾ ಮಕ್ಕಳಿಗೆ ಪೌಷ್ಠಿಕಾಂಶಯುಕ್ತ ಆಹಾರ ನೀಡುವ ದೃಷ್ಟಿಯಿಂದ ಸರ್ಕಾರ, ಅತೀ ಹೆಚ್ಚು ಮಕ್ಕಳು ಬಯಸಿದ್ದರಿಂದ ಬಿಸಿಯೂಟದ ಜೊತೆಗೆ ಕೋಳಿ ಮೊಟ್ಟೆ ನೀಡುತ್ತಿದೆ. ಇದರ ಜೊತೆಗೆ ಬಾಳೆಹಣ್ಣು, ಚಿಕ್ಕಿ, ಬೇಳೆ ಸಾರು ಸೇರಿದಂತೆ ಇತರ ಪೌಷ್ಠಿಕಾಂಶಯುಕ್ತ ಆಹಾರವನ್ನು ಬಿಸಿಯೂಟದಲ್ಲಿ ನೀಡಲಾಗುತ್ತಿದೆ.

ಇದರ ನಡುವಲ್ಲೇ ತೆಲಂಗಾಣ ರಾಜ್ಯ ಸರ್ಕಾರ ತಮ್ಮ ರಾಜ್ಯದ ಸರ್ಕಾರಿ ಮಕ್ಕಳಿಗೆ ಮಧ್ಯಾಹ್ನದ ಊಟದಲ್ಲಿ ಮೀನು ಸಾರು ಸೇರಿಸುವ ಕುರಿತು ಚಿಂತನೆ ನಡೆಸುತ್ತಿದ್ದು, ರಾಜ್ಯದ ಬಿಸಿಯೂಟದಲ್ಲಿಯೂ ಮೀನಿನ ಸಾರು ಸೇರಿಸಬೇಕು ಎಂಬುದರ ಕುರಿತು ಕರಾವಳಿಯಲ್ಲಿ ಚರ್ಚೆಗಳು ಆರಂಭವಾಗಿವೆ.

ತೆಲಂಗಾಣ ರಾಜ್ಯ ಮೀನುಗಾರರ ಸಹಕಾರ ಒಕ್ಕೂಟವು ಸಲ್ಲಿಸಿದ ಪ್ರಸ್ತಾವನೆಯನ್ನು ತೆಲಂಗಾಣ ಸರ್ಕಾರವು ಪರಿಶೀಲಿಸುತ್ತಿರುವ ಹಿನ್ನೆಲೆಯಲ್ಲಿ ರಾಜ್ಯದಲ್ಲೂ ಈ ಕುರಿತ ಚರ್ಚೆಗಳು ಆರಂಭವಾಗಿವೆ.

ಈ ನಡುವಲ್ಲೇ ಬಿಸಿಯೂಟ ಮೆನುವಿನಲ್ಲಿ ಮೀನಿನ ಸಾರು ಸೇರಿಸುವ ಪರವಾಗಿ ತಜ್ಞರು ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದಾರೆ. ಮೀನಿನ ಪ್ರೋಟೀನ್ ಶಾಲಾ ಮಕ್ಕಳಿಗೆ ಪ್ರಯೋಜನವನ್ನು ನೀಡುತ್ತದೆ. ಮಕ್ಕಳು ಸ್ಥಳೀಯವಾಗಿ ಲಭ್ಯವಿರುವ ಆಹಾರವನ್ನು ಸೇವಿಸುವುದು ಉತ್ತಮ ಎಂದು ಹೇಳುತ್ತಿದ್ದಾರೆ.

ಆಹಾರ ಭದ್ರತಾ ಕಾಯಿದೆಯಂತೆ ಮಕ್ಕಳ ಆಹಾರ ಕ್ರಮದಲ್ಲಿ ಪ್ರೊಟೀನ್ ಅವಶ್ಯವಾಗಿದೆ. ಇಲ್ಲದಿದ್ದರೆ, ಕಾರ್ಬೋಹೈಡ್ರೇಟ್ ಮತ್ತು ಕೊಬ್ಬಿನಂಶ ಇರುವ ಆಹಾರವನ್ನು ಮಾತ್ರ ಸೇವಿಸಿದಂತಾಗುತ್ತದೆ. ಮಕ್ಕಳು ತಮಗೆ ಬೇಕಾದುದನ್ನು ಸೇವಿಸಲು ಅವಕಾಶವಿದೆ. ಮಕ್ಕಳಲ್ಲಿ ಚಿಕ್ಕವಯಸ್ಸಿನಲ್ಲೇ ಏನು ಬೇಕಾದರೂ ತಿನ್ನಬಹುದು ಎಂಬ ಅರಿವು ಮೂಡಿಸಬೇಕು ಎಂದು ಅಭಿವೃದ್ಧಿ ಶಿಕ್ಷಣತಜ್ಞ ಡಾ ವಿಪಿ ನಿರಂಜನಾರಾಧ್ಯ ಹೇಳಿದ್ದಾರೆ.

ಸಾರ್ವಜನಿಕ ಆರೋಗ್ಯ ವೈದ್ಯೆ ಮತ್ತು ಸಂಶೋಧಕಿ ಡಾ ಸಿಲ್ವಿಯಾ ಕರ್ಪಗಮ್ ಅವರು ಮಾತನಾಡಿ, ಇಂತಹ ಬೆಳವಣಿಗೆಗಳು ಸ್ಥಳೀಯ ಆರ್ಥಿಕತೆಗೆ ಸಹಾಯ ಮಾಡುತ್ತದೆ ಎಂದು ತಿಳಿಸಿದ್ದಾರೆ.

ಸ್ಥಳೀಯ ಮೀನುಗಳ ಬಳಕೆಯನ್ನು ಉತ್ತೇಜಿಸುವುದು ಸ್ಥಳೀಯ ಮೀನುಗಾರರಿಗೆ ಸಹಾಯ ಮಾಡಿದಂತಾಗುತ್ತದೆ. ಇದು ಆರ್ಥಿಕತೆಯನ್ನೂ ಹೆಚ್ಚಿಸುತ್ತದೆ. ಕರಾವಳಿ ಪ್ರದೇಶಗಳಲ್ಲಿನ ಶಾಲೆಗಳಲ್ಲಿ ಇದನ್ನು ಪರಿಚಯಿಸುವುದು ಪ್ರಯೋಜನಕಾರಿಯಾಗಿದೆ. ತೆಲಂಗಾಣ ಸರ್ಕಾರ ಈಗಾಗಲೇ ಈ ಬಗ್ಗೆ ಚಿಂತನೆ ನಡೆಸುತ್ತಿದೆ. ಆದರೆ, ಕರ್ನಾಟಕದಲ್ಲಿ ಬಿಸಿಯೂಟದಲ್ಲಿ ಮೊಟ್ಟೆ ಸೇರಿಸಲು ಸರ್ಕಾರ ಹೆಣಗಾಡುವಂತಾಗಿತ್ತು. ಇಂದಿರಾ ಕ್ಯಾಂಟೀನ್‌ನಲ್ಲಿ ಮೆನುವಿನಲ್ಲಿ ಇನ್ನೂ ಸೇರ್ಪಡೆಗೊಳಿಸಲು ಸಾಧ್ಯವಾಗಿಲ್ಲ. ಟೀಕೆಗಳಿಂದಾಗಿ ಸರ್ಕಾರ ಇಂತಹ ನಿರ್ಧಾರ ಕೈಗೊಳ್ಳಲು ಹಿಂಜರಿಯುತ್ತಿದೆ ಎಂದು ಹೇಳಿದ್ದಾರೆ.

ಮೀನುಗಾರರ ಸಹಕಾರಿಗಳ ರಾಷ್ಟ್ರೀಯ ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕ ರಿಷಿಕೇಶ್ ಕಶ್ಯಪ್ ಮಾತನಾಡಿ, ತೆಲಂಗಾಣ ಸರ್ಕಾರದ ಪ್ರಸ್ತಾವನೆಯಲ್ಲಿ ರಾಜ್ಯದ ಮೀನುಗಾರರ ವ್ಯಾಪಾರವನ್ನು ಉತ್ತೇಜಿಸಲು ಹಲವಾರು ಯೋಜನೆಗಳಿವೆ. ಬಿಹಾರ, ಉತ್ತರ ಪ್ರದೇಶ ಮತ್ತು ಇತರ ರಾಜ್ಯಗಳಲ್ಲಿ ಇದೇ ರೀತಿಯ ಪ್ರಸ್ತಾಪಗಳನ್ನು ಪರಿಗಣಿಸಲಾಗುತ್ತಿದೆ. ಆದರೆ, ಕರ್ನಾಟಕ ಸರ್ಕಾರ ಅಂತಹ ನಿರ್ಧಾರಗಳನ್ನು ಕೈಗೊಂಡಿಲ್ಲ. ಸ್ಥಳೀಯ ಮೀನುಗಾರರೊಂದಿಗೆ ಒಪ್ಪಂದ ಮಾಡಿಕೊಂಡಿರುವುದರಿಂದ ಸರ್ಕಾರ ಯೋಜನೆಗೆ ಮುಂದಾಗಿದ್ದೇ ಆದರೆ, ಅದು ಸುಲಭವಾಗಲಿದೆ ಎಂದು ಹೇಳಿದ್ದಾರೆ.

ಒಂದನೇ ಪುಟದಿಂದ

ಮೈಸೂರು ಪಾಲಿಕೆ ನೂತನ ಆಯುಕ್ತ

ಬರಮಾಡಿಕೊಂಡು ಶುಭಕೋರಿದರು. ಪಾಲಿಕೆ ಆಯುಕ್ತರಾಗಿದ್ದ ಜಿ. ಲಕ್ಷ್ಮೀಕಾಂತ ರೆಡ್ಡಿ ಅವರನ್ನು ವರ್ಗಾವಣೆ ಮಾಡಲಾಗಿದ್ದು, ಸಕ್ಷಮ ಪ್ರಾಧಿಕಾರದಲ್ಲಿ ವರದಿ ಮಾಡಿಕೊಳ್ಳುವಂತೆ ಆದೇಶದಲ್ಲಿ ತಿಳಿಸಲಾಗಿದೆ. ಬಿಇ (ಮೆಕಾನಿಕಲ್ ಇಂಜಿನಿಯರಿಂಗ್) ಪದವೀಧರರಾದ ಅಶಾದ್ ಉರ್ ರೆಹಮಾನ್ ಶರೀಫ್ 2004ರಲ್ಲಿ ಕೆಎಎಸ್‌ನಲ್ಲಿ ಕರ್ನಾಟಕ ಪೌರಾಡಳಿತ ಸೇವೆಗಳು (KMAS) ದರ್ಜೆಯ ಅಧಿಕಾರಿಗಳಾಗಿ ಸರ್ಕಾರಿ ಸೇವೆಗೆ ಆಯ್ಕೆಯಾದ ಅವರು ಬೆಂಗಳೂರಿನ ಪೌರಾಡಳಿತ ನಿರ್ದೇಶನಾಲಯದ ಜಂಟಿ ನಿರ್ದೇಶಕರಾಗಿದ್ದರು. 2003 ರಿಂದ 2006ರ ವರೆಗೆ ಪೊಲೀಸ್ ಇಲಾಖೆಯಲ್ಲಿ ಸಬ್‌ಇನ್‌ಸ್ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸಿದ್ದ ಶರೀಫ್, 2007 ರಿಂದ 2010ರ ವರೆಗೆ ಗುಂಡ್ಲುಪೇಟೆ ಪುರಸಭೆ ಮುಖ್ಯಾಧಿಕಾರಿಯಾಗಿ, 2010 ರಿಂದ 2013 ರವರೆಗೆ ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಾಗಿ 2013 ರಿಂದ 17 ರವರೆಗೆ ತುಮಕೂರು ನಗರಪಾಲಿಕೆ ಆಯುಕ್ತರಾಗಿ 2017 ರಿಂದ 2019ರವರೆಗೆ ದಾವಣಗೆರೆ ಸ್ಮಾರ್ಟ್ ಸಿಟಿ ಯೋಜನೆಯಲ್ಲಿ ಸಿಇಓ ಆಗಿ, 2020 ರಿಂದ 2023ರವರೆಗೆ ಮೈಸೂರು ಜಿಲ್ಲಾ ಅಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದರು. ಮೈಸೂರು ಮಹಾನಗರ ಪಾಲಿಕೆ ಆಯುಕ್ತರಾಗಿ ಅಧಿಕಾರ ವಹಿಸಿಕೊಂಡ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನನಗೆ ಮೈಸೂರು ನಗರ ಚಿರಪರಿಚಿತವಾಗಿದ್ದು, ನಾಗರಿಕರಿಗೆ ಕುಡಿಯುವ ನೀರು, ರಸ್ತೆ, ಚರಂಡಿ, ಪಾರ್ಕ್, ಸ್ವಚ್ಛತೆ ನಿರ್ವಹಿಸುವುದು ಮೂಲ ಸೌಕರ್ಯ ಅಭಿವೃದ್ಧಿಗೆ ಆದ್ಯತೆ ನೀಡಬೇಕಾಗಿದೆ ಎಂದರು. ಜಿಲ್ಲಾ ಉಸ್ತುವಾರಿ ಸಚಿವರ ಮಾರ್ಗದರ್ಶನದಲ್ಲಿ ಸಂಸದರು, ಶಾಸಕರು, ಕಾರ್ಪೊರೇಟರ್‌ಗಳು ಹಾಗೂ ಅಧೀನಾಧಿಕಾರಿಗಳು, ಸಿಬ್ಬಂದಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಾಂಸ್ಕೃತಿಕ ನಗರಿಯ ಸೌಂದರ್ಯ, ಪರಂಪರೆ, ಇತಿಹಾಸಕ್ಕೆ ದಕ್ಕೆ ಬಾರದಂತೆ ಸ್ವಚ್ಛತೆ ಕಾಪಾಡಿಕೊಂಡು ಒಳ್ಳೆಯ ಕೆಲಸ ಮಾಡಲು ಎಲ್ಲರ ಸಹಕಾರ ಕೋರುತ್ತೇನೆ ಎಂದು ನುಡಿದರು.

ಜ್ಞಾನವ್ಯಾಪಿ ಆವರಣದಲ್ಲಿ ಆಗಸ್ಟ್ 3ರವರೆಗೆ ಸರ್ವೆ ಇಲ್ಲ: ಅಲಹಾಬಾದ್ ಹೈಕೋರ್ಟ್

ನವದೆಹಲಿ, ಜು.27– ಜ್ಞಾನವ್ಯಾಪಿ ಆವರಣದಲ್ಲಿ ಆಗಸ್ಟ್ 3ರವರೆಗೆ ವೈಜ್ಞಾನಿಕ ಸರ್ವೆ ನಡೆಸಬಾರದು ಎಂದು ಅಲಹಾಬಾದ್ ಹೈಕೋರ್ಟ್ ಮಧ್ಯಂತರ ಆದೇಶ ನೀಡಿದೆ. ವಾರಣಾಸಿಯ ಜ್ಞಾನವಾಪಿ ಮಸೀದಿ ಸ್ಥಳದ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ (ಎಎಸ್‌ಐ) ಸಮೀಕ್ಷೆಗೆ ಸಂಬಂಧಿಸಿದಂತೆ ಅಲಹಾಬಾದ್ ಹೈಕೋರ್ಟ್ ಆಗಸ್ಟ್ 3 ರಂದು ತನ್ನ ತೀರ್ಪನ್ನು ಪ್ರಕಟಿಸಲಿದ್ದು, ಅಲ್ಲಿಯವರೆಗೆ ಎಎಸ್‌ಐ ಸಮೀಕ್ಷೆಗೆ ಮಧ್ಯಂತರ ತಡೆ ಜಾರಿಯಲ್ಲಿರುತ್ತದೆ ಎಂದು ನ್ಯಾಯಾಲಯ ಹೇಳಿದೆ.

ಸೋಮವಾರ ಸುಪ್ರೀಂಕೋರ್ಟ್‌ನಿಂದ ತಾತ್ಕಾಲಿಕವಾಗಿ ತಡೆಹಿಡಿಯಲಾದ ಮಸೀದಿಯ ಸಮೀಕ್ಷೆಗೆ ಸಂಬಂಧಿಸಿದಂತೆ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಪ್ರಿಟಿಂಕರ್ ದಿವಾಕರ್ ಇಂದು ಎರಡೂ ಕಡೆಯ ವಾದಗಳನ್ನು ಆಲಿಸಿದರು. ಸಮೀಕ್ಷೆಗೆ ಸುಪ್ರೀಂಕೋರ್ಟ್ ನೀಡಿದ್ದ ತಡೆಯಾಜ್ಞೆಯನ್ನು ಬುಧವಾರ ಹೈಕೋರ್ಟ್ ಜುಲೈ 27ರವರೆಗೆ ವಿಸ್ತರಿಸಿತ್ತು. ಎಎಸ್‌ಐನ ಹೆಚ್ಚುವರಿ ನಿರ್ದೇಶಕರು ಈ ಹಿಂದೆ ಹೈಕೋರ್ಟ್‌ಗೆ ಅಫಿಡವಿಟ್ ಸಲ್ಲಿಸಿದ್ದು, ಸಮೀಕ್ಷೆಯ ಸಮಯದಲ್ಲಿ ಮಸೀದಿ ರಚನೆಗೆ ಯಾವುದೇ ಹಾನಿಯಾಗುವುದಿಲ್ಲ ಎಂದು ತಿಳಿಸಿದ್ದಾರೆ. ವಾರಣಾಸಿಯಲ್ಲಿರುವ ಜ್ಞಾನವಾಪಿ ಮಸೀದಿಯನ್ನು ದೇವಾಲಯದ ಮೇಲೆ ನಿರ್ಮಿಸಲಾಗಿದೆಯೇ ಎಂದು ನಿರ್ಧರಿಸಲು ಸಮೀಕ್ಷೆ ನಡೆಸುವಂತೆ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಗೆ ನಿರ್ದೇಶನ ನೀಡಿದ ಜಿಲ್ಲಾ ನ್ಯಾಯಾಲಯದ ಆದೇಶದ ವಿರುದ್ಧದ ಮನವಿಯನ್ನು ನ್ಯಾಯಾಲಯವು ವಿಚಾರಣೆ ನಡೆಸುತ್ತಿದೆ.

ಈ ವಾರದ ಆರಂಭದಲ್ಲಿ, ಮಸೀದಿಯನ್ನು ನಿರ್ವಹಿಸುವ ಅಂಜುಮನ್ ಇಂತೇಝಾಮಿಯಾ ಮಸೀದಿಯು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು. ಸುಪ್ರೀಂ ಕೋರ್ಟ್ ಬುಧವಾರ ಸಂಜೆ 5 ಗಂಟೆಯವರೆಗೆ ಎಎಸ್‌ಐ ಸಮೀಕ್ಷೆಯನ್ನು ಸ್ಥಗಿತಗೊಳಿಸಿದ ಒಂದು ದಿನದ ನಂತರ, ಕೆಳ ನ್ಯಾಯಾಲಯದ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಲು ಮಸೀದಿ ನಿರ್ವಹಣಾ ಸಮಿತಿಗೆ ಸಮಯಾವಕಾಶವನ್ನು ನೀಡಿತ್ತು. ಪ್ರತಿವಾದಿಯ (ಹಿಂದೂ ಕಡೆಯವರು) ವಕೀಲ ವಿಷ್ಣು ಶಂಕರ್ ಜೈನ್ ಅವರು ರಾಮಮಂದಿರ ಪ್ರಕರಣದಲ್ಲಿ ಎಎಸ್‌ಐ ಸಮೀಕ್ಷೆಯನ್ನು ನಡೆಸಿದ್ದು, ಅದನ್ನು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಒಪ್ಪಿಕೊಂಡಿದೆ ಎಂದು ಹೇಳಿದ್ದರು.

ಕಬ್ಬಿನ ಬಾಕಿ ಪಾವತಿಗೆ ಆಗ್ರಹಿಸಿ ಬಣ್ಣಾರಿ ಸಕ್ಕರೆ ಕಾರ್ಖಾನೆಯ ಉಪ ಕಚೇರಿಗೆ ರೈತರಿಂದ ಬೀಗ

ಮೈಸೂರು, ಜು.27(ಬಿಎಲ್‌ಯು)– ಕಬ್ಬಿನ ಬಾಕಿ ಹಣ ಪಾವತಿಸುವಂತೆ ಆಗ್ರಹಿಸಿ ರೈತರು ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆಯ ಉಪ ಕಚೇರಿಗೆ ಬೀಗ ಹಾಕಿ ಪ್ರತಿಭಟನೆ ನಡೆಸಿದರು.

ಮೈಸೂರಿನ ಕಡಕೊಳದಲ್ಲಿರುವ ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆಯ ಉಪ ಕಚೇರಿಗೆ ಬೀಗ ಹಾಕಿದ ರೈತರು, ಬೇಡಿಕೆ ಈಡೇರುವ ತನಕ ಬೀಗ ತೆಗೆಯುವುದಿಲ್ಲ ಎಂದು ಎಚ್ಚರಿಕೆ ನೀಡಿದರು.

ಒಂದು ಟನ್ ಕಬ್ಬಿಗೆ 150 ರೂಪಾಯಿಯಂತೆ ಕಳೆದ ವರ್ಷದ ಬಾಕಿ ಹಣ ನೀಡವಂತೆ ಜುಲೈ 24 ರಂದು ನಡೆದ ಸಭೆಯಲ್ಲಿ ಜಿಲ್ಲಾಧಿಕಾರಿಗಳು ಕಾರ್ಖಾನೆಯವರಿಗೆ ಆದೇಶ ನೀಡಿದ್ದರು. ಆದರೆ ಈಗ ಬಾಕಿ ಹಣ ಪಾವತಿಸದೆ ಕಾರ್ಖಾನೆ ಆರಂಭಿಸಿ ಮೋಸ ಮಾಡುತ್ತಿದ್ದಾರೆ ಎಂದು ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆ ವಿರುದ್ಧ ರೈತರು ಆಕ್ರೋಶ ವ್ಯಕ್ತಪಡಿಸಿದರು.



ಬಾಕಿ ಹಣ ಪಾವತಿಸುವಂತೆ ಆಗ್ರಹಿಸಿ ಕಾರ್ಖಾನೆಯ ಎಲ್ಲಾ ಶಾಖಾ ಕಚೇರಿಗಳಿಗೆ ಬೀಗ ಹಾಕುತ್ತಿದ್ದೇವೆ. ನಮ್ಮ ಬೇಡಿಕೆ ಈಡೇರಿಸದಿದ್ದರೆ ತೀವ್ರ ರೀತಿಯ ಹೋರಾಟ ರೂಪಿಸುತ್ತೇವೆ ಎಂದು ರೈತರು ಎಚ್ಚರಿಕೆ ನೀಡಿದರು.

ತರುವಾಯ ಸ್ಥಳಕ್ಕೆ ಬಂದ ಕಾರ್ಖಾನೆಯ ಕಾರ್ಯ ನಿರ್ವಹಣಾಧಿಕಾರಿ ನಾಗೇಶ್ ಅವರು, ನಿಮ್ಮ ಬೇಡಿಕೆಯ ವಿಚಾರವನ್ನು ಆಡಳಿತ ಮಂಡಳಿಯ ಗಮನಕ್ಕೆ ತರಲಾಗುವುದು ಎಂದು ಭರವಸೆ ನೀಡಿದ್ದರ ಮೇರೆಗೆ ರೈತರು ಪ್ರತಿಭಟನೆ ವಾಪಸ್ ಪಡೆದರು. ರೈತ ಸಂಘದ ಚಾಮರಾಜನಗರ ಜಿಲ್ಲಾ ಉಪಾಧ್ಯಕ್ಷ ಪಟೇಲ್ ಶಿವಮೂರ್ತಿ, ಮೈಸೂರು ತಾಲೂಕು ಅಧ್ಯಕ್ಷ ಲಕ್ಷ್ಮಿಪುರ ವೆಂಕಟೇಶ್, ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಕಮಲಮ್ಮ, ಮುಖಂಡರಾದ ಕುರುಬೂರು ಪ್ರದೀಪ್, ಹೆಗ್ಗೂರು ರಂಗರಾಜು ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

LoC ದಾಟುತ್ತೇವೆ; ರಾಜನಾಥ್ ಸಿಂಗ್ ಹೇಳಿಕೆಗೆ ಪಾಕಿಸ್ತಾನ ತಿರುಗೇಟು

ಇಸ್ಲಾಮಾಬಾದ್, ಜು.27– ಭಾರತದ ಗೌರವ ಮತ್ತು ಘನತೆಯನ್ನು ಕಾಪಾಡಿಕೊಳ್ಳಲು ಅಗತ್ಯ ಬಿದ್ದರೆ ಗಡಿ ನಿಯಂತ್ರಣ ರೇಖೆಯನ್ನು(LoC) ದಾಟುತ್ತೇವೆ ಎಂಬ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರ ಹೇಳಿಕೆಗೆ ಪಾಕಿಸ್ತಾನ ಪ್ರತಿಕ್ರಿಯೆ ನೀಡಿದೆ. ಸಿಂಗ್ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಇಸ್ಲಾಮಾಬಾದ್‌ನಲ್ಲಿರುವ ವಿದೇಶಾಂಗ ಕಚೇರಿ, ಪಾಕಿಸ್ತಾನವು ಯಾವುದೇ ಆಕ್ರಮಣದ ವಿರುದ್ಧ ತನ್ನನ್ನು ತಾನು ರಕ್ಷಿಸಿಕೊಳ್ಳಲು ಸಂಪೂರ್ಣವಾಗಿ ಸಮರ್ಥವಾಗಿದೆ ಎಂದು ಹೇಳಿದೆ. ಯುದ್ಧದ ಉತ್ಸಾಹವು ಪ್ರಾದೇಶಿಕ ಶಾಂತಿ ಮತ್ತು ಸ್ಥಿರತೆಗೆ ಅಪಾಯವನ್ನುಂಟು ಮಾಡುತ್ತದೆ ಮತ್ತು ದಕ್ಷಿಣ ಏಷ್ಯಾದ ಕಾರ್ಯತಂತ್ರದ ವಾತಾವರಣವನ್ನು ಅಸ್ಥಿರಗೊಳಿಸಲು ಕೊಡುಗೆ ನೀಡುತ್ತದೆ ಎಂದು ನಾವು ಭಾರತಕ್ಕೆ ಹೆಚ್ಚಿನ ಎಚ್ಚರಿಕೆಯನ್ನು ನೀಡುತ್ತೇವೆ ಎಂದು ಹೇಳಿಕೆಯಲ್ಲಿ ತಿಳಿಸಿದೆ.

ಸುಬ್ಬಣ್ಣ ಪ್ರೌಢಶಾಲೆಯಲ್ಲಿ ಸ್ಟೆಮ್ ಪ್ರಯೋಗಾಲಯ ಸ್ಥಾಪನೆ



ಮೈಸೂರು, ಜು. 27– ಅಭ್ಯುದಯ ಸಂಸ್ಥೆ ವತಿಯಿಂದ ಮೊಟ್ಟ ಮೊದಲ ಬಾರಿಗೆ ಮೈಸೂರಿನ ಟಿ.ಎಸ್.ಸುಬ್ಬಣ್ಣ ಸಾರ್ವಜನಿಕ ಪ್ರೌಢಶಾಲೆಯಲ್ಲಿ STEM (ಸ್ಟೆಮ್) ಪ್ರಯೋಗಾಲಯವನ್ನು ಸ್ಥಾಪಿಸಲಾಯಿತು. ಈ ವೇಳೆ KKSS ಕಾರ್ಯದರ್ಶಿ ಗಣಪತಿ ಹೆಗ್ಡೆ ಪ್ರಕೃತಿ ಮತ್ತು ದೇಶದ ರಕ್ಷಣೆ ಕುರಿತು ಮಾತನಾಡಿದರು. ಮಕ್ಕಳು ಶಿಕ್ಷಣದ ಜೊತೆಗೆ ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕೆಂದು ಪ್ರೊ.ವಸಂತಮ್ಮ ತಿಳಿಸಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಡಾ.ಚಂದ್ರಶೇಖರ್ (ಟಿ.ಎಸ್.ಸುಬ್ಬಣ್ಣ ಸಾರ್ವಜನಿಕ ಶಾಲೆಯ ಧರ್ಮದರ್ಶಿ), ರಾಜಣ್ಣ ಪ್ರೊವಸಂತಮ್ಮ, ನಾಗು ನಾಯಕ್, ಹರೀಶ್, ಶಾಲೆಯ ಮುಖ್ಯೋಪಾಧ್ಯಾಯ ನಟರಾಜ್ ಹಾಗೂ ಶಾಲೆಯ ಆಡಳಿತ ಮಂಡಳಿಯ ಸತೀಶ್, ಗುರು, ಸಿದ್ದೇಗೌಡ, ಶ್ಯಾಮಸುಂದರ್, ಗಣೇಶ್, ಆರತಿ ಹಾಗೂ ಮೈಸೂರು ಅಭ್ಯುದಯದ ಉಸ್ತುವಾರಿ ಬೆಳ್ಳೂರ್ ಫಣೀಂದ್ರ ಮತ್ತು ಮೈಸೂರು ಅಭ್ಯುದಯದ ಸಂಯೋಜಕ ಮನೀಶ್, ಸ್ಟೆಮ್‌ನ ಮುರಳಿ ಮತ್ತಿತರರು ಭಾಗವಹಿಸಿದ್ದರು.

ಜ್ಯೋತಿರ್ಗಮಯ ಸೇವಾ ಟ್ರಸ್ಟ್‌ನಲ್ಲಿ ಕಾರ್ಗಿಲ್ ವಿಜಯ ದಿವಸ ಆಚರಣೆ



ಮೈಸೂರು, ಜು. 27– ಮೈಸೂರಿನ ರಾಮಾನುಜ ರಸ್ತೆಯ 15ನೇ ಕ್ರಾಸ್‌ನಲ್ಲಿರುವ ಜ್ಯೋತಿರ್ಗಮಯ ಸೇವಾ ಟ್ರಸ್ಟ್ ಹೆಣ್ಣು ಮಕ್ಕಳ ಉಚಿತ ವಿದ್ಯಾರ್ಥಿ ನಿಲಯದಲ್ಲಿ 24ನೇ ವರ್ಷದ ಕಾರ್ಗಿಲ್ ವಿಜಯ ದಿವಸ ಆಚರಿಸಲಾಯಿತು.

ಈ ವೇಳೆ ಸುತ್ತೂರಿನ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯ ಶಿಕ್ಷಕ ಎನ್.ಪಿ.ಪರಶಿವಮೂರ್ತಿ ಮಾತನಾಡಿ, ಭಾರತೀಯ ಸೈನಿಕರು, ಪಾಕಿಸ್ತಾನದ ಸೈನಿಕರನ್ನು ಹಿಮ್ಮೆಟ್ಟಿಸಿ ಕಟ್ಟಿದ ವಿಜಯದ ಸಂಕೇತದ ಹೆಗ್ಗುರುತು ಕಾರ್ಗಿಲ್ ವಿಜಯ ದಿವಸ. ಪ್ರತಿ ವರ್ಷವೂ ಜುಲೈ 26 ರಂದು ಈ ನಾಡಿಗಾಗಿ ತ್ಯಾಗ, ಬಲಿದಾನ ಮಾಡಿದ ವೀರ ಯೋಧರನ್ನು ಗೌರವಿಸಿ, ಸ್ಮರಿಸುತ್ತಾ ಆಚರಿಸಲಾಗುತ್ತದೆ. ಲಾಲ್ ಬಹದ್ದೂರ್ ಶಾಸ್ತ್ರಿರವರು ಹೇಳಿರುವಂತೆ 'ಜೈ ಜವಾನ್ ಜೈ ಕಿಸಾನ್' ಭಾರತ ದೇಶದ ರೈತರಿಗೆ ಮತ್ತು ಹಗಲಿರುಳೆನ್ನದೆ ದೇಶ ಕಾಯುವ ಯೋಧರಿಗೆ ಗೌರವವನ್ನು ಕೊಡಬೇಕು ಎನ್ನುತ್ತಾರೆ. ಯುವ ಜನತೆಯು ದೇಶ ಅಭಿಮಾನದ ಕಿಚ್ಚನ್ನು ಬೆಳೆಸಿಕೊಳ್ಳಬೇಕು.

ಶಾಲಾ, ಕಾಲೇಜುಗಳಲ್ಲಿ ಪ್ರತಿಯೊಂದು ಮಗುವಿನಲ್ಲೂ ದೇಶ ಪ್ರೇಮವನ್ನು ಬಡಿದೆಬ್ಬಿಸುವ, ದೇಶಕ್ಕಾಗಿ ಪ್ರಾಣ ತ್ಯಾಗ ಮಾಡಿದ ಹುತಾತ್ಮ ವೀರಯೋಧರ ಪರಾಕ್ರಮದ ವೀರಕಥೆಗಳನ್ನು ಭಾವನಾತ್ಮಕವಾಗಿ ಸ್ಫೂರ್ತಿ ನೀಡುವಂತೆ ಹೇಳಬೇಕು. ಪ್ರತಿ ಮನೆಗೊಬ್ಬ ಯೋಧ ಜನ್ಮತಾಳಬೇಕು. ದೇಶ ಸೇವೆಗೆ ಯಾವುದೇ ಜಾತಿ, ಧರ್ಮ, ಮತ, ಎನ್ನುವ ಭೇದಭಾವವಿರುವುದಿಲ್ಲ. ದೇಶಕ್ಕೆ ಗಡಿ ಇರುವುದೇ ಹೊರತು, ದೇಶ ಪ್ರೇಮಕ್ಕೆ ಯಾವುದೇ ಗಡಿ ಇಲ್ಲ. ಆಗ ಮಾತ್ರ ನಮ್ಮ ದೇಶದ ಮೇಲೆ ಯಾವ ದೇಶವು ಆಕ್ರಮಣ ಮಾಡಲು ಧೈರ್ಯ ಮಾಡುವುದಿಲ್ಲ.

ಇತ್ತೀಚಿನ ದಿನಗಳಲ್ಲಿ ಸೈನ್ಯಕ್ಕೆ ಹೆಣ್ಣು ಮಕ್ಕಳು ಕೂಡ ಸೇರುತ್ತಿರುವುದು ಆಶಾದಾಯಕ ಬೆಳವಣಿಗೆಯಾಗಿದೆ. 2019 ರಲ್ಲಿ ಕಾಶ್ಮೀರದ ಪುಲ್ವಾಮದ ದುರಂತದಲ್ಲಿ ಹುತಾತ್ಮರಾದ ಕೇವಲ ಒಂದು ವರ್ಷದ ಹಿಂದೆ ವಿವಾಹವಾಗಿದ್ದ ಕಾಶ್ಮೀರದ ಯೋಧರಾದ ವಿಭೂತಿ ಶಂಕರ್ ಅವರ ಪತ್ನಿ ನಿತಿಕಾ ಕೌಲ್ ಅವರು ಪತಿಯ ದುಃಖದ ನಡುವೆಯೂ, ಎದೆಗುಂದದೆ ಸಂಕಷ್ಟಗಳ ಸರಮಾಲೆಯನ್ನೇ ಎದುರಿಸಿ, ಎರಡು ವರ್ಷಗಳ ಅಂತರದಲ್ಲಿ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ ಸೇನೆಗೆ ಸೇರಿ ದೇಶ ಸೇವೆಯಲ್ಲಿ ನಿರತರಾಗಿದ್ದಾರೆ ಎಂದು ಸ್ಮರಿಸಿದರು. ಸಂಸ್ಥೆಯ ಸಂಸ್ಥಾಪಕ ಮಾದೇಶ ಧರ್ಮದರ್ಶಿಗಳು, ಕಾಲೇಜಿನ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.



ಮೈಸೂರಿನ ಮಹಾಬೋಧಿ ಶಾಲಾ ಆವರಣದಲ್ಲಿ ಕಾರ್ಗಿಲ್ ವಿಜಯ ದಿವಸ ಆಚರಿಸಲಾಯಿತು. ಭಾರತೀಯ ಭೂಸೇನೆಯ ಸುಬೇದಾರ್ ಆಗಿ 1999ರಲ್ಲಿ ಕಾರ್ಗಿಲ್ ಯುದ್ಧದಲ್ಲಿ ಭಾಗವಹಿಸಿದ್ದ ಯತಿರಾಜು ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ವಿದ್ಯಾರ್ಥಿಗಳಿಗೆ ಕಾರ್ಗಿಲ್ ಯುದ್ಧದ ನೈಜ ಘಟನೆಗಳನ್ನು ವಿವರಿಸಿದರು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ನಾವೆಲ್ಲರೂ ಮುಂದೆ ಭಾರತೀಯ ಸೇನೆಯನ್ನು ಸೇರಿ ದೇಶ ಸೇವೆ ಮಾಡುವುದಾಗಿ ಪ್ರತಿಜ್ಞೆ ಕೈಗೊಂಡರು.

ದೇಹದಾರ್ಢ್ಯ ಸ್ಪರ್ಧೆಯ ಪೋಸ್ಟರ್ ಬಿಡುಗಡೆ



ಕರ್ನಾಟಕ ಸ್ಪೋರ್ಟ್ಸ್ ಫೌಂಡೇಶನ್, ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಸಹಕಾರದೊಂದಿಗೆ ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಶ್ರೀ ಚಾಮುಂಡೇಶ್ವರಿ ದೇವಿಗೆ ಪೂಜೆ ಸಲ್ಲಿಸಿ, ಆ. 29ರಂದು ಮೈಸೂರಿನ ಜಗನ್ಮೋಹನ ಪ್ಯಾಲೇಸ್ ಸಭಾಂಗಣದಲ್ಲಿ ನಡೆಯುವ ರಾಜ್ಯ ಮಟ್ಟದ ಪುರುಷ ಹಾಗೂ ಮಹಿಳೆಯರ ದೇಹದಾರ್ಢ್ಯ ಸ್ಪರ್ಧೆಯ ಪೋಸ್ಟರ್ ಅನ್ನು ತಾಲೂಕು ಕಸಾಪ ಅಧ್ಯಕ್ಷ ಎ.ಸಿ. ಮಂಜುನಾಥ್ ಹಾಗೂ ಕರ್ನಾಟಕ ಸ್ಪೋರ್ಟ್ಸ್ ಫೌಂಡೇಶನ್ ಮುಖ್ಯಸ್ಥ ಆರಾಧ್ಯ ಬಿಡುಗಡೆ ಮಾಡಿದರು. ಈ ವೇಳೆ ಹರೀಶ್, ಐಶ್ವರ್ಯ ಆಸ್ಪತ್ರೆ ಮುಖ್ಯಸ್ಥ ಬೋರಲಿಂಗಯ್ಯ, ಕಸಾಪ ಕೋಶಾಧ್ಯಕ್ಷ ಕಾಮನಕೆರೆಹುಂಡಿ ಹೆಚ್.ಗಿರೀಶ್, ಲಲಿತಾ, ನಿಶ್ಚಯ, ವಿಕ್ರಂ, ರವಿಕುಮಾರ್ ಇತರರು ಉಪಸ್ಥಿತರಿದ್ದರು.



ಮೈಸೂರಿನ ಕುಂಬಾರಕೊಪ್ಪಲಿನಲ್ಲಿರುವ ಕೆ ಪುಟ್ಟಸ್ವಾಮಿ ಅನುದಾನಿತ ಶಾಲೆಗೆ ಶ್ರೀ ನಿರ್ಮಲಾನಂದ ಸ್ವಾಮೀಜಿಗಳ ಜನುಮ ದಿನದ ಪ್ರಯುಕ್ತ ಕರ್ನಾಟಕ ರಾಜ್ಯ ಒಕ್ಕಲಿಗ ಯುವ ಬ್ರಿಗೇಡ್ ಅಧ್ಯಕ್ಷ ನಂಜೇಗೌಡ ಕಂಪ್ಯೂಟರ್ ಕೊಡುಗೆಯಾಗಿ ನೀಡಿದರು. ಈ ವೇಳೆ ಶಾಲೆಯ ಮುಖ್ಯ ಶಿಕ್ಷಕ ಪ್ರಕಾಶ್, ಅನುತ್ತೀರ್ಣ ವಿದ್ಯಾಲಯದ ಉಪ ಪ್ರಾಂಶುಪಾಲ ಹರದೂರು ಲೋಕೇಶ್, ಶಾಲೆಯ ಶಿಕ್ಷಕರಾದ ನಾಗರಾಜ ರಾವ್, ಶಿವಕುಮಾರ, ಮಮತಾ, ಕೃಷ್ಣ, ಸಂತೋಷ್, ಆಶಾ ಮತ್ತು ವಿದ್ಯಾರ್ಥಿಗಳು ಹಾಜರಿದ್ದರು.

ಮಳೆಯ ಕಾರಣ ಸರ್ಕಾರಿ ಶಾಲೆ ಹಾಗೂ ಅಂಗನವಾಡಿ ಶಾಲೆಗಳ ದುರಸ್ತಿ ಮಾಡಿ

ಮೈಸೂರು ಜಿಲ್ಲಾಧಿಕಾರಿ ಡಾ.ರಾಜೇಂದ್ರ ಸೂಚನೆ

ಮೈಸೂರು, ಜು.27(ಬಿಎಲ್‌ಯು)– ಬಾರೀ ಮಳೆಯಾಗುತ್ತಿರುವ ಕಾರಣ ಅವಘಡಗಳು ಸಂಭವಿಸದಂತೆ ಸರ್ಕಾರಿ ಶಾಲೆ ಹಾಗೂ ಅಂಗನವಾಡಿ ಶಾಲೆಗಳ ದುರಸ್ತಿ ಕಾರ್ಯವನ್ನು ತುರ್ತಾಗಿ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅಧಿಕಾರಿಗಳಿಗೆ ಆದೇಶ ನೀಡಿದರು.

ಮೈಸೂರು ಜಿಲ್ಲಾಧಿಕಾರಿ ಕಚೇರಿಯಲ್ಲಿ ಮಳೆ ಹಾನಿ ತಡೆಗಟ್ಟುವ ಕುರಿತಂತೆ ನಡೆದ ತಾಲೂಕು ಮಟ್ಟದ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಶಾಲಾ ಕಾಲೇಜುಗಳಿಗೆ ರಜೆ ಘೋಷಣೆ ಮಾಡುವ ಮುನ್ನ ಅಲ್ಲಿನ ಮಳೆ ಪರಿಸ್ಥಿತಿಯನ್ನು ಅವಲೋಕಿಸಿ ನಂತರ ಕ್ರಮ ಕೈಗೊಳ್ಳಿ ಎಂದು ಸೂಚಿಸಿದರು.



ವಿದ್ಯಾರ್ಥಿನಿಲಯಗಳಲ್ಲಿ ಶುದ್ಧ ಕುಡಿಯುವ ನೀರಿನ ಪೂರೈಕೆ ಮಾಡಬೇಕು. ಜೊತೆಗೆ ನೀರಿನ ಗುಣಮಟ್ಟವನ್ನು ಹಾಗಾಗೆ ಪರೀಕ್ಷಿಸಬೇಕು ಎಂದು ಹಾಸ್ಟೆಲ್ ವಾರ್ಡನ್‌ಗಳಿಗೆ ಡಾ.ರಾಜೇಂದ್ರ ತಾಕೀತು ಮಾಡಿದರು. ಕೇರಳದ ವೈನಾಡು ಪ್ರದೇಶದಲ್ಲಿ ಬಾರೀ ಮಳೆಯಾಗುತ್ತಿದೆ. ಈ ಕಾರಣದಿಂದ ಅವಘಡಗಳು ಸಂಭವಿಸದಂತೆ ತಗ್ಗು ಪ್ರದೇಶಗಳ ಜನರಿಗೆ ನಿರಂತರ ಎಚ್ಚರಿಕೆ ನೀಡಬೇಕು. ಜೊತೆಗೆ ಪರಿಹಾರ ಕೇಂದ್ರಗಳನ್ನು ಸ್ಥಾಪಿಸಬೇಕು. ಬೆಳೆ ಹಾನಿ ಹಾಗೂ ಜೀವ ಹಾನಿ ಆಗದಂತೆ ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಡಾ.ರಾಜೇಂದ್ರ ಸೂಚನೆ ನೀಡಿದರು. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಜಂಟಿ ನಿರ್ದೇಶಕಿ ಕುಮುದಾ ಶರತ್ ಸೇರಿದಂತೆ ಹಲವು ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.

2024ರ ಲೋಕಸಭಾ ಚುನಾವಣೆ
ಆ.1ರಿಂದ ಇವಿಎಂಗಳ ಮೊದಲ ಹಂತದ ತಪಾಸಣೆ

ಮೈಸೂರು, ಜು.27(ಆರ್‌ಕೆ)–2024ರ ಲೋಕಸಭಾ ಚುನಾವಣೆಗಾಗಿ ಹೈದರಾಬಾದಿನಿಂದ ತಂದಿರುವ ಹೊಸ ಇವಿಎಂ ಮತ್ತು ವಿವಿ ಪ್ಯಾಟ್‌ಗಳ ಮೊದಲ ಹಂತದ ತಪಾಸಣೆ (First Level Checking) ಪ್ರಕ್ರಿಯೆ ಆ.1 ರಿಂದ ಆರಂಭವಾಗಲಿದೆ.

ಇತ್ತೀಚೆಗಷ್ಟೇ ಹೈದರಾಬಾದ್‌ನಿಂದ 1,500 ಇವಿಎಂಗಳು ಮತ್ತು ವಿವಿ ಪ್ಯಾಟ್‌ಗಳನ್ನು ತಂದು ಮೈಸೂರಿನ ಸಿದ್ದಾರ್ಥ ಬಡಾವಣೆಯ ಜಿಲ್ಲಾ ಅಧಿಕಾರಿಗಳ ಕಚೇರಿ ಸಂಕೀರ್ಣಗಳ ಹೊಸ ಕಟ್ಟಡದ ಬಳಿ ಇರುವ ಉಗ್ರಾಣದಲ್ಲಿ ಭಾರೀ ಭದ್ರತೆಯೊಂದಿಗೆ ಇರಿಸಲಾಗಿದೆ. ರವಾನಿಸುವ ಮುನ್ನ ಕಂಪನಿ ಇಂಜಿನಿಯರ್‌ಗಳು ಪರೀಕ್ಷಿಸಿದ್ದರಾದರೂ ಮೈಸೂರು ಜಿಲ್ಲಾಡಳಿತದ ವಶಕ್ಕೆ ಒಪ್ಪಿಸಿದ ಬಳಿಕ ನಿಯಮಾನುಸಾರ ಎಲ್ಲಾ ವಿದ್ಯುನ್ಮಾನ ಮತಯಂತ್ರಗಳು ಹಾಗೂ ವಿವಿ ಪ್ಯಾಟ್‌ಗಳನ್ನು ಉಗ್ರಾಣದಲ್ಲಿ ತಪಾಸಣೆ ನಡೆಸಿ ಕ್ರಮವಾಗಿ ಜೋಡಿಸಬೇಕಾಗಿದೆ ಎಂದು ನೋಡಲ್ ಅಧಿಕಾರಿಯೂ ಆದ ಮುಡಾ ಆಯುಕ್ತ ಜಿ.ಟಿ. ದಿನೇಶ್ ಕುಮಾರ್ ತಿಳಿಸಿದ್ದಾರೆ. ಕಂಪನಿ ಇಂಜಿನಿಯರ್‌ಗಳು ಮೈಸೂರಿಗೆ ಆಗಮಿಸಲಿದ್ದು, ಉಗ್ರಾಣದ ಎರಡು ಹಾಲ್‌ಗಳಲ್ಲಿ ಮೊದಲ ಹಂತದ ತಪಾಸಣಾ ಪ್ರಕ್ರಿಯೆ ಆ.1 ರಿಂದ 15 ದಿನಗಳ ಕಾಲ ನಡೆಯಲಿದೆ. ಆ ವೇಳೆ ಅಡಿಷನಲ್ ಡಿಸಿ ಕವಿತಾ ರಾಜಾರಾಂ ಒಂದು ಹಾಲ್‌ನಲ್ಲಿ, ತಾವು ಮತ್ತೊಂದರಲ್ಲಿ ತಪಾಸಣೆಯ ಮೇಲ್ವಿಚಾರಕರಾಗಿರುತ್ತೇವೆ ಎಂದು ತಿಳಿಸಿದ್ದಾರೆ.

ಆ.31ರಿಂದ ಶಿವಮೊಗ್ಗ ಏರ್‌ಪೋರ್ಟ್‌ನಿಂದ ವಿಮಾನ ಹಾರಾಟ ಪ್ರಾರಂಭ

ಮೊದಲ ಹಂತದಲ್ಲಿ ತಿರುಪತಿ, ಗೋವಾ, ಹೈದರಾಬಾದ್‌ಗೆ ಸೇವೆ

ಬೆಂಗಳೂರು, ಜು.27(ಕೆಎಂಶಿ)– ಶಿವಮೊಗ್ಗ ವಿಮಾನ ನಿಲ್ದಾಣ ಆಗಸ್ಟ್ 31ರಿಂದ ತನ್ನ ಕಾರ್ಯಾಚರಣೆ ಆರಂಭಿಸಲಿದ್ದು ಅಂದು ಮೊದಲ ವಿಮಾನದಲ್ಲಿ ಪ್ರಯಾಣಿಸುವ ಭಾಗ್ಯ ಮಲೆನಾಡಿನ ಜನರಿಗೆ ಸಿಗಲಿದೆ. ಈ ಮುಂಚೆ ಆಗಸ್ಟ್ 11ರಿಂದ ಆರಂಭವಾಗಬೇಕಿತ್ತು. ತಾಂತ್ರಿಕ ಕಾರಣಗಳಿಂದ 31ಕ್ಕೆ ಹೋಗಿದ್ದು ಇಂಡಿಗೊ ಏರ್‌ಲೈನ್ಸ್ ತನ್ನ ಬುಕ್ಕಿಂಗ್ ಅನ್ನು ಆರಂಭಿಸಿದೆ ಎಂದು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ.ಪಾಟೀಲ್ ತಿಳಿಸಿದ್ದಾರೆ. ಶಿವಮೊಗ್ಗದಿಂದ ತಿರುಪತಿ, ಗೋವಾ ಮತ್ತು ಹೈದರಾಬಾದ್ ನಗರಗಳಿಗೆ ಉಡಾನ್ ಯೋಜನೆಯಡಿ ವಿಮಾನಯಾನ ಸೇವೆ ನೀಡಲು ಮೂರು ಏರ್‌ಲೈನ್ಸ್ ಸಂಸ್ಥೆಗಳಿಗೆ ಅನುಮತಿ ಸಿಕ್ಕಿದೆ ಎಂದು ಸಚಿವರು ತಿಳಿಸಿದ್ದಾರೆ. ಸ್ಪೈಸ್ ಜೆಟ್, ಸ್ಟಾರ್ ಏರ್‌ಲೈನ್ಸ್ ಮತ್ತು ಅಲಯನ್ಸ್ ಏರ್ ಸಂಸ್ಥೆಗಳು ಈ ರಹದಾರಿಗಳಲ್ಲಿ ವಿಮಾನ ಸಂಚಾರ ಮಾಡುವ ಸಂಬಂಧ ಕರೆದಿದ್ದ ಟೆಂಡರ್‌ನಲ್ಲಿ ಭಾಗವಹಿಸಿ ಯಶಸ್ವಿಯಾಗಿವೆ. ಸದ್ಯಕ್ಕೆ ಹಗಲು ವೇಳೆಯ ವಿಮಾನ ಸಂಚಾರ ಮಾತ್ರ ಇರುತ್ತದೆ. ರಾತ್ರಿ ವೇಳೆ ಲ್ಯಾಂಡಿಂಗ್ ವ್ಯವಸ್ಥೆಗೆ ಸಂಬಂಧಿಸಿದ ಕಾಮಗಾರಿ ಪ್ರಗತಿಯಲ್ಲಿದ್ದು ಆದಷ್ಟು ಬೇಗ ಮುಗಿಯಲಿದೆ ಎಂದು ಅವರು ವಿವರಿಸಿದ್ದಾರೆ. ಉಡಾನ್ ಯೋಜನೆಯಡಿ ಅನುಮತಿ ಪಡೆದಿರುವ ವಿಮಾನಯಾನ ಸಂಸ್ಥೆಗಳೂ ವಿಮಾನ ಸಂಚಾರಕ್ಕೆ ಸಿದ್ಧತೆ ನಡೆಸಿದ್ದು, ನಾಗರಿಕ ವಿಮಾನಯಾನ ನಿರ್ದೇಶನಾಲಯದ ಅನುಮತಿ ಸಿಕ್ಕ ನಂತರ ಅವೂ ಕಾರ್ಯಾಚರಣೆ ನಡೆಸಲಿವೆ ಎಂದರು.

ಅಂಚೆ ಚೀಟಿ ಸಂಗ್ರಹ ಉಳಿತಾಯದ ಜೊತೆಗೆ ಒಂದು ಉತ್ತಮ ಹವ್ಯಾಸ

ಮೈಸೂರು, ಜು. 27 – ಅಂಚೆ ಚೀಟಿ ಸಂಗ್ರಹಣೆ ಹವ್ಯಾಸದ ಜೊತೆಗೆ ಉಳಿತಾಯದ ವಿಧಾನ ಕೂಡ ಆಗಿದ್ದು ಈ ಹವ್ಯಾಸವನ್ನು ಬೆಳೆಸಿಕೊಳ್ಳಬೇಕೆಂದು ಮೈಸೂರು ಅಂಚೆ ವಿಭಾಗದ ಮಾರುಕಟ್ಟೆ ಅಧಿಕಾರಿ ಡಾ.ಸುರೇಶ್ ಕುಮಾರ್ ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಅವರು ಬಂಡಿಪಾಳ್ಯದಲ್ಲಿರುವ ಗುರುಕೃಪ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಾಲಾ ಸಾಂಸ್ಕೃತಿಕ ಕಾರ್ಯಕ್ರಮದ ಉದ್ಘಾಟನೆ ಮತ್ತು ಅಂಚೆ ಕಚೇರಿ ಕುರಿತು ತಿಳಿಯಿರಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಮಾತನಾಡುತ್ತಿದ್ದರು.



ಮಹಿಳೆಯರಿಗಾಗಿ ಸರ್ಕಾರ ಮಹಿಳಾ ಸಮ್ಮಾನ್ ಉಳಿತಾಯ ಪತ್ರ ಯೋಜನೆಯನ್ನು ಮತ್ತು ಹೆಣ್ಣು ಮಕ್ಕಳಿಗಾಗಿ ಸುಕನ್ಯಾ ಸಮೃದ್ಧಿ ಖಾತೆಗಳನ್ನು ಜಾರಿಗೆ ತಂದಿದ್ದು, ಇದರ ಸದುಪಯೋಗಪಡಿಸಿಕೊಳ್ಳುವಂತೆ ತಿಳಿಸಿದರು. ಈ ಸಂದರ್ಭದಲ್ಲಿ ಮಕ್ಕಳಿಗೆ ಅಂಚೆ ಕಚೇರಿಯ ವಿವಿಧ ಸೇವೆಗಳ ಕುರಿತು ವಿವರಿಸಿದ ಅವರು ಅಂಚೆ ಇಲಾಖೆಯೊಂದಿಗಿನ ಬಾಂಧವ್ಯ ಭಾರತೀಯ ಸಮಾಜದೊಂದಿಗೆ ಸಮ್ಮಿಳಿತಗೊಂಡಿದೆ ಎಂದು ಹೇಳಿದರು.

ಮಕ್ಕಳು ಮತ್ತು ಶಿಕ್ಷಕಿಯರು ಅಂಚೆ ಕಚೇರಿಯಲ್ಲಿ ದೊರೆಯುವ ವಿವಿಧ ಸವಲತ್ತುಗಳನ್ನು ಬಳಸಿಕೊಳ್ಳಬೇಕು ಎಂದು ಶಾಲಾ ಮುಖ್ಯೋಪಾಧ್ಯಾಯರಾದ ಲಕ್ಷ್ಮೀ ಸಲಹೆ ನೀಡಿದರಲ್ಲದೆ, ನಮ್ಮ ಶಾಲೆಯಲ್ಲಿ ಫಿಲಾಟೆಲಿ ಕ್ಲಬ್ ಅನ್ನು ಆರಂಭಿಸಲಾಗುವುದು ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಶಾಲಾ ಶಿಕ್ಷಕಿಯರು ಭಾಗವಹಿಸಿದ್ದರು.

ರಾಜ್ಯ ಹೋಟೆಲ್ ಮಾಲೀಕರ ಸಂಘದ ಉಪಾಧ್ಯಕ್ಷರಿಗೆ ಅಭಿನಂದನೆ

ಮೈಸೂರು, ಜು. 27– ಕರ್ನಾಟಕ ರಾಜ್ಯ ಹೋಟೆಲ್ ಮಾಲೀಕರ ಸಂಘದ ಉಪಾಧ್ಯಕ್ಷರಾಗಿ ಆಯ್ಕೆಯಾಗಿರುವ ರವಿ ಶಾಸ್ತ್ರಿ ಅವರನ್ನು ಮೈಸೂರು ಹೋಟೆಲ್ ಮಾಲೀಕರ ಸಂಘದ ವತಿಯಿಂದ ಸನ್ಮಾನಿಸಲಾಯಿತು. ಈ ವೇಳೆ ಮಾತನಾಡಿದ ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ನೌಕರರು ಹಾಗೂ ಗ್ರಾಹಕರ ಮೇಲೆ ತೋರುವ ಕಾಳಜಿ, ಗೌರವದ ಮೇಲೆ ಹೋಟೆಲ್ ಉದ್ಯಮದ ಭವಿಷ್ಯ ನಿಂತಿದೆ ಎಂದು ಮೈಸೂರಿನ ಚಾಮುಂಡಿಪುರಂನಲ್ಲಿರುವ ಪಂಚವಟಿ ಹೋಟೆಲ್‌ನಲ್ಲಿ ನಡೆದ ಸಮಾರಂಭದಲ್ಲಿ ಹೇಳಿದರು.



ಕೊರೊನಾ ಸಂದರ್ಭದಲ್ಲಿ ಹೋಟೆಲ್ ಉದ್ಯಮ ಬಹಳ ಸಂಕಷ್ಟಕ್ಕೆ ಸಿಲುಕಿತ್ತು. ನಂತರದ ದಿನಗಳಲ್ಲಿ ನಿಧಾನವಾಗಿ ಚೇತರಿಕೆ ಕಾಣುತ್ತಿದ್ದು, ಗ್ರಾಹಕರಿಗೆ ತೋರಿಸುವ ಕಾಳಜಿ ಹಾಗೂ ಗೌರವ ನೌಕರರಿಗೆ ತೋರಿಸುವ ಪ್ರೀತಿ ಸಹಕಾರದಿಂದ ಹೋಟೆಲ್ ಉದ್ಯಮ ಚೇತರಿಸಿಕೊಳ್ಳುತ್ತಿದೆ ಎಂದು ತಿಳಿಸಿದರು. ಹೋಟೆಲ್ ಉದ್ಯಮ ಸೇವಾ ಉದ್ಯಮವಾಗಿದ್ದು, ಇಲ್ಲಿ ಗ್ರಾಹಕ ಮತ್ತು ನೌಕರರ ಸಂಬಂಧವೇ ಪ್ರಮುಖವಾಗಿರುತ್ತದೆ. ಗ್ರಾಹಕರ ತೃಪ್ತಿಗೆ ನೌಕರರ ನಡುವಳಿಕೆಗಳು ಮೂಲ ಕಾರಣ ಎಂದು ಹೇಳಿದರು. ಮುಂದಿನ ದಿನಗಳಲ್ಲಿ ಹೋಟೆಲ್‌ನಲ್ಲಿ ಕೆಲಸ ಮಾಡುವ ಎಲ್ಲಾ ನೌಕರರಿಗೆ ಹಾಗೂ ಸಿಬ್ಬಂದಿ ವರ್ಗದವರಿಗೆ ವೃತ್ತಿ ಜೀವನ ಹಾಗೂ ವೈಯಕ್ತಿಕ ಜೀವನ ಸಮಾನಾಗಿ ನಿರ್ವಹಣೆಯ ಕುರಿತು ಪರಿಣಾಮಕಾರಿ ಕಾರ್ಯಾಗಾರ ಮಾಡಲು ಹೋಟೆಲ್ ಮಾಲೀಕರ ಸಂಘ ಮುಂದಾಗುತ್ತದೆ ಎಂದು ಹೇಳಿದರು. ಉಪಾಧ್ಯಕ್ಷ ಸುರೇಶ್ ಉಗ್ರಯ್ಯ, ಗೌ ಕಾರ್ಯದರ್ಶಿ ಎ.ಆರ್. ರವೀಂದ್ರ ಭಟ್, ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಸುಬ್ರಹ್ಮಣ್ಯ ತಂತ್ರಿ, ಪಂಚವಟಿ ಸತೀಶ್, ಹೋಟೆಲ್ ಅಸೋಸಿಯೇಷನ್ ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು ಹಾಜರಿದ್ದರು.

ವಾಹನಗಳಿಂದ ಕಿರಿಕಿರಿ: ಮುಖ್ಯಮಂತ್ರಿ ಕಾರು ಅಡ್ಡಗಟ್ಟಿ ಮನೆ ಮಾಲೀಕ ಆಕ್ರೋಶ

ಬೆಂಗಳೂರು: ಮನೆ ಎದುರು ಅಡ್ಡಾದಿಡ್ಡಿ ನಿಲ್ಲಿಸುತ್ತಿರುವ ವಾಹನಗಳಿಂದ ಕಿರಿಕಿರಿ ಉಂಟಾಗುತ್ತಿದೆ ಎಂದು ಆರೋಪಿಸಿ ಮನೆ ಮಾಲೀಕರೊಬ್ಬರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಾರು ಅಡ್ಡಗಟ್ಟಿ ಆಕ್ರೋಶ ವ್ಯಕ್ತಪಡಿಸಿದರು.



ಕುಮಾರಕೃಪಾ ರಸ್ತೆಯಲ್ಲಿರುವ ಮುಖ್ಯಮಂತ್ರಿ ಎದುರು ಕುಟುಂಬವೊಂದು ವಾಸವಿದೆ. ಇಲ್ಲಿ ಬ್ಯಾರಿಕೇಡ್‌ಗಳನ್ನು ಅಳವಡಿಸಲಾಗಿದ್ದು, ಇದರಿಂದ ಕುಟುಂಬದ ಸದಸ್ಯರಿಗೆ ಓಡಾಡಲು ತೊಂದರೆ ಉಂಟಾಗಿದೆ.

ಮುಖ್ಯಮಂತ್ರಿ ಭೇಟಿಗೆ ಬರುವ ಜನ, ಮನೆ ಎದುರು ಬೇಕಾಬಿಟ್ಟಿಯಾಗಿ ವಾಹನ ನಿಲ್ಲಿಸುತ್ತಿದ್ದಾರೆ. ಇದರಿಂದ ಕುಟುಂಬದ ಸದಸ್ಯರು ನಿತ್ಯವೂ ತೊಂದರೆ ಅನುಭವಿಸುತ್ತಿದ್ದಾರೆ. ಇದರಿಂದ ಬೇಸತ್ತ ಆ ಮನೆ ಮಾಲೀಕ, ಸಿದ್ದರಾಮಯ್ಯ ಅವರ ಕಾರು ತಡೆದು ದೂರು ನೀಡಿದರು. ಮನೆ ಎದುರು ಬೇಕಾಬಿಟ್ಟಿ ವಾಹನಗಳನ್ನು ನಿಲ್ಲಿಸಲಾಗುತ್ತಿದೆ. ಇದರ ವಿರುದ್ಧ ಕ್ರಮ ಕೈಗೊಳ್ಳುವಂತೆ ಪೊಲೀಸರಿಗೆ ದೂರು ನೀಡಿದರೂ ಪ್ರಯೋಜನವಾಗಿಲ್ಲ. ದಯವಿಟ್ಟು ಕ್ರಮ ಕೈಗೊಳ್ಳಿ ಎಂದು ಕೋರಿದರು. ದೂರು ಆಲಿಸಿದ ಸಿದ್ದರಾಮಯ್ಯ, ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. ಸ್ಥಳದಲ್ಲಿದ್ದ ಪೊಲೀಸರಿಗೆ ಸೂಚನೆ ಸಹ ನೀಡಿದರು.

ಆ.1ರಿಂದ ಆನಂದ ಅನುಭೂತಿ ಶಿಬಿರ

ಮೈಸೂರು,ಜು.27–ಮೈಸೂರಿನ ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ ಆ.1ರಿಂದ 5ರವರೆಗೆ ಬೆಳಗ್ಗೆ 8ರಿಂದ 8.30 ಹಾಗೂ ಸಂಜೆ 6ರಿಂದ ರಾತ್ರಿ 8.30ರವರೆಗೆ ಆನಂದ ಅನುಭೂತಿ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ಮೊ. 9480476875.

ಪ್ರತಿಯೊಂದು ಜೀವಿಗೂ ಪ್ರಕೃತಿಯಲ್ಲಿ ಸಮಾನ ಹಕ್ಕಿದೆ

ಹಾಸನ ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ.ಟಿ.ಸಿ.ತಾರಾನಾಥ್ ಅಭಿಮತ

ಮೈಸೂರು, ಜು.27–ಎಲ್ಲಾ ಜೀವಿಗಳ ಜೀವನ ಅನುಕೂಲಕ್ಕಾಗಿ ಪ್ರಕೃತಿಯು ಸಂಪನ್ಮೂಲಗಳನ್ನು ಸಮೃದ್ಧಗೊಳಿಸಿದೆ. ಸಂಪನ್ಮೂಲಗಳ ವೈವಿಧ್ಯತೆ, ನೈಸರ್ಗಿಕವಾಗಿ ದೊರೆತಿರುವ ಸಮತೋಲಿತ ಪರಿಸರ ವ್ಯವಸ್ಥೆಯನ್ನು ಸುರಕ್ಷಿತ ಮತ್ತು ಸಂತೋಷದ ಜೀವನಕ್ಕೆ ಬಳಸಿಕೊಳ್ಳಬೇಕು. ಮನುಷ್ಯರು ಅತಿ ದುರಾಸೆಯಿಂದ ನೆಮ್ಮದಿ ಮತ್ತು ಐಷಾರಾಮಿ ಜೀವನಕ್ಕಾಗಿ ಹೆಚ್ಚಿನ ಸಂಪನ್ಮೂಲಗಳನ್ನು ತಮಗೋಸ್ಕರ ಸೀಮಿತಗೊಳಿಸಿಕೊಂಡು ಪ್ರಕೃತಿಯ ಸೌಂದರ್ಯವನ್ನು ನಾಶಪಡಿಸುತ್ತಿದ್ದಾರೆ ಎಂದು ಹಾಸನ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಟಿ.ಸಿ. ತಾರಾನಾಥ್ ತಿಳಿಸಿದರು.



ಮೈಸೂರಿನ ಊಟಿ ರಸ್ತೆಯ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಸ್ನಾತಕೋತ್ತರ ಸಸ್ಯಶಾಸ್ತ್ರ ವಿಭಾಗವು ಮೈಸೂರು ವಿಶ್ವವಿದ್ಯಾನಿಲಯದ ಸಸ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸ ಗಂಗೋತ್ರಿ ಇದರ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಜಿ20 ಜನ ಭಾಗಿದಾರಿ ಕಾರ್ಯಕ್ರಮದಡಿಯಲ್ಲಿ "ಜೀವವೈವಿಧ್ಯ ಸಂರಕ್ಷಣೆ: ತಂತ್ರಗಳು ಮತ್ತು ಸವಾಲುಗಳು (ಬಿಸಿಎಸ್‌ಸಿ)" ವಿಷಯ ಕುರಿತು ಆಯೋಜಿಸಿದ್ದ ಒಂದು ದಿನದ ರಾಜ್ಯ ಮಟ್ಟದ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ಸಸ್ಯಶಾಸ್ತ್ರ ವಿಭಾಗದ ಅಧ್ಯಕ್ಷ ಪ್ರೊ.ಕೆ.ಎನ್. ಅಮೃತೇಶ್ ಮುಖ್ಯ ಭಾಷಣ ಮಾಡಿದರು. ಮಾನವ ಜನ್ಯ ಚಟುವಟಿಕೆಗಳಿಂದಾಗಿ ಉಂಟಾದ ಜೀವಸಂಕುಲಜಾತಿಗಳ ವಿಸ್ತರಣೆಯ ಕಾರಣ ಮತ್ತು ಪರಿಣಾಮಗಳ ಮೇಲೆ ಅವರು ಬೆಳಕು ಚೆಲ್ಲಿದರು. ವೈವಿಧ್ಯಮಯ ಸಸ್ಯಸಂಕುಲ ಮತ್ತು ಎಲ್ಲಾ ಜೀವಿಗಳನ್ನು ಸಂರಕ್ಷಿಸಲು ವಿದ್ಯಾರ್ಥಿಗಳು ಮತ್ತು ಸ್ಥಳೀಯ ಸಮಾಜ ಸೇರಿದಂತೆ ವ್ಯಾಪಕ ಸಂಶೋಧನೆಯಲ್ಲಿ ತೊಡಗಿರುವ ಸಮುದಾಯವು ಜೀವ ವೈವಿಧ್ಯತೆಯ ಅಪಾರ ನಷ್ಟವನ್ನು ತಡೆಯಲು ಜಾಗರೂಕತೆಯನ್ನು ಬೆಳೆಸಿಕೊಳ್ಳಬೇಕು ಎಂದು ಅಭಿಪ್ರಾಯಪಟ್ಟರು. ಹಿಮಾಲಯ, ಪಶ್ಚಿಮ ಘಟ್ಟಗಳು ಇತ್ಯಾದಿ ಪ್ರದೇಶಗಳಲ್ಲಿ ವೈವಿಧ್ಯಮಯ ಸಸ್ಯ ಕುಟುಂಬದ ಅಸ್ತಿತ್ವವನ್ನು ಅವರು ವಿವರಿಸಿದರು. ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಮುಖ್ಯಕಾರ್ಯನಿರ್ವಾಹಕ ಪ್ರೊ ಬಿ.ವಿ.ಸಾಂಬಶಿವಯ್ಯ ಮಾತನಾಡಿ, ಜಿ20 ಪ್ರೆಸಿಡೆನ್ಸಿ ಆಫ್ ಇಂಡಿಯಾದ ಹಿನ್ನೆಲೆ, ದೇಶಾದ್ಯಂತ ಉನ್ನತ ಶಿಕ್ಷಣ ಸಂಸ್ಥೆಗಳು ಆಯೋಜಿಸುತ್ತಿರುವ ಜನ್ ಭಾಗಿದಾರಿ ಕಾರ್ಯಕ್ರಮಗಳ ಮಹತ್ವ ಮತ್ತು ಉದ್ದೇಶಗಳನ್ನು ಪ್ರಸ್ತುತ ಪಡಿಸಿದರು. ಭಾರತದಲ್ಲಿ ವಾಸಿಸುವ ಜೀವಜಾತಿಗಳು, ಭೂಪ್ರದೇಶ, ಮತ್ತು ಸಂರಕ್ಷಿಸಲ್ಪಟ್ಟ ಜೀವ ವೈವಿಧ್ಯತೆಯ ಬಗ್ಗೆ ವಿವರವಾದ ಅಂಕಿ ಅಂಶಗಳನ್ನು ಪ್ರಸ್ತುತಪಡಿಸಿದರು.

ಕಾರ್ಯಕ್ರಮದ ಪ್ರಯೋಜನವನ್ನು ಸುಮಾರು 300 ಕ್ಕೂ ಹೆಚ್ಚು ವಿದ್ಯಾರ್ಥಿಗಳು, 65 ಅಧ್ಯಾಪಕರು ಮತ್ತು 20 ಸಂಶೋಧನಾ ವಿದ್ವಾಂಸರು ಪಡೆದರು.

ಕಾಲೇಜಿನ ಪ್ರಾಚಾರ್ಯರಾದ ಪ್ರೊ ಎಂ.ಪಿ.ವಿಜಯೇಂದ್ರಕುಮಾರ್ ಸ್ವಾಗತಿಸಿದರು. ಸಂಘಟನಾ ಕಾರ್ಯದರ್ಶಿ ಪ್ರೊ ಬಿಳಿಗಿರಿರಂಗ ವಂದಿಸಿದರು. ಡಾ. ಸಿಂಧು ಕಾರ್ಯಕ್ರಮ ನಿರೂಪಿಸಿದರು. ವಾಸವಿ ಮತ್ತು ತಂಡದವರು ಪ್ರಾರ್ಥಿಸಿದರು.

ಅಪ್ಪಚೆಟ್ಟೋಳಂಡ ಕಪ್ ಹಾಕಿ ಉತ್ಸವಕ್ಕೆ 1 ಕೋಟಿ ರೂ. ಬಿಡುಗಡೆ

ಜು.18ರಂದು ಸಮಿತಿಗೆ ಸರ್ಕಾರದಿಂದ ಅನುದಾನದ ಚೆಕ್ ಲಭ್ಯ, ಸಮಿತಿಯಲ್ಲಿ ಹರ್ಷ



- ಮುಂದಿನ ಬಾರಿಯೂ ಹಾಕಿ ಉತ್ಸವಕ್ಕೆ ಇದೇ ರೀತಿ ಅನುದಾನ ನೀಡುವಂತೆ ಮನವಿ
- ಅನುದಾನಕ್ಕೆ ಶ್ರಮಿಸಿದ ಮಾಜಿ ಶಾಸಕ ಕೆ.ಜಿ. ಬೋಪಯ್ಯಗೆ ಸನ್ಮಾನ

ಮಡಿಕೇರಿ, ಜು.27– ಹಾಕಿ ಪ್ರತಿಭೆಗಳಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ನಾಪೋಕ್ಲು ವಿನಲ್ಲಿ ಆಯೋಜಿಸಲಾಗಿದ್ದ 'ಅಪ್ಪಚೆಟ್ಟೋಳಂಡ ಕಪ್ ಹಾಕಿ ಉತ್ಸವ'ಕ್ಕೆ ಸರ್ಕಾರದಿಂದ 1 ಕೋಟಿ ರೂ. ಅನುದಾನ ಬಿಡುಗಡೆಯಾಗಿದೆ ಎಂದು ಉತ್ಸವ ಸಮಿತಿಯ ಸಂಚಾಲಕರಾದ ಅಪ್ಪಚೆಟ್ಟೋಳಂಡ ಮನು ಮುತ್ತಪ್ಪ ಹರ್ಷ ವ್ಯಕ್ತಪಡಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಅವರು, ಜಿಲ್ಲಾ ಯುವ ಸಬಲೀಕರಣ ಇಲಾಖೆಯಿಂದ 1 ಕೋಟಿ ಅನುದಾನದ ಚೆಕ್ ಇದೇ ಜು.18ರಂದು ಉತ್ಸವ ಸಮಿತಿಗೆ ದೊರಕಿದೆ. ಮುಂಬರುವ ವರ್ಷಗಳಲ್ಲಿ ನಡೆಯುವ ಕೊಡವ ಕೌಟುಂಬಿಕ ಹಾಕಿ ಉತ್ಸವಕ್ಕೂ ಇದೇ ರೀತಿ ರಾಜ್ಯದ ನೂತನ ಸರ್ಕಾರ ಅನುದಾನವನ್ನು ಒದಗಿಸಬೇಕೆಂದು ಮನವಿ ಮಾಡಿದರು.

ಮಾಜಿ ಶಾಸಕರಿಗೆ ಸನ್ಮಾನ: ನಾಪೋಕ್ಲುವಿನಲ್ಲಿ ಪ್ರಸಕ್ತ ಸಾಲಿನ ಮಾ.18ರಿಂದ 1 ತಿಂಗಳ ಕಾಲ ನಡೆದ ಹಾಕಿ ಉತ್ಸವಕ್ಕೆ 1 ಕೋಟಿ ರೂ. ಅನುದಾನವನ್ನು ದೊರಕಿಸಿಕೊಡುವಲ್ಲಿ ವಿರಾಜಪೇಟೆ ಕ್ಷೇತ್ರದ ಹಿಂದಿನ ಶಾಸಕ ಕೆ.ಜಿ. ಬೋಪಯ್ಯ ಸಾಕಷ್ಟು ಶ್ರಮಿಸಿದ್ದಾರೆ. ಇವರ ಪ್ರಯತ್ನಗಳಿಗೆ ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪೂರಕ ಸ್ಪಂದನವನ್ನು ನೀಡಿದ್ದರು. ಇದರ ಫಲಶ್ರುತಿಯಾಗಿ ಇದೀಗ ಅಪ್ಪಚೆಟ್ಟೋಳಂಡ ಹಾಕಿ ಉತ್ಸವ ಸಮಿತಿಗೆ ಅನುದಾನ ದೊರಕುವಂತಾಯಿತು. ಈ ಹಿನ್ನೆಲೆ ಇಂದು ಸಮಿತಿ ಪದಾಧಿಕಾರಿಗಳು ಕೆ.ಜಿ.ಬೋಪಯ್ಯ ಅವರನ್ನು ಅವರ ಮನೆಯಲ್ಲೇ ಸನ್ಮಾನಿಸಿ, ಕೃತಜ್ಞತೆಯನ್ನು ಸಲ್ಲಿಸಿದ್ದಾರೆ ಎಂದು ಅಪ್ಪಚೆಟ್ಟೋಳಂಡ ಮನು ಮುತ್ತಪ್ಪ ಹೇಳಿದರು.

ಅಪ್ಪಚೆಟ್ಟೋಳಂಡ ಕುಟುಂಬಸ್ಥರಿಗೆ ನಾಪೋಕ್ಲುವಿನಲ್ಲಿ ಹಾಕಿ ಉತ್ಸವ ಆಯೋಜನೆಗೆ ಅವಕಾಶ ದೊರೆತ ಹಂತದಲ್ಲಿ ಸರ್ಕಾರದ ಅನುದಾನಕ್ಕಾಗಿ ಪ್ರಯತ್ನಿಸಲಾಗಿತ್ತು. ಆ ಸಂದರ್ಭ ಅಂದಿನ ಶಾಸಕ ಕೆ.ಜಿ.ಬೋಪಯ್ಯ ಅವರೇ ಖುದ್ದಾಗಿ ಸಮಿತಿ ಸದಸ್ಯರನ್ನು ಸಿಎಂ ಬಳಿಗೆ ಕರೆದೊಯ್ದಿದ್ದರು. ಆಗ ಸಿಎಂ ಬೊಮ್ಮಾಯಿ ಅವರು 1 ಕೋಟಿ ಅನುದಾನವನ್ನು ಒದಗಿಸುವ ಭರವಸೆ ನೀಡಿದ್ದರು. ಪಂದ್ಯಾವಳಿ ಉದ್ಘಾಟನೆಯ ಸಂದರ್ಭ ಒಟ್ಟು ಅನುದಾನದ ಅರ್ಧದಷ್ಟನ್ನು ಒದಗಿಸಲು ಬೊಮ್ಮಾಯಿ ಅವರು ಪ್ರಯತ್ನಿಸಿದ್ದರು, ತಾಂತ್ರಿಕ ಕಾರಣಗಳಿಂದ ಅದು ಸಾಧ್ಯವಾಗಿರಲಿಲ್ಲವೆಂದು ಮಾಹಿತಿ ನೀಡಿದರು.

ನಂತರದ ದಿನಗಳಲ್ಲಿ ಕೆ.ಜಿ.ಬೋಪಯ್ಯ ಅವರು ಸರ್ಕಾರದೊಂದಿಗೆ ವ್ಯವಹರಿಸಿ, ಸರ್ಕಾರದ ಅನುದಾನವನ್ನು ಯುವ ಸಬಲೀಕರಣ ಇಲಾಖೆಯ ಮೂಲಕ ಹಾಕಿ ಉತ್ಸವ ಸಮಿತಿಗೆ ಬರುವ ವ್ಯವಸ್ಥೆ ಮಾಡಿದ್ದರು. ಹಾಕಿ ಉತ್ಸವದ ಬಳಿಕ ಸಮಿತಿ 1.40 ಕೋಟಿ ರೂ. ವೆಚ್ಚವಾದ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಇದೀಗ ಅನುದಾನ ಸಮಿತಿಗೆ ದೊರಕಿದೆಯೆಂದು ಸಂತಸ ವ್ಯಕ್ತಪಡಿಸಿದರು. ಸರ್ಕಾರದಿಂದ ಅನುದಾನ ಬರುತ್ತದೆ ಎನ್ನುವ ಹಿನ್ನೆಲೆಯಲ್ಲಿ ಹಾಕಿ ಉತ್ಸವ ಆಯೋಜನೆಗೆ ಪ್ರಾಯೋಜಕತ್ವ ಕಡಿಮೆ ಮಟ್ಟದಲ್ಲಿ ದೊರಕಿತ್ತು. ಆ ಹಂತದಲ್ಲಿ ಉತ್ಸವ ಸಮಿತಿಯ ಅಪ್ಪಚೆಟ್ಟೋಳಂಡ ದೇವಯ್ಯ ಅವರು 30 ಲಕ್ಷ ರೂ.ಗಳನ್ನು ಸಾಲದ ರೂಪದಲ್ಲಿ ಸಮಿತಿಗೆ ನೀಡಿ ಸಹಕರಿಸಿದ್ದನ್ನು ಸ್ಮರಿಸಿದರು.

ಆಶ್ರಮಕ್ಕೆ ನೆರವು: ಅಪ್ಪಚೆಟ್ಟೋಳಂಡ ಹಾಕಿ ಉತ್ಸವಕ್ಕೆ ಪ್ರಾಯೋಜಕತ್ವದಿಂದ 30 ಲಕ್ಷ ರೂ. ಹಣ ಸಂಗ್ರಹವಾಗಿದೆ. ಇದರಲ್ಲಿ ಜಿಎಸ್‌ಟಿ ಕಳೆದು ಉಳಿಯುವ ಮೊತ್ತದಲ್ಲಿ ಶೇ.2ರಷ್ಟನ್ನು ಅನಾಥಾಶ್ರಮ ಮತ್ತು ವೃದ್ಧಾಶ್ರಮಗಳಿಗೆ ನೀಡಲು ಸಮಿತಿ ಉದ್ದೇಶಿಸಿದೆ ಎಂದು ತಿಳಿಸಿದರು.

ಗಿನ್ನಿಸ್ ದಾಖಲೆಗೆ ಪ್ರಯತ್ನ: ನಾಪೋಕ್ಲುವಿನ ಮೂರು ಮೈದಾನಗಳಲ್ಲಿ ತಿಂಗಳ ಕಾಲ ನಡೆದ ಪಂದ್ಯಾವಳಿಯಲ್ಲಿ 336 ತಂಡಗಳು ಪಾಲ್ಗೊಂಡಿದ್ದವು. ಅತ್ಯಂತ ಯಶಸ್ವಿಯಾಗಿ ನಡೆದ ಪಂದ್ಯಾವಳಿಯನ್ನು ಗಿನ್ನಿಸ್ ದಾಖಲೆಗೆ ಸೇರ್ಪಡೆಗೊಳಿಸುವ ಪ್ರಯತ್ನಗಳನ್ನು ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಕ್ರೀಡಾಶಾಲೆ–ಟರ್ಫ್‌ಗೆ ಆಗ್ರಹ: ಹಾಕಿ ಕ್ರೀಡಾ ಚಟುವಟಿಕೆಗಳ ಕೇಂದ್ರಸ್ಥಾನವಾಗಿರುವ ನಾಪೋಕ್ಲುವಿನಲ್ಲಿ ಯುವ ಪ್ರತಿಭೆಗಳಿಗೆ ಅನುಕೂಲವಾಗುವಂತೆ ಕ್ರೀಡಾ ಶಾಲೆ ಮತ್ತು ಆಸ್ಟ್ರೋ ಟರ್ಫ್ ಮೈದಾನ ನಿರ್ಮಿಸಬೇಕೆಂದು ಅಪ್ಪಚೆಟ್ಟೋಳಂಡ ಮನು ಮುತ್ತಪ್ಪ ಸರ್ಕಾರವನ್ನು ಆಗ್ರಹಿಸಿದರು. ನಾಪೋಕ್ಲುವಿನಲ್ಲಿ ಇಲ್ಲಿಯವರೆಗೆ 4 ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿಗಳು ನಡೆದಿದ್ದು, ಮುಂಬರುವ ವರ್ಷಗಳಲ್ಲಿ ಇನ್ನೂ ಕೆಲ ಕುಟುಂಬಗಳಿಂದ ಪಂದ್ಯಾವಳಿ ನಡೆಯಲಿದೆ. ಹಾಕಿ ಕ್ರೀಡೆಯ ಬಗ್ಗೆ ಹೆಚ್ಚಿನ ಆಸಕ್ತಿ ಕಂಡು ಬರುವ ಈ ವಿಭಾಗದಲ್ಲಿ ಕ್ರೀಡಾ ಶಾಲೆ, ಆಸ್ಟ್ರೋ ಟರ್ಫ್ ಸೌಲಭ್ಯ ಒದಗಿಸಿದಲ್ಲಿ, ರಾಷ್ಟ್ರೀಯ ತಂಡವನ್ನು ಮತ್ತಷ್ಟು ಯುವ ಪ್ರತಿಭೆಗಳು ಪ್ರತಿನಿಧಿಸಲು ಅವಕಾಶ ದೊರಕಿದಂತಾಗುತ್ತದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಅಪ್ಪಚೆಟ್ಟೋಳಂಡ ಹಾಕಿ ಉತ್ಸವ ಸಮಿತಿಯ ಉಪಾಧ್ಯಕ್ಷ ಅಪ್ಪಚೆಟ್ಟೋಳಂಡ ಭೀಮಯ್ಯ, ಖಜಾಂಚಿ ಅಪ್ಪಚೆಟ್ಟೋಳಂಡ ವಸಂತ್ ಮುತ್ತಪ್ಪ, ಕುಟುಂಬದ ಹಿರಿಯ ರಾದ ಅಪ್ಪಚೆಟ್ಟೋಳಂಡ ಪೂ ದೇವಯ್ಯ, ಅಪ್ಪ ಚೆಟ್ಟೋಳಂಡ ಡಾಲಿ ಬೋಪಯ್ಯ, ಅಪ್ಪಚೆಟ್ಟೋಳಂಡ ಶ್ಯಾಂ ಕಾಳಯ್ಯ, ಅಪ್ಪ ಚೆಟ್ಟೋಳಂಡ ರವಿ ಮೊಣ್ಣಪ್ಪ ಉಪಸ್ಥಿತರಿದ್ದರು.

ಕಾಡಿಗೆ ತೆರಳಲು ಕಾಡಾನೆಗಳು ಹಿಂದೇಟು





ಸಿದ್ದಾಪುರ, ಜು.27– ಸಿದ್ದಾಪುರ ಸುತ್ತಮುತ್ತ ಕಾಫಿ ತೋಟಗಳಲ್ಲಿ ಬೀಡು ಬಿಟ್ಟು ಅಪಾರ ಪ್ರಮಾಣದ ಕೃಷಿ ಫಸಲು ನಾಶ ಮಾಡುವುದರ ಮೂಲಕ ಕಾರ್ಮಿಕರು, ಬೆಳೆಗಾರರಲ್ಲಿ ಆತಂಕ ಸೃಷ್ಟಿಸುತ್ತಿದ್ದ ಕಾಡಾನೆಗಳನ್ನು ಅರಣ್ಯ ಇಲಾಖೆ ಸಿಬ್ಬಂದಿ ಮಳೆಯ ನಡುವೆಯೂ ಕಾಡಿಗೆ ಅಟ್ಟಲು ಯತ್ನಿಸಿದರಾದರೂ ಆನೆಗಳು ಕಾಡಿಗೆ ಹೋಗಲು ಹಿಂದೇಟು ಹಾಕಿದವು.

ಮರಿಯಾನೆಯೊಂದಿಗೆ 9 ಕಾಡಾನೆಗಳ ಹಿಂಡು ಗುಯ್ಯ ಭಾಗದ ಕಾಫಿ ತೋಟಗಳಲ್ಲಿ ಬೀಡು ಬಿಟ್ಟಿತ್ತು. ಕೃಷಿ ಫಸಲುಗಳನ್ನು ತುಳಿದು, ತಿಂದು ನಾಶ ಮಾಡುವುದರ ಮೂಲಕ ಕಾರ್ಮಿಕರು, ಬೆಳೆಗಾರರು ತೋಟಕ್ಕೆ ತೆರಳಲು ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣ ಮಾಡಿತ್ತು.

ಗ್ರಾಮಸ್ಥರ ಮನವಿ ಮೇರೆಗೆ ವಿರಾಜಪೇಟೆ ವಲಯ ಅರಣ್ಯಾಧಿಕಾರಿ ಕಳ್ಳಿರ ಎಂ.ದೇವಯ್ಯ ನೇತೃತ್ವದಲ್ಲಿ ಹತ್ತಕ್ಕೂ ಹೆಚ್ಚು ಸಿಬ್ಬಂದಿಗಳ ತಂಡ ಮಳೆಯ ನಡುವೆಯೂ ಆನೆ ಓಡಿಸುವ ಕಾರ್ಯಾಚರಣೆ ಆರಂಭಿಸಿದರು. ಒಂದು ತೋಟದಿಂದ ಮತ್ತೊಂದು ತೋಟಕ್ಕೆ ನುಸುಳಿ ಬೇರ್ಪಟ್ಟು ಕಾಣೆಯಾಗಿದ್ದವು. ಬೇರ್ಪಟ್ಟ ಆನೆಗಳನ್ನು ಒಂದುಗೂಡಿಸಿ ಸಿದ್ದಾಪುರ ವಿರಾಜಪೇಟೆಯ ಇಂಜಲಗೆರೆ ಮುಖ್ಯ ರಸ್ತೆವರೆಗೂ ಬಂದ ಕಾಡಾನೆಗಳು ವಾಹನಗಳ ದಟ್ಟಣೆಯಿಂದ ರಸ್ತೆ ದಾಟಲು ಹಿಂದೇಟು ಹಾಕಿದವು. ನಂತರ ಸಿದ್ದಾಪುರ ವಿರಾಜಪೇಟೆ ಮಾರ್ಗವಾಗಿ ಸಂಚರಿಸುತ್ತಿದ್ದ ವಾಹನಗಳನ್ನು ಅರಣ್ಯ ಇಲಾಖೆ ಸಿಬ್ಬಂದಿಗಳಿಂದ ಕೆಲಕಾಲ ತಡೆಹಿಡಿಯಲಾಯಿತು.

ಮತ್ತೆ ಗಾಬರಿಗೊಂಡಿದ್ದ ಕಾಡಾನೆಗಳನ್ನು ಕೊನೆಗೂ ರಸ್ತೆ ದಾಟಿಸಿ ಬಿಟಿ ಕಾಡು ಭಾಗಕ್ಕೆ ಅಟ್ಟಲಾಯಿತಾದರೂ ಅರಣ್ಯಕ್ಕೆ ತೆರಳಲು ಹಿಂದೇಟು ಹಾಕಿದವು. ಸಂಜೆಯಾದ್ದರಿಂದ ಅರಣ್ಯ ಇಲಾಖೆ ಸಿಬ್ಬಂದಿ ಕಾರ್ಯಾಚರಣೆ ಸ್ಥಗಿತಗೊಳಿಸಿದರು.

ಈ ಸಂದರ್ಭ ಉಪವಲಯ ಅರಣ್ಯಾಧಿಕಾರಿ ಸಂಜಿತ್ ಸೋಮಯ್ಯ, ಅರಣ್ಯ ರಕ್ಷಕ ಅರುಣ, ವಾಹನ ಚಾಲಕ ಅಚ್ಚಯ್ಯ, ಆರ್‌ಆರ್‌ಟಿ ಸಿಬ್ಬಂದಿಗಳಾದ ವಿನೋದ, ಮಂಜು, ವಿನೋದ್, ಮುರುಗ, ಸಚಿನ್ ಸೇರಿದಂತೆ ಮತ್ತಿತರರು ಇದ್ದರು.

ಎಚ್.ಎಲ್.ಲಕ್ಕಯ್ಯ ನಿಧನ



ಕುಶಾಲನಗರ, ಜು.27– ಪಟ್ಟಣದ ಟೌನ್ ಕಾಲೋನಿ ನಿವಾಸಿ, ಮಾಜಿ ಸೈನಿಕರೂ ಆದ ಮಂಡಲ ಪಂಚಾಯಿತಿ ಮಾಜಿ ಸದಸ್ಯ ಎಚ್.ಎಲ್.ಲಕ್ಕಯ್ಯ (83) ಗುರುವಾರ ನಿಧನರಾದರು. ಮೃತರು ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ಕಳೆದ ಕೆಲವು ವರ್ಷಗಳ ಹಿಂದೆ ಅವರ ಪತ್ನಿ ಎಚ್.ಎಸ್. ಪುಟ್ಟಮ್ಮ ನಿಧನರಾಗಿದ್ದರು. ಮೃತರ ಅಂತ್ಯಕ್ರಿಯೆಯು ಶುಕ್ರವಾರ ಮಾರುಕಟ್ಟೆ ರಸ್ತೆಯ ಹಿಂದೂ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು

ಕೊಡಗಲ್ಲಿ ಮಳೆಯಿಂದ ಕಾಫಿ ಬೆಳೆಗೆ ಅಪಾರ ಹಾನಿ

ಮಡಿಕೇರಿ, ಜು.27– ಕೊಡಗು ಜಿಲ್ಲೆಯಲ್ಲಿ ಕಳೆದ ಕೆಲವು ದಿನಗಳಿಂದ ಸುರಿಯುತ್ತಿರುವ ಧಾರಾಕಾರ ಮಳೆ ಮತ್ತು ಪ್ರವಾಹದ ಪರಿಸ್ಥಿತಿಯಿಂದ ಕಾಫಿ ತೋಟಗಳು ಹಾನಿಗೀಡಾಗಿವೆ.



ಕಾಫಿಗೆ ಕೊಳೆ ರೋಗ ತಗುಲಿದ್ದು, ಕಾಫಿ ಉದುರುತ್ತಿದೆ, ರೋಬಸ್ಟಾ ಕಾಫಿಗೆ ಹೆಚ್ಚು ಹಾನಿಯಾಗಿದೆ. ಬೆಳೆಗಾರರು ನಷ್ಟದ ಆತಂಕವನ್ನು ಎದುರಿಸುತ್ತಿದ್ದು, ಕೇಂದ್ರ ಹಾಗೂ ರಾಜ್ಯ ಸರ್ಕಾರ ಸೂಕ್ತ ಪರಿಹಾರ ಘೋಷಿಸಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘದ ಕೊಡಗು ಜಿಲ್ಲಾಧ್ಯಕ್ಷ ಮನು ಸೋಮಯ್ಯ ಒತ್ತಾಯಿಸಿದ್ದಾರೆ.

ರೈತ ಸಂಘ ನಡೆಸಿದ ಸಮೀಕ್ಷೆ ಪ್ರಕಾರ ಶೇ.50ರಷ್ಟು ಬೆಳೆ ನಷ್ಟವಾಗಿದೆ. ಜಿಲ್ಲಾಡಳಿತ ತಕ್ಷಣ ಬೆಳೆಹಾನಿ ಸಮೀಕ್ಷೆಗೆ ಆದೇಶಿಸಬೇಕು ಮತ್ತು ಎನ್‌ಡಿಆರ್‌ಎಫ್ ಹಾಗೂ ಎಸ್‌ಡಿಆರ್‌ಎಫ್ ಮೂಲಕ ಪರಿಹಾರ ಒದಗಿಸಲು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಕೊಡಗಲ್ಲಿ ತಗ್ಗಿದ ಮಳೆ ಅಬ್ಬರ

ಪ್ರವಾಹದ ಭೀತಿ ಇಲ್ಲ, ತಗ್ಗು ಪ್ರದೇಶದಲ್ಲಿ ನಿಂತಿರುವ ನೀರು

- ಮರಗಳು, ವಿದ್ಯುತ್ ಕಂಬಗಳು ಧರೆಗೆ, ಟ್ರಾನ್ಸ್‌ಫಾರ್ಮರ್‌ಗೆ ಹಾನಿ



ಮಡಿಕೇರಿ, ಜು.27– ಕೊಡಗು ಜಿಲ್ಲೆಯಲ್ಲಿ ಮಳೆ ಅಬ್ಬರ ಸಂಪೂರ್ಣವಾಗಿ ತಗ್ಗಿದ್ದರೂ ಮಳೆ ಹಾನಿ ಪ್ರಕರಣಗಳು ವರದಿಯಾಗಿವೆ. ನದಿಗಳಲ್ಲಿ ನೀರಿನ ಪ್ರಮಾಣ ಇಳಿಕೆಯಾಗಿದ್ದು, ತಗ್ಗು ಪ್ರದೇಶಗಳಲ್ಲಿ ಮಾತ್ರವೇ ನದಿ ನೀರು ನಿಂತಿದೆ. ಮಳೆ ಕಡಿಮೆಯಾಗಿರುವ ಕಾರಣ ಮತ್ತೆ ಪ್ರವಾಹ ಉಕ್ಕೇರುವ ಆತಂಕ ಸದ್ಯಕ್ಕೆ ದೂರವಾಗಿದೆ.

ಗಾಳಿ ಸಹಿತ ಮಳೆ ಸುರಿದ ಪರಿಣಾಮ



ಮರ ಬಿದ್ದು, ಹುದಿಕೇರಿ ಹೋಬಳಿ ತೂಚಮಕೇರಿ ಗ್ರಾಮದ ಕೆಆರ್. ಪೂವಣ್ಣ ಎಂಬುವರ ಮನೆಯ ಚಾವಣಿಗೆ ತೀವ್ರ ಹಾನಿ ಯಾಗಿದೆ. ಮಡಿಕೇರಿ ಹೋಬಳಿ ನಿಡುವಟ್ಟು ಗ್ರಾಮ ನಿವಾಸಿ ಕೆ.ವೆಂಕಪ್ಪ ಅವರ ಮನೆಗೂ ಮರ ಬಿದ್ದು ಹಾನಿಯಾಗಿದೆ. ಮಳೆಯಿಂದ ಮರಗೋಡು ಗ್ರಾಮ ನಿವಾಸಿ ಬಿ.ಬಿ. ಸುಜಾತ ಎಂಬವರ ಮನೆಯ ಗೋಡೆ ಕುಸಿದು ಬಿದ್ದಿದೆ. ಗಾಳಿ ಮಳೆಗೆ 6 ಮನೆಗಳಿಗೆ ಅಲ್ಪ ಪ್ರಮಾಣದ ಹಾನಿಯಾಗಿದೆ.

ಕಳೆದ 24 ಗಂಟೆ ಅವಧಿಯಲ್ಲಿ ಜಿಲ್ಲೆಯ ವಿವಿಧ ಕಡೆಗಳಲ್ಲಿ ಒಟ್ಟು 4 ಮರಗಳು ಮುರಿದು ಬಿದ್ದ ಬಗ್ಗೆ ವರದಿಯಾಗಿದ್ದು, ಎಲ್ಲಾ ಮರಗಳನ್ನು ಸ್ಥಳದಿಂದ ತೆರವು ಮಾಡಲಾಗಿದೆ. ಒಟ್ಟು 50 ವಿದ್ಯುತ್ ಕಂಬಗಳು ಮುರಿದು ಬಿದ್ದಿದ್ದು, 1 ಟ್ರಾನ್ಸ್‌ಫಾರ್ಮರ್ ದುರಸ್ತಿಗೀಡಾಗಿದೆ. ವಿವಿಧ ಭಾಗಗಳಲ್ಲಿ ಮಳೆಯ ನಡುವೆಯೇ ವಿದ್ಯುತ್ ಮರು ಪೂರೈಕೆಗಾಗಿ ಕಾಮಗಾರಿ ನಡೆಸಲಾಗುತ್ತಿದ್ದು ಚೆಸ್ಕಾಂಗೆ 6 ಲಕ್ಷ ರೂ. ನಷ್ಟ ಉಂಟಾಗಿದೆ. ಗಾಳಿ ಮಳೆ ಸಹಿತ ಚಳಿಯಿಂದಾಗಿ 3 ಜಾನುವಾರುಗಳು ಮೃತಪಟ್ಟಿವೆ ಎಂದು ಜಿಲ್ಲಾ ವಿಪತ್ತು ನಿರ್ವಹಣಾ ಘಟಕ ಮಾಹಿತಿ ನೀಡಿದೆ.

ಮಾದಪ್ಪನ ಹುಂಡಿಯಲ್ಲಿ 1.56 ಕೋಟಿ ಸಂಗ್ರಹ



ಹನೂರು, ಜು.27– ಇಲ್ಲಿನ ಪ್ರಸಿದ್ಧ ಧಾರ್ಮಿಕ ಕ್ಷೇತ್ರ ಮಲೆ ಮಹದೇಶ್ವರ ಬೆಟ್ಟದಲ್ಲಿ ನಡೆದ ಹುಂಡಿ ಎಣಿಕೆ ಕಾರ್ಯದಲ್ಲಿ 1.56 ಕೋಟಿ ರೂ. ಸಂಗ್ರಹವಾಗಿದೆ.

ಗುರುವಾರ ಬೆಳಗ್ಗೆ ಮಲೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಗೀತಾ ಹುಡೇದ ಅವರ ನೇತೃತ್ವದಲ್ಲಿ ದೇವಾಲಯದಲ್ಲಿ ನಡೆದ ಹುಂಡಿ ಎಣಿಕೆ ಕಾರ್ಯದಲ್ಲಿ 1,49,94,886 ನೋಟು, 6,43,236 ನಾಣ್ಯ ಸೇರಿದಂತೆ 1,56,38,122 ರೂ., 30ಗ್ರಾಂ ಚಿನ್ನ, 1ಕೆಜಿ 26 ಗ್ರಾಂ ಬೆಳ್ಳಿ ದೊರೆತಿದೆ.

ಪ್ರತಿನಿತ್ಯ ಸಾವಿರಾರು ಹಾಗೂ ವಿಶೇಷ ದಿನಗಳಲ್ಲಿ ಲಕ್ಷಾಂತರ ಭಕ್ತರು ದೇವಾಲಯಕ್ಕೆ ಆಗಮಿಸಿ ಮಲೆ ಮಾದಪ್ಪನ ದರ್ಶನ ಪಡೆದು ಹುಲಿ ವಾಹನ, ಬಸವ ವಾಹನ, ರುದ್ರಾಕ್ಷಿ ಮಂಟಪ ಉತ್ಸವ ಸೇರಿ ಚಿನ್ನದ ತೇರು ಉತ್ಸವದಲ್ಲಿ ಭಕ್ತರು ಕಾಣಿಕೆ ಅರ್ಪಿಸಿದ ಹಿನ್ನೆಲೆ 21 ದಿನದಲ್ಲಿ ದೊರೆತ ಅಧಿಕ ಮೊತ್ತ ಇದಾಗಿದೆ. ಹುಂಡಿ ಎಣಿಕೆ ಕಾರ್ಯದಲ್ಲಿ ನೂರಾರು ಸಿಬ್ಬಂದಿ ಪಾಲ್ಗೊಂಡಿದ್ದರು.

ಜಿಲ್ಲಾ ಪತ್ರಕರ್ತರ ಸಂಘದ ಪ್ರಶಸ್ತಿಗಳಿಗೆ ಆಯ್ಕೆ



ಚಾಮರಾಜನಗರ, ಜು.27– ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಬೆಳ್ಳಿ ಮಹೋತ್ಸವ ಪ್ರಯುಕ್ತ ವಿವಿಧ ಪ್ರಶಸ್ತಿಗಳಿಗೆ ಪತ್ರಕರ್ತರು ಆಯ್ಕೆಯಾಗಿದ್ದಾರೆ.

ಮಾನಸ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಡಾ.ದತ್ತೇಶ್ ಕುಮಾರ್ ಸ್ಥಾಪಿಸಿರುವ ಅತ್ಯುತ್ತಮ ಮಾನವೀಯ ವರದಿಗೆ ನೀಡಲಾಗುವ ದಿ.ಆರ್.ಸಿದ್ದೇಗೌಡ ಪ್ರಶಸ್ತಿಗೆ ಹನೂರಿನ ವಿಜಯವಾಣಿ ವರದಿಗಾರ ಎಸ್.ಲಿಂಗರಾಜು ಅವರ 'ಸೂರಿಲ್ಲದೆ ಬೀದಿಗೆ ಬಿದ್ದ ಹನೂರಿನ ವೃದ್ಧ ದಂಪತಿ' ವರದಿ ಆಯ್ಕೆಯಾಗಿದೆ. ರಾಮಸಮುದ್ರ ಪುಟ್ಟಮಲ್ಲಪ್ಪ ಸ್ಥಾಪಿಸಿರುವ ಅತ್ಯುತ್ತಮ ಕೃಷಿ ವರದಿಗೆ ನೀಡಲಾಗುವ ದಿ.ಆರ್.ಪಿ.ರೇವಣ್ಣ ಪ್ರಶಸ್ತಿಗೆ ಚಾಮರಾಜನಗರದ ವಿಜಯವಾಣಿ ಛಾಯಾಗ್ರಾಹಕ ಎಚ್.ಎಲ್.ರಾಜು ಹೊಸೂರು ಬರೆದಿರುವ 'ಬಾಳು ಬೆಳಗುತ್ತಿರುವ ಬಾಳೆ ದಿಂಡು' ವರದಿ ಪ್ರಶಸ್ತಿಗೆ ಆಯ್ಕೆಯಾಗಿದೆ.

ಹೊಸೂರು ಜಗದೀಶ್ ಸ್ಥಾಪಿಸಿರುವ ದಿ.ಸಿದ್ದಲಿಂಗದೇವರು ಅತ್ಯುತ್ತಮ ಛಾಯಾಗ್ರಾಹಕ ಪ್ರಶಸ್ತಿಗೆ ವಿಜಯ ಕರ್ನಾಟಕ ಛಾಯಾಗ್ರಾಹಕ ಉತ್ತುವಳ್ಳಿ ಮಹೇಶ್ ಆಯ್ಕೆಯಾಗಿದ್ದಾರೆ.

ಗುಂಡ್ಲುಪೇಟೆ ಶಾಸಕ ಹೆಚ್.ಎಂ. ಗಣೇಶ್ ಪ್ರಸಾದ್ ಸ್ಥಾಪಿಸಿರುವ ಮಾಜಿ ಸಚಿವ ಹೆಚ್.ಎಸ್.ಮಹದೇವಪ್ರಸಾದ್ ಸ್ಮರಣಾರ್ಥ ಪ್ರಶಸ್ತಿಗೆ ಗುಂಡ್ಲುಪೇಟೆ ಕನ್ನಡಪ್ರಭ ವರದಿಗಾರ ರಂಗೂಪುರ ಶಿವಕುಮಾರ್, ಮಾಂಬಳ್ಳಿ ಎಚ್. ಫಲ್ಗುಣ ಸ್ಥಾಪಿಸಿರುವ ಮಾಂಬಳ್ಳಿ ಎನ್. ಹೊಂಬಾಳಯ್ಯ ಮತ್ತು ಪುಟ್ಟನಂಜಮ್ಮ ಸ್ಮರಣಾರ್ಥ ಪ್ರಶಸ್ತಿಗೆ ಯಳಂದೂರಿನ ಉದಯವಾಣಿ ವರದಿಗಾರ ಫೈರೋಜ್ ಖಾನ್, ಕೊಳ್ಳೇಗಾಲದ ಮಾಜಿ ಶಾಸಕ ಎಸ್.ಬಾಲರಾಜ್ ಸ್ಥಾಪಿಸಿರುವ ಮದ್ದೂರಿನ ದಿ.ಎಸ್.ವಿ. ಲಕ್ಷ್ಮಮ್ಮ ಎಂ.ಸಂಜೀವಯ್ಯ ಸ್ಮಾರಕ ಪ್ರಶಸ್ತಿಗೆ ಚಾಮರಾಜನಗರದ ಸುದ್ದಿಬುದ್ದಿ ಪತ್ರಿಕೆ ಸಂಪಾದಕಿ ಸ್ನೇಹಲಕ್ಷ್ಮೀ, ವಡಗೆರೆ ಗ್ರಾಮದ ಪ್ರಥಮ ದರ್ಜೆ ಗುತ್ತಿಗೆದಾರರಾದ ಕುಮಾರ್ ಆನಂದಕುಮಾರ್ ಸ್ಥಾಪಿಸಿರುವ ದಿ.ವಡಗೆರೆ ಪಟೇಲ್ ಚಾಮೇಗೌಡ ಸ್ಮಾರಕ ಪ್ರಶಸ್ತಿಗೆ ಮಲೆ ಮಹದೇಶ್ವರ ಬೆಟ್ಟದ ಕನ್ನಡಪ್ರಭ ವರದಿಗಾರ ಬಿ. ಮಹದೇವ ಪ್ರಸಾದ್, ಸಂತೇಮರಹಳ್ಳಿ ಎಂ.ಪಿ. ಮಾದಪ್ಪ ಸ್ಥಾಪಿಸಿರುವ ದಿ.ರೇವಮ್ಮ ಹೊಸಹಟ್ಟಿ ಪುಟ್ಟಸುಬ್ಬಪ್ಪ ಸ್ಮಾರಕ ಪ್ರಶಸ್ತಿಗೆ ಸಂತೇಮರಹಳ್ಳಿಯ ಪ್ರಜಾವಾಣಿ ವರದಿಗಾರ ಹೆಗ್ಗವಾಡಿಪುರ ಎಸ್.ಮಹದೇವ್, ಕೊಳ್ಳೇಗಾಲ ಶಾಸಕ ಎ.ಆರ್. ಕೃಷ್ಣಮೂರ್ತಿ ಸ್ಥಾಪಿಸಿರುವ ಗೌರಮ್ಮ ಬಿ. ರಾಚಯ್ಯ ಪ್ರತಿಷ್ಠಾನ ಪ್ರಶಸ್ತಿಗೆ ಕೊಳ್ಳೇಗಾಲದ ಉದಯವಾಣಿ ವರದಿಗಾರ ಡಿ.ನಟರಾಜು, ರೇಷ್ಮೆನಾಡು ಪತ್ರಿಕೆ ಸಂಪಾದಕಿ ಸವಿತಾ ಜಯಂತ್ ಸ್ಥಾಪಿಸಿರುವ ದಿ.ಸದಾಶಿವ ಗಟ್ಟವಾಡಿಪುರ ಪ್ರಶಸ್ತಿಗೆ ಆಲೂರಿನ ಪತ್ರಿಕಾ ಪ್ರತಿನಿಧಿ ಎ.ಎನ್.ನಾಗೇಂದ್ರ ಮೂರ್ತಿ ಅವರನ್ನು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕಾರ್ಯಕಾರಿ ಸಮಿತಿ ಆಯ್ಕೆ ಮಾಡಿದೆ.

ಜು.29ರಂದು ಚಾಮರಾಜನಗರದ ವರ್ತಕರ ಭವನದಲ್ಲಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಬೆಳ್ಳಿ ಮಹೋತ್ಸವದ ಪ್ರಯುಕ್ತ ನಡೆಯುವ ಪತ್ರಿಕಾ ದಿನಾ ಚರಣೆಯಲ್ಲಿ ಪ್ರಶಸ್ತಿ ಪ್ರದಾನ ಮಾಡ ಲಾಗುವುದು. ವಿವಿಧ ಪ್ರಶಸ್ತಿಗಳಿಗೆ ಆಯ್ಕೆಯಾಗಿರುವ ಎಲ್ಲಾ ಪತ್ರಕರ್ತರನ್ನು ಸಂಘದ ಜಿಲ್ಲಾಧ್ಯಕ್ಷ ದೇವರಾಜು ಕಪ್ಪಸೋಗೆ ಹಾಗೂ ಪ್ರಧಾನ ಕಾರ್ಯದರ್ಶಿ ಗೌಡಹಳ್ಳಿ ಮಹೇಶ್ ಅಭಿನಂದಿಸಿದ್ದಾರೆ.

ಉಪಾಹಾರ ಸೇವಿಸಿ 7 ವಿದ್ಯಾರ್ಥಿಗಳು ಅಸ್ವಸ್ಥ

ಬೇಗೂರು, ಜು.27– ಸಮೀಪದ ಯಡವನಹಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಮಾಂಸಾಹಾರ ಸೇವಿಸಿ ಕೆಲ ವಿದ್ಯಾರ್ಥಿಗಳು ಅಸ್ವಸ್ಥಗೊಂಡ ಘಟನೆ ಮಾಸುವ ಮುನ್ನವೇ ಗರಗನ ಹಳ್ಳಿ ವಸತಿ ಶಾಲೆಯಲ್ಲಿ ಗುರುವಾರ ಬೆಳಗ್ಗೆ ಉಪಾಹಾರ ಸೇವಿಸಿದ 7 ಮಂದಿ ವಿದ್ಯಾರ್ಥಿಗಳು ಅಸ್ವಸ್ಥಗೊಂಡಿದ್ದಾರೆ.

ಶಾಲೆಯ ವರ್ಣಿತ(13), ಹರ್ಷಿತಾ (13), ಪ್ರಿಯ(13), ರಚನಾ(15), ಸಂಜನಾ (15), ಸಂಗೀತ (13), ಪ್ರಜ್ವಲ್(15) ಸೇರಿದಂತೆ 7 ವಿದ್ಯಾರ್ಥಿಗಳು ಅಸ್ವಸ್ಥಗೊಂಡವರು. ಇಂದು ಬೆಳಗ್ಗೆ ಟೊಮೆಟೊ ಬಾತ್ ಸೇವಿಸಿದ 207 ಮಂದಿ ಪೈಕಿ 7 ವಿದ್ಯಾರ್ಥಿಗಳಿಗೆ ತಲೆಸುತ್ತು, ವಾಂತಿ ಹಾಗೂ ಜ್ವರ ಕಾಣಿಸಿಕೊಂಡು ಅಸ್ವಸ್ಥರಾಗಿದ್ದು, ತಕ್ಷಣ ಅವರನ್ನು ಸಮೀಪದ ಹೊರೆಯಾಲ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಚಿಕಿತ್ಸೆಗಾಗಿ ದಾಖಲಿಸಲಾಯಿತು. ತೀವ್ರವಾಗಿ ಅಸ್ವಸ್ಥಗೊಂಡ ಪ್ರಜ್ವಲ್ ಎಂಬ ವಿದ್ಯಾರ್ಥಿಯನ್ನು ಗುಂಡ್ಲುಪೇಟೆ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ವಿಷಯ ತಿಳಿದು ಸ್ಥಳಕ್ಕೆ ಬೇಗೂರು ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಕಿರಣ್ ಕುಮಾರ್ ಮತ್ತು ಸಬ್ ಇನ್ಸ್‌ಪೆಕ್ಟರ್ ಚರಣ್ ಗೌಡ ಧಾವಿಸಿ ಅಸ್ವಸ್ಥಗೊಂಡ ಮಕ್ಕಳಿಂದ ಮಾಹಿತಿ ಪಡೆದರು.



ಮಾರ್ಟಳ್ಳಿ ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಹನೂರು, ಜು.27– ತಾಲೂಕಿನ ಮಾರ್ಟಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಇಗ್ನೇಶಿ ಮುತ್ತು ಮತ್ತು ಉಪಾಧ್ಯಕ್ಷೆಯಾಗಿ ನದಿಯಾ ಆಯ್ಕೆಯಾಗಿದ್ದಾರೆ.

ತಾಲೂಕಿನ ದೊಡ್ಡ ಗ್ರಾಪಂ ಎಂದೇ ಹೆಸರು ಪಡೆದಿರುವ ಮಾರ್ಟಳ್ಳಿ ಗ್ರಾಪಂನಲ್ಲಿ 20 ಮಂದಿ ಕಾಂಗ್ರೆಸ್ ಬೆಂಬಲಿತರು, 14 ಮಂದಿ ಜೆಡಿಎಸ್ ಬೆಂಬಲಿತರು, ತಲಾ ಇಬ್ಬರು ಬಿಜೆಪಿ, ಪಕ್ಷೇತರ ಸದಸ್ಯರನ್ನು ಒಳಗೊಂಡ ಒಟ್ಟು 38 ಸದಸ್ಯರಿದ್ದಾರೆ.

ಗುರುವಾರ 2ನೇ ಅವಧಿಗೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ಬೆಂಬಲಿತ ಸದಸ್ಯ ಇಗ್ನೇಶಿ ಮುತ್ತು ಮತ್ತು ಜೆಡಿಎಸ್ ಬೆಂಬಲಿತ ಸದಸ್ಯೆ ಮೇರಿ, ಉಪಾಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ಬೆಂಬಲಿತ ಸದಸ್ಯೆ ನದಿಯಾ, ಜೆಡಿಎಸ್ ಬೆಂಬಲಿತ ಸದಸ್ಯೆ ಕಾವ್ಯ ನಾಮಪತ್ರ ಸಲ್ಲಿಸಿದ್ದರು. ನಂತರ ನಡೆದ ಚುನಾವಣೆಯಲ್ಲಿ 26 ಮತ ಪಡೆದ ಇಗ್ನೇಶಿ ಮುತ್ತು ಅಧ್ಯಕ್ಷರಾಗಿ, 29 ಮತ ಪಡೆದ ನದಿಯಾ ಉಪಾಧ್ಯಕ್ಷರಾಗಿ ಆಯ್ಕೆಯಾದರು.

ಗ್ರಾಪಂ ನೂತನ ಅಧ್ಯಕ್ಷ ಇಗ್ನೇಶಿ ಮುತ್ತು ಮಾತನಾಡಿ, ಗ್ರಾಪಂ ವ್ಯಾಪ್ತಿಯ ಗ್ರಾಮಗಳಿಗೆ ಕುಡಿಯುವ ನೀರು, ಚರಂಡಿ, ರಸ್ತೆ ಸೇರಿದಂತೆ ಮೂಲ ಸೌಕರ್ಯ ಒದಗಿಸುವ ಜೊತೆಗೆ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಲಾಗುವುದು. ಅಲ್ಲದೇ ಸರ್ಕಾರದ ಸೌಲಭ್ಯಗಳನ್ನು ಪ್ರತಿಯೊಬ್ಬರಿಗೂ ತಲುಪಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ಹೇಳಿದರು.

ಈ ವೇಳೆ ಕಾಂಗ್ರೆಸ್ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು. ಚುನಾವಣಾಧಿಕಾರಿಯಾಗಿ ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಸಹಾಯಕ ನಿರ್ದೇಶಕಿ ಹೆಚ್.ಬಿ.ರಾಧಾ ಕಾರ್ಯ ನಿರ್ವಹಿಸಿದರು. ಈ ಸಂದರ್ಭ ರಾಮಾಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಈಶ್ವರ್, ಮುಖಂಡರಾದ ಶಿವು, ಎನ್.ಆರ್.ಮಾದೇಶ್ ಸೇರಿದಂತೆ ಕಾಂಗ್ರೆಸ್ ಮುಖಂಡರು ಹಾಜರಿದ್ದರು.

ಗಾಯಗೊಂಡ ಬಾಲಕನ ಆರೋಗ್ಯ ವಿಚಾರಿಸಿದ ಎಆರ್‌ಕೆ

ಚಾಮರಾಜನಗರ, ಜು.27– ನಗರದ ಹೊರವಲಯದ ಸಿಮ್ಸ್ ಆಸ್ಪತ್ರೆಗೆ ಶಾಸಕ ಎ.ಆರ್.ಕೃಷ್ಣಮೂರ್ತಿ ಭೇಟಿ ನೀಡಿ, ಚಿರತೆ ದಾಳಿಯಿಂದ ಗಾಯಗೊಂಡು ಚಿಕಿತ್ಸೆ ಪಡೆಯುತ್ತಿರುವ ಬಾಲಕನ ಆರೋಗ್ಯ ವಿಚಾರಿಸಿ, ಪೋಷಕರಿಗೆ ಸಾಂತ್ವನ ಹೇಳಿದರು.

ಜಿಲ್ಲೆಯ ಯಳಂದೂರು ತಾಲೂಕಿನ ಮಲ್ಲಿಗಹಳ್ಳಿ ಗ್ರಾಮದಲ್ಲಿ ಮಂಗಳವಾರ ರಾತ್ರಿ ಚಿರತೆ ದಾಳಿ ನಡೆಸಿ ಹರ್ಷಿತ್(10) ಎಂಬ ಬಾಲಕನನ್ನು ಗಾಯಗೊಳಿಸಿತ್ತು. ಈ ಹಿನ್ನೆಲೆಯಲ್ಲಿ ಬಾಲಕನಿಗೆ ನಗರದ ಸಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದ್ದು, ಬುಧವಾರ ಸಂಜೆ ಶಾಸಕ ಎ.ಆರ್. ಕೃಷ್ಣಮೂರ್ತಿ ಭೇಟಿ ನೀಡಿ, ಗಾಯಗೊಂಡ ಬಾಲಕ ಹರ್ಷಿತ್, ಅವನ ತಂದೆ ಶಿವಕುಮಾರ್ ಹಾಗೂ ತಾಯಿ ಜೊತೆ ಮಾತನಾಡಿ, ನಾವು ನಿಮ್ಮ ಜೊತೆ ಇದ್ದೇವೆ ಎಂದು ಧೈರ್ಯ ತುಂಬಿದ್ದಾರೆ. ನಂತರ ಅರಣ್ಯ ಅಧಿಕಾರಿಗಳು ಹಾಗೂ ವೈದ್ಯರೊಂದಿಗೆ ಮಾತನಾಡಿ, ಅರಣ್ಯ ಇಲಾಖೆಯಿಂದ ಪರಿಹಾರ ಹಾಗೂ ಚಿಕಿತ್ಸೆಯನ್ನು ಸೂಕ್ತವಾಗಿ ನೀಡುವಂತೆ ಸೂಚನೆ ನೀಡಿದರು.

ಜು.31, ಸೇವಾ ಕಾರ್ಯಗಳೊಂದಿಗೆ ಧ್ರುವನಾರಾಯಣ್ ಹುಟ್ಟುಹಬ್ಬ

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ



ಚಾಮರಾಜನಗರ, ಜು.27– ಮಾಜಿ ಸಂಸದ ದಿ.ಆರ್.ಧ್ರುವನಾರಾಯಣ್ ಅವರ 62ನೇ ಹುಟ್ಟುಹಬ್ಬ ಅಂಗವಾಗಿ ಜು.31ರಂದು ವಿವಿಧ ಸೇವಾ ಕಾರ್ಯ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಧ್ರುವನಾರಾಯಣ್ ಅಭಿಮಾನಿ ಬಳಗದಿಂದ ಪ್ರತಿವರ್ಷ ಸರಳವಾಗಿ ಅವರ ಹುಟ್ಟುಹಬ್ಬ ಆಚರಿಸಿಕೊಂಡು ಬರಲಾಗಿದೆ. ಈ ಬಾರಿ ಅವರು ಇಲ್ಲದಿರುವುದು ನಮ್ಮೆಲ್ಲರಿಗೂ ಬೇಸರ ತಂದಿದೆ. ಆದರೂ ಅವರ ಹುಟ್ಟುಹಬ್ಬದ ಅಂಗವಾಗಿ ನಗರದ ರೋಟರಿ ಭವನದಲ್ಲಿ ಜು.31ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 2 ಗಂಟೆವರೆಗೆ ಬೃಹತ್ ಉಚಿತ ಕಣ್ಣಿನ ತಪಾಸಣಾ ಶಿಬಿರ ಹಾಗೂ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಆಯೋಜಿಸಲಾಗಿದೆ ಎಂದರು.

ಅಂದು ಯಳಂದೂರು ತಾಲೂಕಿನ ಬಿಳಿಗಿರಿರಂಗನಬೆಟ್ಟದ ಶಾಲಾ ಮಕ್ಕಳಿಗೆ ಬ್ಯಾಗ್, ಸ್ವೆಟರ್, ಗುಂಡ್ಲುಪೇಟೆ ಸರ್ಕಾರಿ ಆಸ್ಪತ್ರೆ ರೋಗಿಗಳಿಗೆ ಹಣ್ಣು ಹಂಪಲು ವಿತರಣೆ, ಕೊಳ್ಳೇಗಾಲದಲ್ಲಿ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ ಎಂದು ಹೇಳಿದರು.

ಆರ್.ಧ್ರುವನಾರಾಯಣ್ ಅಭಿಮಾನಿ ಬಳಗದ ಅಧ್ಯಕ್ಷ ಕಾಗಲವಾಡಿ ಚಂದ್ರು ಮಾತನಾಡಿ, ಮಾಜಿ ಸಂಸದ ಆರ್. ಧ್ರುವನಾರಾಯಣ್ ಹುಟ್ಟುಹಬ್ಬದ ಪ್ರಯುಕ್ತ ಅವರ ಅಭಿಮಾನಿ ಬಳಗ ಮತ್ತು ಚೇತನ ಕಲಾವಾಹಿನಿ ವತಿಯಿಂದ ರೋಟರಿ ಡಯಾಲಿಸಿಸ್ ಕೇಂದ್ರಕ್ಕೆ ಆ ದಿನ ಬರುವ ಎಲ್ಲಾ ರೋಗಿಗಳ ವೆಚ್ಚ ಭರಿಸಲಾಗುತ್ತದೆ. ಮೂಡಲಧ್ವನಿ ವೃದ್ಧಾ ಶ್ರಮದಲ್ಲಿ ಮಧ್ಯಾಹ್ನದ ಊಟದ ವ್ಯವಸ್ಥೆ, ಉತ್ತುವಳ್ಳಿ ಸರ್ಕಾರಿ ಶಾಲಾ ಮಕ್ಕಳಿಗೆ ನೋಟ್ ಬುಕ್ ವಿತರಣೆ, ನಗರದ 9ನೇ ವಾರ್ಡ್ ಉರ್ದು ಶಾಲಾ ಮಕ್ಕಳಿಗೆ ನೋಟ್‌ಬುಕ್ ವಿತರಣೆ, ಭೋಗಾಪುರ, ಕೆ.ಮೂಕಳ್ಳಿ, ರಾಮಸಮುದ್ರ ಶಾಲೆಗೆ ತಟ್ಟೆ, ಲೋಟ ವಿತರಣೆ, ಮಂಗಲ ಹೊಸೂರು ಶಾಲೆಗೆ ಟಿವಿ, ಕರಡಿಮೋಳೆ ಸರ್ಕಾರಿ ಶಾಲೆಗೆ ನಲಿ–ಕಲಿ ಮಕ್ಕಳಿಗೆ ಪೀಠೋಪಕರಣ ವಿತರಣೆ, 62 ಮಂದಿ ಸೋಬಾನ ಕಲಾವಿದರಿಗೆ ಸಮವಸ್ತ್ರ ವಿತರಿಸಲಾ ಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಜಿಪಂ ಮಾಜಿ ಸದಸ್ಯ ಕೆ.ಪಿ.ಸದಾಶಿವಮೂರ್ತಿ, ಕನಿಷ್ಠ ವೇತನ ಸಲಹಾ ಸಮಿತಿ ಮಂಡಳಿ ಮಾಜಿ ಅಧ್ಯಕ್ಷ ಉಮೇಶ್, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಚಿಕ್ಕಮಹದೇವು, ನಸ್ರುಲ್ಲಾ ಖಾನ್, ಆರ್.ಧ್ರುವನಾರಾಯಣ್ ಅಭಿಮಾನಿ ಬಳಗದ ಪ್ರಧಾನ ಕಾರ್ಯದರ್ಶಿ ಎಲ್‌ಐಸಿ ನಾಗನಾಯಕ ಹಾಜರಿದ್ದರು.

ಮೈಸೂರು ಮಿತ್ರ

ಶುಕ್ರವಾರ 28 ಜುಲೈ 2023

303ನೇ ಶಿವಾನುಭವ ದಾಸೋಹ ಉಪನ್ಯಾಸ

ಮೈಸೂರು, ಜು. 27– ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ಅಶ್ರಯದಲ್ಲಿ ಜೆಎಸ್‌ಎಸ್ ಬಡಾವಣೆ, 1ನೇ ಹಂತ, 4ನೇ ಪ್ರಾಕ್‌ನಲ್ಲಿರುವ ಆಶೀರ್ವಾದ ನಿಲಯದಲ್ಲಿ ಜು. 29 ರಂದು ಸಂಜೆ 6ಕ್ಕೆ ನಡೆಯುವ ಶಿವಾನುಭವ ದಾಸೋಹ ಮಾಲಿಕೆಯ 303ನೇ ಕಾರ್ಯಕ್ರಮದಲ್ಲಿ ವಿಶ್ರಾಂತ ಪ್ರಾಧ್ಯಾಪಕ ಡಾ. ಕೆ. ಅನಂತರಾಮು ಅವರು 'ಶೂನ್ಯ ಸಂಪಾದನೆ' ವಿಷಯ ಕುರಿತು ಉಪನ್ಯಾಸ ನೀಡಲಿದ್ದಾರೆ. ಜಿಲ್ಲಾ ಮತ್ತು ನಗರ ಕೇಂದ್ರ ಗ್ರಂಥಾಲಯ ಉಪನಿರ್ದೇಶಕರಾದ ಬಿ. ಮಂಜುನಾಥ್ ಅಧ್ಯಕ್ಷತೆ ವಹಿಸಲಿದ್ದಾರೆ. ಅಕ್ಕಮಹಾದೇವಿ ಮಹಿಳಾ ಬಳಗದಿಂದ ಭಜನೆ ನಡೆಯಲಿದೆ.

ಒಂದನೇ ಪುಟದಿಂದ

ಸಚಿವರ್‍ಯಾರೂ ಸ್ಪಂದಿಸುತ್ತಿಲ್ಲ

ಸ್ಪಂದಿಸಬೇಕು. ಅಧಿಕಾರಕ್ಕೆ ಬಂದ ಎರಡು ತಿಂಗಳಲ್ಲೇ ಕೆಲವು ಸಚಿವರ ವರ್ತನೆ ಹೇಳತೀರದು. ಅದನ್ನು ಬಿಡಿಸಿ ಹೇಳಲು ಹೋದರೆ, ಇಲ್ಲಿಯ ವಾತಾವರಣವೇ ಕೆಡುತ್ತದೆ. ಮುಂದೆ ನಮಗೆ ಲೋಕಸಭೆ, ಜಿಲ್ಲಾ ಪಂಚಾಯ್ತಿ ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆ ಇದೆ. ಅವುಗಳನ್ನು ಎದುರಿಸುವುದಾದರೂ ಹೇಗೆ? ನೀಡಿದ ಗ್ಯಾರಂಟಿಗಳನ್ನು ಮುಖ್ಯಮಂತ್ರಿ ಅನುಷ್ಠಾನಗೊಳಿಸುತ್ತಿರುವುದಕ್ಕೆ ಅಭಿನಂದಿಸುತ್ತೇವೆ. ಆದರೆ, ಕ್ಷೇತ್ರದ ಅಭಿವೃದ್ಧಿಯೂ ಅನಿವಾರ್ಯವಲ್ಲವೆ, ತಕ್ಷಣವೇ ಅನುದಾನ ನೀಡಿ ಎಂದು ಮನವಿ ಮಾಡಿದ್ದಾರೆ. ಕೆಲವರು ಸಚಿವರ ಹೆಸರು ಪ್ರಸ್ತಾಪಿಸದೆ, ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಬಳಿ ಆರೋಪ ಮಾಡಿದ್ದಾರೆ. ಇದರ ನಡುವೆಯೇ ವಿಧಾನಪರಿಷತ್ತಿನ ಸದಸ್ಯ ಹಾಗೂ ಹಿರಿಯ ನಾಯಕ ಬಿ.ಕೆ.ಹರಿಪ್ರಸಾದ್ ಹೇಳಿಕೆ, ಬಿ.ಆರ್.ಪಾಟೀಲ್ ಬರೆದ ಪತ್ರದ ಬಗ್ಗೆಯೂ ಗಂಭೀರ ಚರ್ಚೆ ನಡೆಯಿತು.

ಸುಳ್ಳನ್ನು ಸತ್ಯ ಎನ್ನುವಂತೆ ಬಿಂಬಿಸ್ತಾರೆ...

ಅಧಿವೇಶನವನ್ನೂ ಕರೆಯಬೇಕಿತ್ತು. ಹೊಸ ಶಾಸಕರಿಗೂ ತಮ್ಮ ಅಭಿಪ್ರಾಯ, ನಿಲುವನ್ನು ವ್ಯಕ್ತಪಡಿಸಲು ಅವಕಾಶ ಆಗಬೇಕು ಎನ್ನುವ ಕಾರಣದಿಂದ ಮೂರು ವಾರ ಮೊದಲ ಅಧಿವೇಶನವನ್ನು ನಡೆಸಿದ್ದು ಎಂದರು. ಈ ಆಯ-ವ್ಯಯ ಅತ್ಯಂತ ಮಹತ್ವದ್ದಾಗಿತ್ತು. ಐದು ಗ್ಯಾರಂಟಿಗಳನ್ನು ಜಾರಿ ಮಾಡಲು 58 ಸಾವಿರ ಕೋಟಿ ರೂಪಾಯಿ ಬೇಕು ಎಂದು ಅಂದಾಜಿಸಲಾಗಿತ್ತು. ಹೀಗಾಗಿ ಈ ಆಯವ್ಯಯವನ್ನು ಅತ್ಯಂತ ಎಚ್ಚರಿಕೆಯಿಂದ ರೂಪಿಸುವುದಕ್ಕಾಗಿ, ಜತೆಗೆ ಐದು ಗ್ಯಾರಂಟಿಗಳಿಗೆ ಹಣ ಮೀಸಲಿಡುವ ಅಗತ್ಯವೂ ಇತ್ತು. ಅದ್ದರಿಂದ ನಾನೇ ಸ್ವತಃ ಬಜೆಟ್ ಸಿದ್ಧತೆಗೆ ಕೂರುವುದು ಅನಿವಾರ್ಯವಾಗಿತ್ತು. ಈ ಎಲ್ಲಾ ಕಾರಣಗಳಿಂದ ನಾನು ಇತರೆ ಸಂಗತಿಗಳ ಕಡೆಗೆ ಗಮನ ಕೊಡಲು ಸಾಧ್ಯ ಆಗಲಿಲ್ಲ ಎಂದರು.

ಅಧಿವೇಶನದ ನಡುವೆ ರಾಷ್ಟ್ರ ಮಟ್ಟದ ವಿರೋಧ ಪಕ್ಷಗಳ ನಾಯಕರ ಸಭೆಯನ್ನು ನಡೆಸಿದೆವು. ಈ ಸಭೆ ಮುಗಿಯುತ್ತಿದ್ದಂತೆ ನಮ್ಮ ವರಿಷ್ಠರು ಶಾಸಕರು ಮತ್ತು ಸಚಿವರ ಜತೆ ಸಭೆ ನಡೆಸಲು ತೀರ್ಮಾನಿಸಿದ್ದರು. ಈ ಎರಡೂ ಕಾರಣಗಳಿಂದ ಶಾಸಕಾಂಗ ಸಭೆ ಕರೆಯುವುದು ತಡವಾಗಿದೆ ಎಂದರು. ಬಿಜೆಪಿಯ ದುರಾಡಳಿತ, ಬೆಲೆ ಏರಿಕೆ, ಹಣದುಬ್ಬರದಿಂದ ನಾಡಿನ ಜನತೆ ಹೈರಾಣಾಗಿ ಅವರ ಬದುಕು ದುಸ್ತರವಾಗಿತ್ತು. ಹೀಗಾಗಿ ಐದು ಗ್ಯಾರಂಟಿಗಳ ಮೂಲಕ ನಾಡಿನ ಜನತೆಯ ಸಂಕಷ್ಟಗಳಿಗೆ ಸ್ಪಂದಿಸಲು ನಾವು ಮುಂದಾದೆವು. ಇಡಿ ದೇಶದಲ್ಲಿ ಇಷ್ಟೊಂದು ದೊಡ್ಡ ಮಟ್ಟದ, ದೊಡ್ಡ ಮೊತ್ತದ ಜನ ಸ್ಪಂದನೆಯ ಯೋಜನೆಗಳನ್ನು ಜಾರಿಗೊಳಿಸಿದ್ದು ನಮ್ಮ ಕಾಂಗ್ರೆಸ್ ಸರ್ಕಾರ. ನಮ್ಮ ಗ್ಯಾರಂಟಿ ಯೋಜನೆಗಳನ್ನು ನಮ್ಮ ನಾಡಿನ ಶೇ.97ಕ್ಕೂ ಹೆಚ್ಚು ಮಂದಿ ಸ್ವಾಗತಿಸಿ, ಸಂಭ್ರಮಿಸಿದ್ದಾರೆ. ಸಮಾಧಾನಪಟ್ಟಿದ್ದಾರೆ. ಈ ಬಗ್ಗೆ ಮಾಧ್ಯಮಗಳಲ್ಲೆಲ್ಲಾ ವರದಿ ಮಾಡಿವೆ. ಇದು ಪ್ರತಿಯೊಬ್ಬ ಕಾಂಗ್ರೆಸ್ ಶಾಸಕರು, ಕಾರ್ಯಕರ್ತರು, ಬೆಂಬಲಿಗರು ಮತ್ತು ಅಭಿಮಾನಿಗಳು ಹೆಮ್ಮೆ ಪಡುವ ಸಂದರ್ಭ.

ನಮ್ಮ ಐದು ಗ್ಯಾರಂಟಿಗಳು ಎಲ್ಲಾ ಜಾತಿ, ಧರ್ಮ, ವರ್ಗಗಳ ಬದುಕಿಗೂ ಸ್ಪಂದಿಸಿವೆ. ಇದು ಬಿಜೆಪಿ ಪರಿವಾರಕ್ಕೆ ನಡುಕ ಹುಟ್ಟಿಸಿದೆ. ಹೀಗಾಗಿ ನಾಡಿನ ಜನರ ಗಮನವನ್ನು ಬೇರೆಡೆಗೆ ಸೆಳೆಯಲು ವಿಪರೀತ ಸುಳ್ಳುಗಳನ್ನು, ನಕಲಿ ವಿಡಿಯೋಗಳನ್ನು ಸೃಷ್ಟಿಸುತ್ತಾರೆ. ಶಾಸಕರೆಲ್ಲರೂ ಹೆಸರಿಗೆ ನಕಲಿ ಪತ್ರ ಸೃಷ್ಟಿಸಿ, ಸುದ್ದಿ ಮಾಡಿದ್ದು ಈ ಕುತಂತ್ರದ ಭಾಗವೇ ಆಗಿದೆ. ಈಗ ಶಾಸಕರೇ ಆ ಪತ್ರ ತಮ್ಮದಲ್ಲ ಎಂದು ಸ್ಪಷ್ಟನೆ ನೀಡಿದ್ದಾಗಿದೆ. ವಿಪರ್ಯಾಸ ಅಂದರೆ ಸತ್ಯ ಏನು ಎಂದು ಗೊತ್ತಾಗುವುದರೊಳಗೆ ಅವರು ಸುಳ್ಳನ್ನು ವ್ಯಾಪಕವಾಗಿ ಹರಡಿದ್ದಾರೆ.

ಕರ್ನಾಟಕ ರಾಜ್ಯದ ಜನತೆ ಈ ವಿಧಾನಸಭಾ ಚುನಾವಣೆಯಲ್ಲಿ ನೀಡಿರುವ ತೀರ್ಪು ಇಡಿ ದೇಶದ ರಾಜಕಾರಣಕ್ಕೆ ಗೇಮ್ ಚೇಂಜರ್ ಎನ್ನುವ ವಿಶ್ಲೇಷಣೆಗಳು ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಾಧ್ಯಮಗಳಲ್ಲಿ ವ್ಯಕ್ತವಾಗಿದೆ. ಹೀಗಾಗಿ ಸುಳ್ಳಿನ ಸರಮಾಲೆಗಳ ಮೂಲಕ ಅವರು ಐದು ಗ್ಯಾರಂಟಿಗಳ ಯಶಸ್ಸು ಮತ್ತು ಜನರ ಗಮನವನ್ನು ಬೇರೆಡೆಗೆ ಸೆಳೆಯುತ್ತಾರೆ. ಈ ಬಗ್ಗೆ ಪ್ರತಿಯೊಬ್ಬ ಶಾಸಕರೂ ಎಚ್ಚರದ ಸ್ಥಿತಿಯಲ್ಲಿದ್ದು ಅವರ ಸುಳ್ಳುಗಳಿಗೆ ನೀವೂ ದಾಳ ಆಗಬೇಡಿ, ಎಂದು ಎಚ್ಚರಿಸಿದರು. ಆಡಳಿತಾತ್ಮಕ ಒತ್ತಡಗಳ ನಡುವೆಯೂ ನಾನು ತಿಂಗಳಿಗೊಮ್ಮೆ ಜಿಲ್ಲಾವಾರು ಶಾಸಕರ ಸಭೆ ಕರೆಯುತ್ತೇನೆ. ಕ್ಷೇತ್ರದ ಕುಂದು ಕೊರತೆಗಳ ಬಗ್ಗೆ ಚರ್ಚಿಸುತ್ತೇನೆ. ಸರ್ಕಾರದಿಂದ ತುರ್ತಾಗಿ ಆಗಬೇಕಿರುವ ಕೆಲಸಗಳು ಸಮರ್ಪಕವಾಗಿ ಆಗುವಂತೆ ನೋಡಿಕೊಳ್ಳುತ್ತೇನೆ. ಏನೇ ಅಸಮಾಧಾನಗಳಿದ್ದರೂ ನೇರವಾಗಿ ನನಗೆ ಹೇಳಿ, ಪಕ್ಷದ ವೇದಿಕೆಯಲ್ಲಿ ಚರ್ಚಿಸಿ ಎಂದು ತಿಳಿಹೇಳಿದರು.

ಕೊಡವ/ಕೊಡವರು ಬದಲಾವಣೆ

ಸಮಿತಿ ರಚನೆ ಮಾಡಲಾಗಿದೆ ಎಂದರು. ಶಿವಾಜಿನಗರದ ಅಟಲ್ ವೈದ್ಯಕೀಯ ಕಾಲೇಜಿನಲ್ಲಿ ಚರಕ ಸೂಪರ್ ಅಸ್ಪತ್ರೆ ನಿರ್ಮಾಣ ಮಾಡಲು ಸಮ್ಮತಿಸಲಾಗಿದೆ. 22.70 ಕೋಟಿ ರೂ. ಅಂದಾಜು ಮೊತ್ತದಲ್ಲಿ ಆಸ್ಪತ್ರೆ ನಿರ್ಮಾಣ ಮಾಡಲಾಗುವುದು. ವಿಕ್ಟೋರಿಯಾ ಆಸ್ಪತ್ರೆ ಆವರಣದಲ್ಲಿ 26 ಕೋಟಿ ರೂಪಾಯಿ ಅಂದಾಜು ಮೊತ್ತದಲ್ಲಿ ನೆಫ್ರೋ ಯೂರಾಲಜಿಯಲ್ಲಿ ಅನೆಕ್ಸ್ ಕಟ್ಟಡ ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ ಎಂದು ಅವರು ತಿಳಿಸಿದರು.

67 ಕೈದಿಗಳ ಬಿಡುಗಡೆಗೆ ಒಪ್ಪಿಗೆ: ಭಾರತ ಸರ್ಕಾರದ ಮಾರ್ಗಸೂಚಿಯ ಪ್ರಕಾರ ಸನ್ನಡತೆಯ ಆಧಾರದಲ್ಲಿ 67 ಕೈದಿಗಳ ಬಿಡುಗಡೆಗೆ ನಿರ್ಣಯ ಕೈಗೊಳ್ಳಲಾಗಿದೆ. ಸ್ವಾತಂತ್ರ್ಯ ದಿನಾಚರಣೆಯಂದು ಕೈದಿಗಳನ್ನು ಬಿಡುಗಡೆ ಮಾಡಲಾಗುವುದು ಎಂದು ಸಚಿವರು ತಿಳಿಸಿದರು. ಬೆಂಗಳೂರು ಸೆಂಟ್ರಲ್ ಜೈಲ್‌ನಿಂದ 24, ಮೈಸೂರಿನಲ್ಲಿ 8, ಬೆಳಗಾವಿ 2, ಕಲಬುರ್ಗಿ 5, ಶಿವಮೊಗ್ಗ 6, ಬಳ್ಳಾರಿ 8, ಧಾರವಾಡ 2 ಮಂದಿ ಕೈದಿಗಳ ಬಿಡುಗಡೆಗೆ ನಿರ್ಣಯ ಕೈಗೊಳ್ಳಲಾಗಿದೆ ಎಂದರು.

ಸಿಎನ್‌ಸಿ ಹೋರಾಟದ ಫಲ: ಹಿಂದುಳಿದ ವರ್ಗದ 3ಎ ಪಟ್ಟಿಯಲ್ಲಿರುವ ಕೊಡಗರು ಎಂಬ ಪದವನ್ನು ಕೊಡವ ಅಥವಾ ಕೊಡವರು ಎಂದು ಬದಲಾಯಿಸಬೇಕೆಂದು ಕೊಡವ ನ್ಯಾಷನಲ್ ಕೌನ್ಸಿಲ್ ಅಧ್ಯಕ್ಷ ಎನ್.ಯು.ನಾಚಪ್ಪ ನೇತೃತ್ವದಲ್ಲಿ ಕೆಲ ವರ್ಷಗಳಿಂದ ಸತತವಾಗಿ ಹೋರಾಟ ನಡೆಸಲಾಗುತ್ತಿತ್ತು. ರಾಜ್ಯದಲ್ಲಿ ಸರ್ಕಾರ ಬದಲಾವಣೆಯಾದ ನಂತರ ನಾಚಪ್ಪ ನೇತೃತ್ವದ ಸಿಎನ್‌ಸಿ ನಿಯೋಗವು ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ಅವರೊಡಗೂಡಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಈ ಸಂಬಂಧ ಮನವಿ ಸಲ್ಲಿಸಿತ್ತು. ಸಿಎನ್‌ಸಿ ಮನವಿಗೆ ಮುಖ್ಯಮಂತ್ರಿಗಳು ಸ್ಪಂದಿಸಿ ಇಂದು ನಡೆದ ಸಂಪುಟ ಸಭೆಯಲ್ಲಿ ನಿರ್ಧಾರ ಕೈಗೊಂಡಿದ್ದಾರೆ.

6.05 ಲಕ್ಷ ನಗದಿದ್ದ ಬ್ಯಾಗ್ ದರೋಡೆ

ಸಹೋದರ ಟಿ.ಚೇತನ್ ಪ್ರಸಾದ್ ಮಾಲೀಕತ್ವದ ದಸರಗುಪ್ಪೆ ಎಸ್‌ಎಸ್‌ಸಿ ಕಂಪನಿಯಲ್ಲಿ ಬಿಲ್ ಕಲೆಕ್ಟರ್ ಆಗಿರುವ ಕೆ.ತುಳಸೀದಾಸ್ ಅವರು, ಕಂಪನಿಯಲ್ಲಿ ಸಂಗ್ರಹವಾದ ಹಣವನ್ನು ಪ್ರತೀ ದಿನ ಬೆಳಗ್ಗೆ 10ರಿಂದ 10.15ರ ವೇಳೆಗೆ ಬ್ಯಾಂಕ್‌ಗೆ ಜಮೆ ಮಾಡುವುದು ವಾಡಿಕೆ. ಅದರಂತೆ ಜು.25ರಂದು ಮಧ್ಯಾಹ್ನ 1.30ರವರೆಗೆ ಸಂಗ್ರಹವಾಗಿದ್ದ ಹಣದಲ್ಲಿ 38.40 ಲಕ್ಷ ರೂ.ಗಳನ್ನು ಒಂದು ಬ್ಯಾಗ್‌ನಲ್ಲಿ ಹಾಗೂ 6,05,797 ರೂ. ನಗದು ಹಾಗೂ ಗ್ರಾಹಕರು ನೀಡಿದ್ದ 7 ಚೆಕ್‌ಗಳನ್ನು ಮತ್ತೊಂದು ಬ್ಯಾಗ್‌ನಲ್ಲಿರಿಸಿ ಕೊಂಡು ಹಣದ ರಕ್ಷಣೆ ಕಾರಣದಿಂದಾಗಿ ಟಾಟಾ ಏಸ್ (ಕೆಎ 09 ಎಎ 1534) ವಾಹನದಲ್ಲಿ ಚಾಲಕ ಅರವಿಂದ್ ಜೊತೆ ಬ್ಯಾಂಕ್‌ಗೆ ಹೋಗಿದ್ದಾರೆ. ಬ್ಯಾಂಕ್ ಆವರಣ ದೊಳಗೆ ವಾಹನ ಕೊಂಡೊಯ್ದು ನಂತರ ಹಣವನ್ನು ಬ್ಯಾಂಕ್‌ಗೆ ತೆಗೆದುಕೊಂಡು ಹೋಗುವುದು ನಿತ್ಯ ಪರಿಪಾಠವಾದರೂ ಬ್ಯಾಂಕ್ ಆವರಣದ ಪಾರ್ಕಿಂಗ್ ಸ್ಥಳದಲ್ಲಿ ಕಾರೊಂದನ್ನು ನಿಲ್ಲಿಸಿದ್ದ ಕಾರಣ ಬ್ಯಾಂಕ್ ಮುಂಭಾಗವೇ ಟಾಟಾ ಏಸ್ ಅನ್ನು ಚಾಲಕ ಅರವಿಂದ್ ಹೊರಗಡೆ ನಿಲ್ಲಿಸಿದ್ದಾನೆ.

ತುಳಸೀದಾಸ್ ಅವರು ಹಣವಿದ್ದ ಎರಡು ಬ್ಯಾಗ್‌ಗಳನ್ನು ಹಿಡಿದು ವಾಹನ ದಿಂದ ಕೆಳಗಿಳಿಯುತ್ತಿದ್ದಂತೆಯೇ ಹೊಂಚು ಹಾಕಿ ನಿಂತಿದ್ದ ದುಷ್ಕರ್ಮಿಯೋರ್ವ ಇವರ ಬಳಿಗೆ ಬಂದು ಕಣ್ಣಿಗೆ ಖಾರದ ಪುಡಿ ಎರಚಿ 6.05 ಲಕ್ಷ ನಗದು ಹಾಗೂ ಚೆಕ್‌ಗಳಿದ್ದ ಬ್ಯಾಗ್ ಅನ್ನು ಕಿತ್ತುಕೊಂಡು ಸ್ವಲ್ಪ ದೂರದಲ್ಲಿ ಕೆಟಿಎಂ ಡ್ಯೂಕ್ ಬೈಕ್ ಅನ್ನು ಸ್ಟಾರ್ಟ್ ಮಾಡಿ ನಿಲ್ಲಿಸಿದ್ದವನ ಹಿಂಬದಿಯಲ್ಲಿ ಕುಳಿತು ಕ್ಷಣ ಮಾತ್ರದಲ್ಲಿ ರಿಂಗ್ ರೋಡ್‌ನತ್ತ ಪರಾರಿಯಾಗಿದ್ದಾನೆ. ತುಳಸೀದಾಸ್ ಅವರು ಕಡಿಮೆ ಮೊತ್ತದ ಹಣವಿದ್ದ ಬ್ಯಾಗ್ ಅನ್ನು ಬಲಗೈಯ್ಯಲ್ಲಿ ಹಿಡಿದಿದ್ದರು. ವಾಹನದಿಂದ ಅವರು ಇಳಿದಾಗ ದೊಡ್ಡ ಮೊತ್ತದ ಹಣವಿದ್ದ ಬ್ಯಾಗ್ ಎಡಗೈಯ್ಯಲ್ಲಿದ್ದು, ಅವರ ಎಡಗೈ ವಾಹನದ ಕಡೆ ಇದ್ದ ಪರಿಣಾಮ ದುಷ್ಕರ್ಮಿ ಬಲಗೈಯ್ಯಲ್ಲಿದ್ದ ಬ್ಯಾಗ್ ಅನ್ನು ಕಿತ್ತುಕೊಂಡು ಪರಾರಿಯಾಗಿದ್ದಾನೆ. ಹೀಗಾಗಿ ದೊಡ್ಡ ಮೊತ್ತದ ಹಣ ಉಳಿದಂತಾಗಿದೆ.

ತುಳಸೀದಾಸ್ ಅವರು ಪ್ರತೀ ದಿನ ಇದೇ ಸಮಯಕ್ಕೆ ಬ್ಯಾಂಕ್‌ಗೆ ದೊಡ್ಡ ಮೊತ್ತದ ಹಣ ಜಮೆ ಮಾಡುತ್ತಾರೆ ಎಂಬುದರ ಬಗ್ಗೆ ಮಾಹಿತಿ ತಿಳಿದಿರುವವರೇ ಈ ಕೃತ್ಯ ಎಸಗಿರಬಹುದು ಎಂದು ಶಂಕಿಸ ಲಾಗಿದೆ. ಇದಕ್ಕೆ ಪೂರಕವಾಗಿ ಬ್ಯಾಂಕ್ ಬಳಿ ನಿಂತಿದ್ದ ದುಷ್ಕರ್ಮಿ ಬ್ಯಾಂಕ್ ಮುಂಭಾಗ ಟಾಟಾ ಏಸ್ ನಿಲುಗಡೆಯಾಗಿ ತುಳಸೀದಾಸ್ ಅವರು ಬ್ಯಾಗ್ ಸಮೇತ ಕೆಳಗಿಳಿಯುತ್ತಿದ್ದಂತೆಯೇ ಕ್ಷಣ ಮಾತ್ರದಲ್ಲಿ ಅವರ ಬಳಿ ಓಡಿ ಬಂದು ಬ್ಯಾಗ್ ಕಿತ್ತುಕೊಂಡಿದ್ದಾನೆ. ಅಷ್ಟರಲ್ಲಾಗಲೇ ಆತ ಪರಾರಿಯಾದ ಬೈಕ್ ಅನ್ನು ಮತ್ತೋರ್ವ ದುಷ್ಕರ್ಮಿ ಸ್ಟಾರ್ಟ್ ಮಾಡಿ ಸಿದ್ಧವಾಗಿಟ್ಟು ಕೊಂಡಿದ್ದಾನೆ ಎಂಬುದನ್ನು ಉಲ್ಲೇಖಿಸಬಹುದಾಗಿದೆ. ವಿಷಯ ತಿಳಿಯುತ್ತಿದ್ದಂತೆಯೇ ವಿಜಯನಗರ ಉಪ ವಿಭಾಗದ ಎಸಿಪಿ ಗಜೇಂದ್ರ ಪ್ರಸಾದ್, ಹೆಬ್ಬಾಳ್ ಠಾಣೆಯ ಇನ್ಸ್‌ಪೆಕ್ಟರ್ ಪ್ರಸಾದ್ ಹಾಗೂ ಸಿಬ್ಬಂದಿ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ದರಲ್ಲದೇ ಬ್ಯಾಂಕ್‌ನ ಸಿಸಿ ಕ್ಯಾಮರಾ ಫುಟೇಜ್‌ಗಳನ್ನು ಸಂಗ್ರಹಿಸಿ ತನಿಖೆ ಆರಂಭಿಸಿದ್ದಾರೆ. ಈ ಸಂಬಂಧ ಹೆಬ್ಬಾಳ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಹಾರಾಣಿ ಪಿಯು ಕಾಲೇಜಿಗೆ ಅಗತ್ಯ ಸೌಲಭ್ಯ ಕಲ್ಪಿಸುವೆ

● ಶಾಸಕ ಹರೀಶ್‌ಗೌಡ ಭರವಸೆ ● ಸಾಂಸ್ಕೃತಿಕ, ಕ್ರೀಡಾ ಚಟುವಟಿಕೆಗಳ ಉದ್ಘಾಟನೆ, 2022-23ನೇ ಸಾಲಿನ ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ

ಮೈಸೂರು,ಜು.27(ಪಿಎಂ)– ಮಹಾರಾಣಿ ಸರ್ಕಾರಿ ಪದವಿಪೂರ್ವ ಕಾಲೇಜಿಗೆ ಅಗತ್ಯವಿರುವ ಎಲ್ಲಾ ಸೌಲಭ್ಯಗಳನ್ನು ಸರ್ಕಾರದಿಂದ ದೊರಕಿಸಿಕೊಡುವುದಾಗಿ ಕಾಲೇಜಿನ ಅಭಿವೃದ್ಧಿ ಸಮಿತಿ ಅಧ್ಯಕ್ಷರೂ ಆದ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಭರವಸೆ ನೀಡಿದರು.

ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಕಾಲೇಜಿನ ಕೆಂಪನಂಜಮ್ಮಣ್ಣಿ ವೇದಿಕೆಯಲ್ಲಿ ಗುರುವಾರ ಹಮ್ಮಿಕೊಂಡಿದ್ದ 2023–24ನೇ ಶೈಕ್ಷಣಿಕ ಸಾಲಿನ ಸಾಂಸ್ಕೃತಿಕ, ಕ್ರೀಡಾ ಚಟುವಟಿಕೆಗಳ ಉದ್ಘಾಟನೆ ಹಾಗೂ 2022–23ನೇ ಸಾಲಿನಲ್ಲಿ ದ್ವಿತೀಯ ಪಿಯುಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ ಕಾಲೇಜಿನ ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಶಾಸಕನಾದ ನಂತರ ಇದೇ ಮೊದಲ ಬಾರಿಗೆ ಕಾಲೇಜಿಗೆ ಭೇಟಿ ನೀಡಿದ್ದೇನೆ. ಈ ಕಾಲೇಜಿನ ವಿದ್ಯಾರ್ಥಿನಿಯರು, ಬೋಧಕರು ಹಾಗೂ ಬೋಧಕೇತರ ಸಿಬ್ಬಂದಿ ಏನೇ ತೊಂದರೆಯಾದರೂ ನನ್ನ ಗಮನಕ್ಕೆ ತರಬಹುದು. ಸಮಸ್ಯೆ ಬಗೆಹರಿಸಲು ಶ್ರಮಿಸುವೆ ಎಂದು ಹೇಳಿದರು.


ಪ್ರಥಮ ಮತ್ತು ದ್ವಿತೀಯ ಪಿಯುಸಿ ಓದುತ್ತಿರುವ ನೀವು ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಇನ್ನು 6 ವರ್ಷ ಶ್ರದ್ಧೆಯಿಂದ ವಿದ್ಯಾಭ್ಯಾಸ ಮಾಡಬೇಕು. ಹೆಣ್ಣು ಮಕ್ಕಳಾದ ನೀವು ಮಾನಸಿಕವಾಗಿ ಪ್ರಬುದ್ಧರಾಗುವ ಸಮಯ ಇದು. ಹಾಗಾಗಿ ಹಿರಿಯರ ಮಾರ್ಗದರ್ಶನದಲ್ಲಿ ಮುಂದುವರೆಯಬೇಕು. ನಿಮ್ಮ ವ್ಯಾಸಂಗದ ಜೊತೆಗೆ ಸ್ಪರ್ಧಾತ್ಮಕ ಪರೀಕ್ಷೆಗಳ ಕಡೆಯೂ ಗಮನ ನೀಡುವುದನ್ನು ಈಗಿನಿಂದಲೇ ರೂಢಿಸಿಕೊಳ್ಳಬೇಕು. ಆ ಮೂಲಕ ನಿಮ್ಮ ಭವಿಷ್ಯ ರೂಪಿಸಿಕೊಂಡು ನಿಮ್ಮ ಅವಲಂಬಿತರಿಗೆ ನೆರವಾಗಬೇಕು ಎಂದು ಕಿವಿಮಾತು ಹೇಳಿದರು.

ಕೇವಲ ಪಠ್ಯಕ್ಕೆ ಸೀಮಿತಗೊಳ್ಳದೇ ನಗರ, ರಾಜ್ಯ ಹಾಗೂ ದೇಶ–ವಿದೇಶದ ವಿದ್ಯಮಾನದ ಬಗ್ಗೆಯೂ ಸಾಮಾನ್ಯ ಜ್ಞಾನ ಹೊಂದಬೇಕು. ಈ ಕಾಲೇಜಿನಲ್ಲಿ ಗ್ರಾಮೀಣ ಭಾಗದ ಹೆಣ್ಣು ಮಕ್ಕಳೇ ಹೆಚ್ಚಾಗಿ ವ್ಯಾಸಂಗ ಮಾಡುತ್ತಿದ್ದು, ಪೋಷಕರ ಪರಿಶ್ರಮ ಅರಿತು ಶಿಕ್ಷಣದಲ್ಲಿ ಸಾಧನೆ ಮಾಡಬೇಕು. ಖಾಸಗಿ ಕಾಲೇಜುಗಳೇ ಉತ್ತಮ ಎಂಬ ಭಾವನೆ ಯಾವುದೇ ಕಾರಣಕ್ಕೂ ಹೊಂದಬಾರದು. ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡಿದವರೇ ಇಂದು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ್ದಾರೆ ಎಂದರು.

ಈ ಕಾಲೇಜು ಸೇರಿದಂತೆ ಚಾಮರಾಜ ಕ್ಷೇತ್ರದ ವ್ಯಾಪ್ತಿಯಲ್ಲಿ 8 ಸರ್ಕಾರಿ ಪದವಿಪೂರ್ವ ಕಾಲೇಜುಗಳಿವೆ. ಹಿಂದಿನಿಂದಲೂ ಮೈಸೂರು ಶಿಕ್ಷಣಕ್ಕೆ ಹೆಸರುವಾಸಿಯಾಗಿದೆ. ಮೈಸೂರು ರಾಜಮನೆತನ ಇಲ್ಲಿನ ಶಿಕ್ಷಣ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದು, 105 ವರ್ಷಗಳ ಹಿಂದೆಯೇ ನಾಲ್ವಡಿ ಕೃಷ್ಣರಾಜ ಒಡೆಯರ್ ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪಿಸಿದರು. ನಾನು ಕೂಡ ಮೈಸೂರು ವಿವಿಯಲ್ಲಿ 16 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದೇನೆ ಎಂದು ನುಡಿದರು.

ಯಾವುದೇ ಸಬ್ಜೆಕ್ಟ್ ಆದರೂ ಆವಿಷ್ಕಾರಕ್ಕೆ ನೂರಾರು ವಿಚಾರಗಳು ಇರುತ್ತವೆ. ಈ ಬಗ್ಗೆ ವಿದ್ಯಾರ್ಥಿಗಳು ಗಮನ ನೀಡಬೇಕು. ಉನ್ನತ ಶಿಕ್ಷಣದಲ್ಲಿ ಯಾರದೋ ಒತ್ತಡಕ್ಕಾಗಿ ಇಷ್ಟವಿಲ್ಲದ ಸಬ್ಜೆಕ್ಟ್ ಆಯ್ಕೆ ಮಾಡಿಕೊಳ್ಳದೇ ನಿಮ್ಮ ಆಸಕ್ತಿಗೆ ಅನುಗುಣವಾಗಿ ಮುಂದುವರೆಯಿರಿ ಎಂದು ಸಲಹೆ ನೀಡಿದರು.

ಪಾಲಿಕೆ ಸದಸ್ಯೆ ಪ್ರಮೀಳಾ ಭರತ್, ಜಾನಪದ ತಜ್ಞ ವ.ನಂ.ಶಿವರಾಮು, ಕಾಲೇಜಿನ ಪ್ರಾಂಶುಪಾಲ ಪಿ.ಸೋಮಣ್ಣ, ಉಪಪ್ರಾಂಶುಪಾಲೆ (ಪ್ರೌಢಶಾಲಾ ವಿಭಾಗ) ತಿರುಮಲಾಂಬ, ಅಧ್ಯಾಪಕಿ ಡಾ.ಸಿ.ತೇಜೋವತಿ ಮತ್ತಿತರರು ಹಾಜರಿದ್ದರು.



ಮೈಸೂರಿನ ಮಹಾರಾಣಿ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಗುರುವಾರ 2022–23ನೇ ಸಾಲಿನಲ್ಲಿ ದ್ವಿತೀಯ ಪಿಯುಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ ಕಾಲೇಜಿನ ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ

2022–23ನೇ ಸಾಲಿನಲ್ಲಿ ದ್ವಿತೀಯ ಪಿಯುಸಿ ಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ ಕಾಲೇಜಿನ 116 ವಿದ್ಯಾರ್ಥಿನಿಯರಿಗೆ ನಗದು ಒಳಗೊಂಡಂತೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಸಾಂಕೇತಿಕವಾಗಿ ಹಲವು ವಿದ್ಯಾರ್ಥಿನಿಯರಿಗೆ ಶಾಸಕರು ಪ್ರತಿಭಾ ಪುರಸ್ಕಾರ ನೀಡಿದರು. 2022–23ನೇ ಸಾಲಿನಲ್ಲಿ ಕಾಲೇಜಿನ ಕಲಾ, ವಿಜ್ಞಾನ, ವಾಣಿಜ್ಯ ವಿಭಾಗಗಳಿಂದ ಒಟ್ಟು 982 ವಿದ್ಯಾರ್ಥಿನಿಯರು ದ್ವಿತೀಯ ಪಿಯುಸಿ ಪರೀಕ್ಷೆ ಬರೆದಿದ್ದು, ಈ ಪೈಕಿ 858 ವಿದ್ಯಾರ್ಥಿನಿಯರು ತೇರ್ಗಡೆ ಹೊಂದಿದ್ದಾರೆ. ಕಾಲೇಜಿನ ವಿಜ್ಞಾನ ವಿಭಾಗದಲ್ಲಿ ಶೇ.92, ವಾಣಿಜ್ಯ ವಿಭಾಗದಲ್ಲಿ ಶೇ.92 ಹಾಗೂ ಕಲಾ ವಿಭಾಗದಲ್ಲಿ ಶೇ.89ರಷ್ಟು ಫಲಿತಾಂಶ ಬಂದಿದೆ.

ಸಿಬಿಎಸ್‌ಸಿ ಪಠ್ಯಕ್ರಮದಲ್ಲಿ ವಿದ್ಯಾರ್ಥಿಗಳ ದಾಖಲಾತಿ ಪ್ರಮಾಣ ಹೆಚ್ಚಳ

ಮೈಸೂರು, ಜು.27(ಜಿಎ)–ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ಬಂದ ಬಳಿಕ ಸಿಬಿಎಸ್‌ಸಿ ಪಠ್ಯಕ್ರಮ ಆಧಾರಿತ ಶಾಲೆಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಪ್ರಮಾಣ ಹೆಚ್ಚಿದೆ. ಮಕ್ಕಳಿಗೆ ಅಗತ್ಯವಿರುವ ಕೌಶಲ್ಯವನ್ನು ವೃದ್ಧಿಸುವಲ್ಲಿ ಈ ನೀತಿ ಹೆಚ್ಚು ಪರಿಣಾಮಕಾರಿಯಾಗಿದೆ ಎಂದು ಕೇಂದ್ರೀಯ ವಿದ್ಯಾಲಯದ ಪ್ರಾಂಶುಪಾಲರಾದ ನೂತನ್ ಪೂಂಜ್ ತಿಳಿಸಿದರು.

ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಯಾಗಿ ಮೂರು ವರ್ಷ ಪೂರ್ಣಗೊಂಡ ಹಿನ್ನೆಲೆಯಲ್ಲಿ ಮೈಸೂರಿನ ರಾಘವೇಂದ್ರನಗರದ ಕೇಂದ್ರೀಯ ವಿದ್ಯಾಲಯದಲ್ಲಿ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಯಿಂದಾಗಿ ಮಕ್ಕಳಲ್ಲಿ ಕೌಶಲ್ಯತೆ ಬೆಳೆಸಲು ಸಹಕಾರಿಯಾಗಿದೆ ಎಂದರು.

ಎನ್‌ಇಪಿ ಜಾರಿಯಾದ ಪರಿಣಾಮ ಮಕ್ಕಳನ್ನು ಶಾಲೆಗೆ ದಾಖಲಾತಿ ಮಾಡಿಕೊಳ್ಳುವ ವಯಸ್ಸನ್ನು 6 ವರ್ಷಕ್ಕೆ ನಿಗದಿಪಡಿಸಲಾಗಿದೆ. 3 ತಿಂಗಳ ಶಾಲಾ ಸಿದ್ಧತೆ ಮಾದರಿಯನ್ನು ಸಿದ್ಧಪಡಿಸಿದ್ದು, ಇದು ಮಕ್ಕಳನ್ನು ಪೂರ್ವ ಸಾಕ್ಷರತೆ, ಪೂರ್ವ ಸಂಖ್ಯಾಶಾಸ್ತ್ರ ಅರಿವಿನ ಮತ್ತು ಸಾಮಾಜಿಕ ಕೌಶಲ್ಯವನ್ನು ಕಲಿಸುತ್ತದೆ ಎಂದು ವಿವರಿಸಿದರು.



ವಿದ್ಯಾರ್ಥಿಗಳಲ್ಲಿ ಜಾಗತಿಕ ಮಟ್ಟದ ಜ್ಞಾನವನ್ನು ಹೆಚ್ಚಿಸುವ, ವೈಯಕ್ತಿಕ ಸಾಮರ್ಥ್ಯವನ್ನು ಹೊರತರುವಲ್ಲಿಯೂ ನೂತನ ಶಿಕ್ಷಾ ನೀತಿ ಸಹಕಾರಿಯಾಗಿದೆ. ವಿದ್ಯಾರ್ಥಿಗಳಲ್ಲಿ ವಿಜ್ಞಾನ ತಿಳುವಳಿಕೆ ಹೆಚ್ಚಿಸುತ್ತದೆ ಎಂದರು.

ವಿದ್ಯಾರ್ಥಿಗಳಿಗೆ ವೃತ್ತಿಪರ ಶಿಕ್ಷಣ, ಕೌಶಲ್ಯ ವೃದ್ಧಿ ಮತ್ತು ಕೃತಕ ಬುದ್ಧಿಮತ್ತೆಯ ಕುರಿತು ತಿಳಿಸಿಕೊಡಲು, ಪೋಷಕರು ಮತ್ತು ಶಿಕ್ಷಕರ ಸಂಘ ಮತ್ತು ಪೋಷಕರು– ಶಿಕ್ಷಕರ ಸಭೆಗಳನ್ನು ಆಯೋಜಿಸಿ ವಿಷಯ ವಿನಿಮಯ ಮತ್ತು ವಿದ್ಯಾರ್ಥಿಗಳ ಶಿಕ್ಷಣದ ಗುಣಮಟ್ಟ ಅರಿಯಲು ಹೆಚ್ಚು ನೆರವಾಗುತ್ತದೆ ಎಂದರು.

ವಿದ್ಯಾರ್ಥಿಗಳ ಕಲಿಕೆಗೆ ಕೇಂದ್ರೀಯ ವಿದ್ಯಾಲಯದಲ್ಲಿ ಉತ್ತಮ ವಾತಾವರಣ ಏದೆ. ಮೈಸೂರು ಕೆವಿಕೆಯಲ್ಲಿ 20 ಸ್ಮಾರ್ಟ್ ಕ್ಲಾಸ್, 10 ಟ್ಯಾಬ್ಲೆಟ್ಸ್, 20 ಮಲ್ಟಿ ಮೀಡಿಯಾ ಪ್ರೊಜೆಕ್ಟರ್ಸ್ ಮತ್ತು ಒಂದು ಅಟಲ್ ಥಿಂಕರಿಂಗ್ ಲ್ಯಾಬ್ ಇದೆ. ಪಿಎಂಶ್ರೀ– ವಿದ್ಯಾ ಯೋಜನೆಯನ್ನು ಅಳವಡಿಸಿಕೊಂಡಿದೆ ಎಂದರು.

ನವೋದಯ ಶಾಲೆಯ ಪ್ರಾಂಶುಪಾಲ ಜೆ. ಮಧುಸೂದನ್ ಮಾತನಾಡಿ, ವಿದ್ಯಾರ್ಥಿಗಳು ತಮಗೆ ಇಷ್ಟವಾದ ವಿಷಯವನ್ನು (ಹಿಂದಿ, ಇಂಗ್ಲಿಷ್ ಮತ್ತು ಕನ್ನಡ) ಆಯ್ಕೆ ಮಾಡಿಕೊಳ್ಳಬಹುದಾಗಿದ್ದು, ಬೇರೆ ಭಾಷೆಯನ್ನೂ ಆಯ್ಕೆ ಮಾಡಿ ಕೊಳ್ಳಲು ಅವಕಾಶವಿದೆ. ಎನ್‌ಇಪಿಯು ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗೆ ಹೆಚ್ಚಿನ ಆದ್ಯತೆ ನೀಡುತ್ತದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶಿಕ್ಷಣ ಅಧಿಕಾರಿ ಕಮಲ, ಮೈಸೂರು ವಲಯ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳ ನಿರ್ದೇಶಕಿ ಮೀನಾಕ್ಷಿ ಜೈನ್, ಬಿಆರ್‌ಬಿಎನ್‌ಎಂ ಪಿಎಲ್ ಪ್ರಾಂಶುಪಾಲರಾದ ಎಂ.ಭಾಗ್ಯಲಕ್ಷ್ಮಿ, ಜೆಎಸ್‌ಎಸ್ ಶಾಲೆಯ ಪ್ರಾಂಶುಪಾಲರಾದ ಬಿ.ಲತಾ, ಡಿಪಿಎಸ್ ಪಬ್ಲಿಕ್ ಶಾಲೆಯ ಮಂಜುಶರ್ಮ, ಡಿ ಪೌಲ್ ಪಬ್ಲಿಕ್ ಶಾಲೆಯ ಪ್ರಾಂಶುಪಾಲರಾದ ಜೋಮೇಶ್ ಜೋಸ್ ಉಪಸ್ಥಿತರಿದ್ದರು.

ಕೊಡಗಿನಲ್ಲಿ ಭಾರಿ ಮಳೆ
ಜು.31ರವರೆಗೆ ನಾಗರಹೊಳೆ ಸಫಾರಿ ಸ್ಥಗಿತ

ಮೈಸೂರು, ಜು.27(ಎಂಟಿವೈ)– ಕೊಡಗು ಭಾಗದಲ್ಲಿ ಮಳೆ ಮುಂದುವರೆದಿರುವುದರಿಂದ ಹೆಚ್.ಡಿ.ಕೋಟೆಯ ವೀರನಹೊಸಳ್ಳಿ ಹಾಗೂ ಕುಟ್ಟ ಭಾಗದ ಸಫಾರಿಯನ್ನು ಜು.31ರವರೆಗೆ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಆದರೆ ಅಂತರಸಂತೆ ವಲಯದಲ್ಲಿ ಸಫಾರಿ ತೆರಳಲು ಅವಕಾಶವಿದೆ.

ಹುಣಸೂರು ಹಾಗೂ ಕೊಡಗಿನ ಕುಟ್ಟ ಭಾಗದಿಂದ ತೆರಳುವ ಸಫಾರಿ ವಾಹನಗಳು ನಾಗರಹೊಳೆ ವಲಯದಲ್ಲೇ ಕಾಡಿನಲ್ಲಿ ಸಂಚರಿಸುತ್ತವೆ. ಆದರೆ ಈ ಭಾಗದಲ್ಲಿ ಕಳೆದ ಕೆಲ ದಿನಗಳಿಂದ ಸುರಿದ ಮಳೆಯಿಂದಾಗಿ ಸಫಾರಿ ರಸ್ತೆಗಳು ಹಾಳಾಗಿವೆ. ಇದರಿಂದ ಸಫಾರಿ ವಾಹನಗಳು ಕೆಸರಿಗೆ ಜಾರಲಾರಂಭಿಸಿರುವುದರಿಂದ ಪ್ರವಾಸಿಗರ ಹಿತದೃಷ್ಟಿಯಿಂದ ಎರಡು ಕೇಂದ್ರದಲ್ಲಿ ಜು.31ರವರೆಗೆ ಸಫಾರಿ ಸ್ಥಗಿತಗೊಳಿಸಲಾಗಿದೆ. ಆದರೆ, ಹೆಚ್.ಡಿ.ಕೋಟೆ ತಾಲೂಕು ವ್ಯಾಪ್ತಿಯ ಅಂತರಸಂತೆ ವಲಯದಲ್ಲಿ ಸಫಾರಿಗೆ ತೆರಳಲು ಅವಕಾಶವಿದೆ.

ಬಾಕಿ ಗೌರವ ಧನ ಬಿಡುಗಡೆಗೆ ಒತ್ತಾಯಿಸಿ ಮನವಿ



ಮೈಸೂರು,ಜು.27(ಎಂಟಿವೈ)– ಮೈಸೂರು ವಿಶ್ವವಿದ್ಯಾನಿಲಯ ವ್ಯಾಪ್ತಿಯ ವಿವಿಧ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅತಿಥಿ ಉಪನ್ಯಾಸಕರಿಗೆ ಬಾಕಿಯಿರುವ ಗೌರವಧನ ಬಿಡುಗಡೆ ಹಾಗೂ ಪರೀಕ್ಷಾ ಕೊಠಡಿ ಮೇಲ್ವಿಚಾರಣೆ ಕಾರ್ಯ ಮಾಡದಂತೆ ಒತ್ತಾಯಿಸಿ ಅತಿಥಿ ಉಪನ್ಯಾಸಕರು ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರಿಗೆ ಮನವಿ ಸಲ್ಲಿಸಿದರು.

ಮೈಸೂರಿನ ಹುಣಸೂರು ಮುಖ್ಯ ರಸ್ತೆಯಲ್ಲಿರುವ ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರ ಕಚೇರಿಗೆ ಆಗಮಿಸಿದ 80ಕ್ಕೂ ಹೆಚ್ಚು ಅತಿಥಿ ಉಪನ್ಯಾಸಕರು, ಮೈಸೂರು ವಿವಿ ವ್ಯಾಪ್ತಿಯ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವವರಿಗೆ ಕಳೆದ ಮೂರು ತಿಂಗಳಿಂದ ಗೌರವಧನ ಬಿಡುಗಡೆ ಮಾಡಿಲ್ಲ. ಇದರಿಂದ ಜೀವನ ನಿರ್ವಹಣೆಗೆ ತೀವ್ರ ತೊಂದರೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕೂಡಲೇ ಗೌರವಧನ ಬಿಡುಗಡೆ ಮಾಡಬೇಕು ಎಂದು ಮನವಿ ಮಾಡಿದರು. ಮೈಸೂರು ವಿವಿ ವ್ಯಾಪ್ತಿಯ 2022–23ನೇ ಶೈಕ್ಷಣಿಕ ಸಾಲಿನ ವೇಳಾಪಟ್ಟಿ ಜು.28ಕ್ಕೆ ಅಂತ್ಯಗೊಳ್ಳಲಿದೆ. ಇದರಿಂದ ಅತಿಥಿ ಉಪನ್ಯಾಸಕರನ್ನು ಸೇವೆಯಿಂದ ಬಿಡುಗಡೆಗೊಳಿಸಲು ಹುನ್ನಾರ ನಡೆಸಲಾಗುತ್ತಿದೆ. ಪರೀಕ್ಷಾ ಕಾರ್ಯ ಆರಂಭಕ್ಕೂ ಮುನ್ನ ಗೌರವಧನ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿದರು.

ಪಿಆರ್‌ಕೆ ಪ್ರೊಡಕ್ಷನ್‌ನ 'ಆಚಾರ್ & ಕೋ' ಚಿತ್ರ ಬಿಡುಗಡೆ ಹಿನ್ನೆಲೆ; ಚಾಮುಂಡಿ ದರ್ಶನ ಪಡೆದ ಅಶ್ವಿನಿ ಪುನೀತ್‌ರಾಜ್‌ಕುಮಾರ್

ಮೈಸೂರು, ಜು.27(ಎಂಕೆ)– 'ಆಚಾರ್ & ಕೋ' ಚಿತ್ರ ತಂಡದೊಂದಿಗೆ ಮೈಸೂರಿನ ಚಾಮುಂಡಿಬೆಟ್ಟಕ್ಕೆ ಗುರುವಾರ ಭೇಟಿ ನೀಡಿದ ಅಶ್ವಿನಿ ಪುನೀತ್‌ರಾಜ್‌ಕುಮಾರ್ ಚಾಮುಂಡೇಶ್ವರಿ ದರ್ಶನ ಪಡೆದು, ನಂತರ ಡಿಆರ್‌ಸಿ ಸಿನಿಮಾಸ್‌ನಲ್ಲಿ ಸಿನಿಮಾ ವೀಕ್ಷಣೆ ಮಾಡಿದರು.

ಅಶ್ವಿನಿ ಪುನೀತ್‌ರಾಜ್‌ಕುಮಾರ್ ಅವರು ಪಿಆರ್‌ಕೆ ಪ್ರೊಡಕ್ಷನ್ ಅಡಿಯಲ್ಲಿ ನಿರ್ಮಾಣ ಮಾಡಿರುವ 'ಆಚಾರ್ & ಕೋ' ಚಿತ್ರ ಜು.28ರಂದು ರಾಜ್ಯಾದ್ಯಂತ ಬಿಡುಗಡೆಯಾಗುವ ಹಿನ್ನೆಲೆಯಲ್ಲಿ ಮೈಸೂರಿಗೆ ಆಗಮಿಸಿದ ಅವರು, ಮೊದಲು ಚಾಮುಂಡಿಬೆಟ್ಟಕ್ಕೆ ತೆರಳಿ ದೇವಿಯ ದರ್ಶನ ಪಡೆದು ಸಿನಿಮಾ ಗೆಲ್ಲುವಂತೆ ಪ್ರಾರ್ಥಿಸಿದರು. ಈ ಸಂದರ್ಭದಲ್ಲಿ ನಟ ವಿನಯ್ ರಾಜಕುಮಾರ್ ಹಾಗೂ ಅಶ್ವಿನಿ ಪುನೀತ್ ರಾಜ್‌ಕುಮಾರ್ ಪುತ್ರಿ ಕೂಡ ಇದ್ದರು.

ಡಿಆರ್‌ಸಿಗೆ ಭೇಟಿ: ಕರ್ನಾಟಕ ರತ್ನ ಡಾ.ಪುನೀತ್ ರಾಜ್‌ಕುಮಾರ್ ನಿಧನದ ಬಳಿಕ ಪಿಆರ್‌ಕೆ ಪ್ರೊಡಕ್ಷನ್ ಜವಾಬ್ದಾರಿ ನಿರ್ವಹಿಸುತ್ತಿರುವ ಅವರು, ನಗರದ ಜಯಲಕ್ಷ್ಮಿಪುರಂನಲ್ಲಿರುವ ಡಿಆರ್‌ಸಿ ಸಿನಿಮಾಸ್ ಮಾಲ್‌ಗೆ ತೆರಳಿ 'ಆಚಾರ್ & ಕೋ' ಚಿತ್ರದ ಪ್ರಚಾರದಲ್ಲಿ ಪಾಲ್ಗೊಂಡರು. ಈ ವೇಳೆ ಮಾತನಾಡಿದ ಅವರು,



ಉತ್ತಮ ಸಿನಿಮಾಗಳನ್ನು ಜನರಿಗೆ ತಲುಪಿಸುವ ಉದ್ದೇಶದಿಂದ ಇಡೀ ಚಿತ್ರತಂಡ ಬೆಂಗಳೂರು, ಮೈಸೂರು ಸೇರಿದಂತೆ ಹಲವೆಡೆ ಪ್ರೀಮಿಯರ್ ಶೋ ಏರ್ಪಡಿಸಿ, ಸಿನಿಮಾ ಪ್ರಚಾರ ಕೂಡ ಮಾಡಲಾಗುತ್ತಿದೆ ಎಂದು ತಿಳಿಸಿದರಲ್ಲದೆ 'ಆಚಾರ್ & ಕೋ' ಚಿತ್ರ ವೀಕ್ಷಣೆ ಮಾಡಿದರು.

ಮುಗಿಬಿದ್ದ ಅಭಿಮಾನಿಗಳು: ಅಶ್ವಿನಿ ಪುನೀತ್ ರಾಜ್‌ಕುಮಾರ್ ಅವರೊಂದಿಗೆ ಫೋಟೋ ಕ್ಲಿಕ್ಕಿಸಿಕೊಳ್ಳಲು ಅವರ ಅಭಿಮಾನಿಗಳು ಮುಗಿಬಿದ್ದರು. ಚಾಮುಂಡಿಬೆಟ್ಟ ಹಾಗೂ ಡಿಆರ್‌ಸಿಯಲ್ಲೂ ಹಲವರು ಅವರೊಂದಿಗೆ ಫೋಟೊ ತೆಗೆದುಕೊಂಡು ಹರ್ಷ ವ್ಯಕ್ತಪಡಿಸಿದರು. ಈ ವೇಳೆ ಡಿಆರ್‌ಸಿ ಸಿನಿಮಾಸ್‌ನ ಹನುಮಂತ್, ವೈಶಾಲಿ ಹನುಮಂತ್, ಕೃಷ್ಣರಾವ್ ಉಪಸ್ಥಿತರಿದ್ದರು.

ಮಹಿಳೆಯರು ಸ್ವಯಂ ಉದ್ಯೋಗ ಮಾಡಿ ಆರ್ಥಿಕ ಪರಿಸ್ಥಿತಿ ಸುಧಾರಿಸಬೇಕು

ಉಡುಪಿಯ ಶ್ರೀ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಸಲಹೆ

ಮೈಸೂರು,ಜು.27(ಎಂಟಿವೈ)– ಮಹಿಳೆಯರು ಸ್ವಯಂ ಉದ್ಯೋಗ ಮಾಡುವ ಮೂಲಕ ಕುಟುಂಬದ ಆರ್ಥಿಕ ಪರಿಸ್ಥಿತಿ ಸುಧಾರಿಸಿಕೊಳ್ಳುವತ್ತ ಗಮನ ಹರಿಸಬೇಕು ಎಂದು ಉಡುಪಿಯ ಶ್ರೀ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಸಲಹೆ ನೀಡಿದ್ದಾರೆ.

ಮೈಸೂರಿನ ಸರಸ್ವತಿಪುರಂನಲ್ಲಿರುವ ಶ್ರೀ ಕೃಷ್ಣಧಾಮದ ಸಭಾಂಗಣದಲ್ಲಿ ಶ್ರೀ ದುರ್ಗಾ ಫೌಂಡೇಶನ್ ಹಾಗೂ ಸಂಜೀವಿನಿ ಫೌಂಡೇಶನ್ ವತಿಯಿಂದ ಗುರುವಾರ ಮಹಿಳೆಯರಿಗಾಗಿ ಹಮ್ಮಿಕೊಂಡಿದ್ದ ಉಚಿತ ಕಂಪ್ಯೂಟರ್, ಟೈಲರಿಂಗ್, ಮೇಕಪ್, ಹ್ಯಾಂಡ್‌ವರ್ಕ್ ತರಬೇತಿ ಹಾಗೂ ಮಹಿಳಾ ಅಸ್ಮಿತೆ ಕುರಿತ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು.



ಪ್ರಸ್ತುತ ಸಂದರ್ಭದಲ್ಲಿ ವಸ್ತುಗಳ ಬೆಲೆ ಏರಿಕೆಯಿಂದಾಗಿ ಬಡ ಹಾಗೂ ಮಧ್ಯಮ ಕುಟುಂಬದ ಜನ ಸಂಕಷ್ಟಕ್ಕೀಡಾಗಿದ್ದಾರೆ. ಇಂತಹ ಸಂದರ್ಭದಲ್ಲಿ ಕುಟುಂಬದಲ್ಲಿ ಒಬ್ಬ ವ್ಯಕ್ತಿಯ ದುಡಿಮೆಯಿಂದ ಜೀವನ ನಿರ್ವಹಣೆ ಅಸಾಧ್ಯ. ಹಾಗಾಗಿ ಮಹಿಳೆಯರು ಸ್ವಯಂ ಉದ್ಯೋಗಿಗಳಾಗಿ ಕುಟುಂಬ ನಿರ್ವಹಣೆಗೆ ಕೈಜೋಡಿಸಬೇಕು. ಮಹಿಳೆಯರು ಉದ್ಯಮಿಗಳಾಗಲು ಸಾಕಷ್ಟು ಅವಕಾಶಗಳಿವೆ. ಸರ್ಕಾರದ ವತಿಯಿಂದಲೂ ಸೌಲಭ್ಯ ದೊರೆಯುತ್ತದೆ. ಸಂಘ–ಸಂಸ್ಥೆಗಳು, ವಿವಿಧ ಇಲಾಖೆಗಳು ತರಬೇತಿ ನೀಡುತ್ತವೆ. ಮಹಿಳಾ ಸಬಲೀಕರಣದಿಂದ ದೇಶದ ಅಭಿವೃದ್ಧಿ ಸಾಧ್ಯ. ಮಹಿಳೆಯರಿಗೆ ಆಯೋಜಿಸುವ ವಿವಿಧ ತರಬೇತಿ ಕಾರ್ಯಾಗಾರದಲ್ಲಿ ಪಾಲ್ಗೊಂಡಿರುವ ಮಹಿಳೆಯರು ಮುಂಬರುವ ದಿನಗಳಲ್ಲಿ ಆರ್ಥಿಕ ಸ್ವಾವಲಂಬಿಗಳಾಗಿ ರೂಪುಗೊಳ್ಳುವಂತೆ ಸಲಹೆ ನೀಡಿದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕಿ ಡಾ.ಆರ್.ಹೆಚ್.ಪವಿತ್ರ ಮಾತನಾಡಿ, ನಿರುದ್ಯೋಗಿ ಮಹಿಳೆಯರು ಸ್ವ–ಉದ್ಯೋಗ ಆರಂಭಿಸಲು ತರಬೇತಿ ಪಡೆಯುವುದು ಅಗತ್ಯ. ಯಾವ ಉದ್ಯೋಗ ಆರಂಭಿಸಬಹುದು ಎಂದು ನಿರ್ಧರಿಸಿ ಅದಕ್ಕೆ ಪೂರಕವಾಗಿ ತರಬೇತಿ ಪಡೆದುಕೊಂಡರೆ ಏಳಿಗೆ ಸಾಧಿಸಬಹುದು. ಇತ್ತೀಚಿನ ವರ್ಷಗಳಲ್ಲಿ ಮಹಿಳೆಯರು ಸ್ವಾವಲಂಬಿಗಳಾಗಿ ಹೊರಹೊಮ್ಮುತ್ತಿದ್ದಾರೆ. ಬಿಡುವಿನ ವೇಳೆಯಲ್ಲಿ ಮನೆಯಲ್ಲಿಯಲ್ಲಿದ್ದುಕೊಂಡೇ ಏನಾದರೂ ವೃತ್ತಿ ಮಾಡಿ ಸಂಪಾದನೆ ಮಾಡುವುದಕ್ಕೆ ಮಹಿಳೆಯರು ಮುಂದಾಗಬೇಕು ಎಂದು ಮನವಿ ಮಾಡಿದರು.

ಸರಸ್ವತಿಪುರಂ ಠಾಣೆಯ ಇನ್ಸ್‌ಪೆಕ್ಟರ್ ಸಿ.ಎಂ.ರವೀಂದ್ರ ಮಾತನಾಡಿ, ತರಬೇತಿ ಪಡೆದ ಮಹಿಳೆಯರು ಸ್ವಯಂ ಉದ್ಯೋಗ ಆರಂಭಿಸಬೇಕು. ಹೊಸ ಫ್ಯಾಷನ್‌ಗೆ ಅನುಗುಣವಾಗಿ ಹೊಸ ವಿನ್ಯಾಸದ ಬಟ್ಟೆ ಹೊಲೆದು ಸಂಪಾದಿಸಲು ಮುಂದಾಗಬೇಕು. ಪ್ಲಾಸ್ಟಿಕ್ ಕವರ್ ಬಳಕೆ ನಿಷೇಧವಿರುವುದರಿಂದ ಮಹಿಳೆಯರು ಬಟ್ಟೆ ಬ್ಯಾಗ್ ತಯಾರಿಕೆ ಮತ್ತು ಮಾರಾಟಕ್ಕೆ ಮುಂದಾಗಬೇಕು ಎಂದರು.

ಶ್ರೀ ದುರ್ಗಾ ಫೌಂಡೇಶನ್ ಅಧ್ಯಕ್ಷೆ ರೇಖಾ ಶ್ರೀನಿವಾಸ್ ಮಾತನಾಡಿ, ಕೌಶಲ್ಯ ತರಬೇತಿಗಳು ಜೀವನಕ್ಕೆ ದಾರಿದೀಪವಾಗಲಿದ್ದು, ಸಂಘ–ಸಂಸ್ಥೆ ಹಾಗೂ ಸರ್ಕಾರ ನೀಡುವ ತರಬೇತಿ ಪಡೆದರೆ ಸ್ವಂತ ಜೀವನ ರೂಪಿಸಿಕೊಳ್ಳಲು ಸಾಧ್ಯ. ಮಹಿಳೆಯರು ನಾಯಕತ್ವದ ಗುಣ ಬೆಳೆಸಿಕೊಳ್ಳಬೇಕು. ಸರ್ಕಾರ ನೀಡುವ ಸೌಲಭ್ಯ ಪಡೆದುಕೊಂಡು ಸ್ವಯಂ ಉದ್ಯೋಗ ಕಲ್ಪಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

21 ದಿನಗಳ ಕಾಲ ನಡೆಯುವ ಈ ತರಬೇತಿ ಕಾರ್ಯಾಗಾರದಲ್ಲಿ ಪಾಲ್ಗೊಳ್ಳಲು ಬಯಸುವವರು 9742445558 ಅನ್ನು ಸಂಪರ್ಕಿಸಬಹುದಾಗಿದೆ. ಕಾರ್ಯಕ್ರಮದಲ್ಲಿ ಸಮಾಜ ಸೇವಕ ಕೆ.ರಘುರಾಮ್ ವಾಜಪೇಯಿ, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಕಾರ್ಯಾಧ್ಯಕ್ಷ ರವಿಶಾಸ್ತ್ರಿ, ಪ್ರಧಾನ ಕಾರ್ಯದರ್ಶಿ ಸುಬ್ರಹ್ಮಣ್ಯ ಎಂ.ತಂತ್ರಿ, ಸಂಜೀವಿನಿ ಫೌಂಡೇಶನ್ ಅಧ್ಯಕ್ಷ ಭರತ್ ಕುಮಾರ್, ಅಶ್ವಿನಿ ಗೌಡ, ಭಾಗ್ಯಶ್ರೀ, ಅಂಬಾಭವಾನಿ ಮಹಿಳಾ ಸಮಾಜದ ಅಧ್ಯಕ್ಷೆ ಸವಿತಾ ಘಾಟ್ಕೆ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಪಿಆರ್‌ಕೆ ಬ್ಯಾನರ್‌ನಲ್ಲಿ ಹೊಸ ಪ್ರತಿಭೆಗಳಿಗೆ ಛಾನ್ಸ್

–ಅಶ್ವಿನಿ ಪುನೀತ್‌ರಾಜಕುಮಾರ್



ಪುನೀತ್ ರಾಜ್‌ಕುಮಾರ್ ಅಗಲಿದ ನಂತರ ಪತ್ನಿ ಅಶ್ವಿನಿ ಅವರೇ ಪಿಆರ್‌ಕೆ ಪ್ರೊಡಕ್ಷನ್‌ನ ಸಂಪೂರ್ಣ ಜವಾಬ್ದಾರಿ ಹೊತ್ತುಕೊಂಡಿದ್ದಾರೆ, ಪತಿಯ ಆಶಯಗಳನ್ನು ಮುಂದುವರೆಸಿಕೊಂಡು ಹೋಗುವುದೇ ನನ್ನ ಉದ್ದೇಶ ಎಂದು ಘೋಷಿಸಿದ್ದಾರೆ. ಇದೀಗ ಪಿಆರ್‌ಕೆ ಬ್ಯಾನರ್‌ನಲ್ಲಿ ನಿರ್ಮಿಸಲಾದ 'ಆಚಾರ್ ಅಂಡ್ ಕೋ' ಚಿತ್ರ ಈ ವಾರ ತೆರೆಗೆ ಬರುತ್ತಿದೆ. ಮೊದಲ ಬಾರಿಗೆ ಪತ್ರಕರ್ತರನ್ನು ಮನೆಗೆ ಆಹ್ವಾನಿಸಿದ್ದ ಅಶ್ವಿನಿ ಪುನೀತ್ ರಾಜ್‌ಕುಮಾರ್, ತಮ್ಮ ಮುಂದಿರುವ ಜವಾಬ್ದಾರಿಗಳು ಹಾಗೂ ಚಿತ್ರದ ಬಗ್ಗೆ ಒಂದಷ್ಟು ವಿಚಾರಗಳನ್ನು ಹಂಚಿಕೊಂಡಿದ್ದಾರೆ.

ಆಚಾರ್ ಅಂಡ್ ಕೋ ಅರವತ್ತರ ದಶಕದ ಬೆಂಗಳೂರಿನ ಕಥೆ, ಒಂದು ಸಿಂಪಲ್ ಸ್ಟೋರಿ ಎಲ್ಲರಿಗೂ ಕನೆಕ್ಟ್ ಆಗುತ್ತದೆ, ಆಗಿನ ಕಾಲದಲ್ಲಿದ್ದ ದೊಡ್ಡ ಕುಟುಂಬಗಳಲ್ಲಿ ತುಂಬಾ ಹೊಂದಾಣಿಕೆ ಇರುತ್ತಿತ್ತು. ನಮ್ಮ ಸಿನಿಮಾದಲ್ಲೂ ಅದೇ ರೀತಿಯ ಒಂದು ಕುಟುಂಬದ ಕಥೆಯನ್ನು ಹೇಳಿದ್ದೇವೆ. ಇದು ಪೂರ್ಣ ಪ್ರಮಾಣದ ಮಹಿಳಾಪ್ರಧಾನ ಚಿತ್ರವಲ್ಲ, ಚಿತ್ರವನ್ನು ನಿರ್ದೇಶನ ಮಾಡಿರುವ ಸಿಂಧೂ ಅವರೇ ಮುಖ್ಯಪಾತ್ರದಲ್ಲಿ ನಟಿಸಿದ್ದಾರೆ. ಚಿಕ್ಕ ಹುಡುಗಿ ಹೇಗೆ ಮಾಡುತ್ತಾಳೋ ಅಂತ ಆತಂಕವಿತ್ತು, ನಂತರ ಅವಳ ಪ್ರತಿಭೆ ಗೊತ್ತಾಯ್ತು. ನನ್ನ ಪತಿ, ಡೈರೆಕ್ಟರ್ ಈಸ್ ದ ಕ್ಯಾಪ್ಟನ್ ಅಂತಿದ್ದರು, ಅವರ ಹಾದಿಯನ್ನೇ ನಾನೂ ಅನುಸರಿಸುತ್ತಿದ್ದೇನೆ. ಸಂಗೀತ ನಿರ್ದೇಶಕಿ ಬಿಂದುಮಾಲಿನಿ ಸೇರಿದಂತೆ ಚಿತ್ರದ ಪ್ರಮುಖ ವಿಭಾಗಗಳಲ್ಲಿ ಮಹಿಳೆಯರೇ ಕೆಲಸ ಮಾಡಿದ್ದಾರೆ. ನಮ್ಮ ಬ್ಯಾನರ್‌ನಲ್ಲಿ ಎಲ್ಲಾ ಥರದ ಸಿನಿಮಾ ಮಾಡಿದ್ದೇವೆ, ಫ್ಯಾಮಿಲಿ ಸಬ್ಜೆಕ್ಟ್ ಮಾಡಿರಲಿಲ್ಲ. ಆಚಾರ್ ಅಂಡ್ ಕೋ ಅಂಥದ್ದೇ ಕಥೆ ಎಂದು ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರಿಸುತ್ತಾ ಹೋದರು.

ನಾನು ಮೊದಲು ಕಂಟೆಂಟ್‌ಗೆ ಪ್ರಾಮುಖ್ಯತೆ ನೀಡುತ್ತೇನೆ, ಜೊತೆಗೆ ಮೇಕಿಂಗ್ ಕೂಡ ಮುಖ್ಯ. ಕಥೆ ಯಾವಾಗಲೂ ಪ್ರೇಕ್ಷಕರಿಗೆ ಕನೆಕ್ಟ್ ಆಗುವಂತಿರಬೇಕು. ಅವರಿದ್ದಾಗಲೇ(ಪುನೀತ್) ಆಚಾರ್ ಅಂಡ್ ಕೋ ಹಾಗೂ ಓ2 ಕಥೆಗಳನ್ನು ಓಕೆ ಮಾಡಿದ್ದರು ಎಂದು ವಿವರಿಸಿದರು, ಹೊಸ ಪ್ರತಿಭೆಗಳು ಯಾರೇ ಆದರೂ ಅವರಿಗೆ ನಮ್ಮ ಸಂಸ್ಥೆಯಲ್ಲಿ ಅವಕಾಶ ನೀಡುತ್ತೇವೆ. ಕಥೆ ಚೆನ್ನಾಗಿದ್ದರೆ ನಮ್ಮ ಟೀಮ್ ಅವರನ್ನು ಸಂಪರ್ಕ ಮಾಡುತ್ತದೆ. ಮೊದಲು ನನಗೆ ಇಷ್ಟ ಆಗಬೇಕು. ಮೂರು ಜನ ನಿರ್ದೇಶಕರು ನಮ್ಮ ಜೊತೆ ಇದ್ದಾರೆ. ಅವರು ಒಮ್ಮೆ ಕಥೆ ಕೇಳುತ್ತಾರೆ, ಚರ್ಚೆ ಮಾಡಿ ನಂತರ ಫೈನಲ್ ಮಾಡುತ್ತಾರೆ ಎಂದು ಪಿಆರ್‌ಕೆ ಉದ್ದೇಶಗಳನ್ನು ವಿವರಿಸಿದರು,

ನನಗೆ ಥ್ರಿಲ್ಲರ್ ಸಿನಿಮಾಗಳೆಂದರೆ ಇಷ್ಟ, ಪುಸ್ತಕಗಳನ್ನು ಓದುವ ಹವ್ಯಾಸವಿದೆ, ಸದ್ಯ ಒಬ್ಬ ಲೇಡಿ ರೈಟರ್ ಕಥೆ ಓದುತ್ತಿದ್ದೇನೆ, ಅದನ್ನು ಸಿನಿಮಾ ಮಾಡಬೇಕು ಅನ್ನುವ ಯೋಚನೆಯೂ ಇದೆ. ಅಮ್ಮ(ಪಾರ್ವತಮ್ಮ ರಾಜಕುಮಾರ್) ಕೂಡ ಕಾದಂಬರಿಗಳನ್ನು ಸಿನಿಮಾ ಮಾಡುತ್ತಿದ್ದರು. ಅಪ್ಪಾಜಿ, ಅಮ್ಮ ಆಗಲಿ ಸಿನಿಮಾ ಬಗ್ಗೆ ತುಂಬಾ ಫ್ಯಾಷನೇಟ್ ಆಗಿದ್ದರು, ನಮ್ಮ ಬ್ಯಾನರ್‌ನಿಂದ ವರ್ಷಕ್ಕೆರಡಾದರೂ ಸಿನಿಮಾ ಮಾಡುವ ಯೋಚನೆಯಿದೆ, ಮೊದಲಿಂದಲೂ ಅವರ ಜೊತೆ ಪ್ರೊಡಕ್ಷನ್‌ನಲ್ಲಿ ಇನ್‌ವಾಲ್ವ್ ಆಗಿರುತ್ತಿದ್ದೆ, ಹಾಗಾಗಿ ಈ ಜವಾಬ್ದಾರಿ ಕಷ್ಟ ಅನಿಸಲಿಲ್ಲ, ನಮ್ಮ ಬ್ಯಾನರ್‌ನಿಂದ ಒಳ್ಳೇ ಸಿನಿಮಾಗಳನ್ನು ಮಾಡೋದು, ಒಳ್ಳೇ ಪ್ರತಿಭೆಗಳಿಗೆ ಅವಕಾಶ ಕೊಡೋದು ನಮ್ಮ ಗುರಿ ಎಂದು ಅಶ್ವಿನಿ ಪುನೀತ್ ರಾಜ್‌ಕುಮಾರ್ ಹೇಳಿದರು.



'ಕೌಸಲ್ಯಾ ಸುಪ್ರಜಾ ರಾಮಾ' ತೆರೆಗೆ

ತಾಯಿ ಮಗನ ನಡುವಿನ ಅವಿನಾಭಾವ ಸಂಬಂಧದ ಕಥೆ ಹೇಳುವ ಚಿತ್ರ ಕೌಸಲ್ಯಾ ಸುಪ್ರಜಾ ರಾಮಾ. ಇದರಲ್ಲಿ ಕೌಸಲ್ಯೆ ಹಾಗೂ ಆಕೆಯ ಮಗ ರಾಮನ ಸುತ್ತ ನಡೆಯುವ ಕಥೆಯಿದೆ. ಇಂಥದ್ದೊಂದು ಕಾನ್ಸೆಪ್ಟ್ ಇಟ್ಟುಕೊಂಡು ನಿರ್ದೇಶಕ ಶಶಾಂಕ್ ಈ ಚಿತ್ರವನ್ನು ನಿರೂಪಿಸಿದ್ದಾರೆ. ಕೃಷ್ಣಲೀಲಾ, ಲವ್ 360 ಹೀಗೆ ವಿಭಿನ್ನ ಶೈಲಿಯ ಚಿತ್ರಗಳನ್ನೇ ನಿರ್ದೇಶಿಸಿಕೊಂಡು ಬಂದಿದ್ದ ಶಶಾಂಕ್ ಈ ಸಲ ಹೊಸದೊಂದು ಕಥೆಯನ್ನು ಕನ್ನಡ ಸಿನಿರಸಿಕರಿಗೆ ಹೇಳಹೊರಟಿದ್ದಾರೆ. ಈ ಚಿತ್ರದ ಟ್ರೈಲರ್‌ನ್ನು ನಟ ಸುದೀಪ್ ಬಿಡುಗಡೆ ಮಾಡಿದರು. ಮಾಜಿ ಸಚಿವ ಬಿ.ಸಿ. ಪಾಟೀಲ್ ಹಾಗೂ ಶಶಾಂಕ್ ಈ ಚಿತ್ರದ ನಿರ್ಮಾಪಕರು. ಸದ್ಯ ರಾಜಕೀಯದಿಂದ ಬಿಡುವು ಪಡೆದಿರುವ ಪಾಟೀಲರು ತಾವು ಮೊದಲಿನಿಂದಲೂ ಬೆಳೆಸಿಕೊಂಡು ಬಂದಿದ್ದ ಪ್ರೊಡಕ್ಷನ್ ಹೌಸ್ ಮೂಲಕ ಒಂದಷ್ಟು ಚಿತ್ರಗಳನ್ನು ಮಾಡ ಹೊರಟಿದ್ದಾರೆ. ಈಗಾಗಲೇ ಅವರ ಮತ್ತೊಂದು ಚಿತ್ರ ಗರಡಿ ಬಿಡುಗಡೆಯ ಹಂತದಲ್ಲಿದೆ.

ಡಾರ್ಲಿಂಗ್ ಕೃಷ್ಣ ಈ ಚಿತ್ರದಲ್ಲಿ ನಾಯಕನಾಗಿ ಕಾಣಿಸಿಕೊಂಡಿದ್ದು, ತಾಯಿ ಪಾತ್ರವನ್ನು ಸುಧಾ ಬೆಳವಾಡಿ ನಿರ್ವಹಿಸಿದ್ದಾರೆ. ತಾಯಿ–ಮಗನ ನಡುವಿನ ಭಾವನಾತ್ಮಕ ಸನ್ನಿವೇಶಗಳನ್ನೊಳಗೊಂಡ ಮದರ್ ಸೆಂಟಿಮೆಂಟ್ ಈ ಚಿತ್ರದ ಹೈಲೈಟ್. ಜೂಲಿಯೆಟ್–2 ಖ್ಯಾತಿಯ ನಟಿ ಬೃಂದಾ ಆಚಾರ್ಯ ನಾಯಕಿಯಾಗಿದ್ದು, ಈಕೆಯ ತಂದೆಯಾಗಿ ಹಿರಿಯ ನಟ ರಂಗಾಯಣ ರಘು ಅಭಿನಯಿಸಿದ್ದಾರೆ. ಈ ಸಂದರ್ಭದಲ್ಲಿ ಮಾತನಾಡಿದ ಸುದೀಪ್, ಟ್ರೈಲರ್‌ನಲ್ಲಿ ಒಂದೊಳ್ಳೆ ಕಥೆಯನ್ನು ನೋಡಿದೆ. ನಂಬಿಕೆ ಮತ್ತು ಸಂಬಂಧಗಳ ಸಂಘರ್ಷ ಇದರಲ್ಲಿದೆ. ಎಮೋಷನ್‌ಗಳನ್ನು ಹಿಡಿದಿಡುವ ಶಶಾಂಕ್ ಅವರ ಶೈಲಿಯೇ ನನಗಿಷ್ಟ, ಈ ವರ್ಷದ ಹಿಟ್ ಚಿತ್ರಗಳಲ್ಲೊಂದಾಗಲಿ ಎಂದು ಹಾರೈಸಿದರು.

ನಿರ್ದೇಶಕ ಶಶಾಂಕ್ ಮಾತನಾಡಿ, ಒಬ್ಬ ನಿರ್ದೇಶಕನಿಗೆ ಇಂಥ ಕಥೆ ಸಿಗೋದು ಅಪರೂಪ. ನಾಯಕ ಕೃಷ್ಣ ಅವರನ್ನು ಬೇರೆಯದೇ ರೀತಿ ತೋರಿಸುವ ಪ್ರಯತ್ನ ಮಾಡಿದ್ದೇನೆ. ಬೆಂಗಳೂರು, ಮೈಸೂರು ಸುತ್ತಮುತ್ತ 70 ದಿನ ಹಾಗೂ ಕಾಶ್ಮೀರದಲ್ಲಿ ಹಾಡೊಂದನ್ನು ಚಿತ್ರೀಕರಿಸಿದ್ದೇವೆ. ಕೃಷ್ಣ ಅವರ ವೃತ್ತಿಜೀವನದಲ್ಲೇ ಅತಿಹೆಚ್ಚು ಬಜೆಟ್‌ನ ಚಿತ್ರವೂ ಇದಾಗಿದೆ ಎಂದರು. ನಿರ್ಮಾಪಕ ಬಿ.ಸಿ.ಪಾಟೀಲ್ ಮಾತನಾಡಿ ಶಶಾಂಕ್ ನನ್ನತ್ರ ಬಂದು ಈ ಕಥೆ ಹೇಳಿದಾಗ ಅವರ ಕಾನ್ಸೆಪ್ಟ್ ತುಂಬಾ ಇಷ್ಟವಾಯಿತು. ಅರ್ಜುನ್ ಜನ್ಯ ಅವರ ಸಂಗೀತದ ಹಾಡುಗಳು ತುಂಬಾ ಸೊಗಸಾಗಿವೆ. ಫ್ಯಾಮಿಲಿ ಆಡಿಯನ್ಸ್ ಇಂಥ ಚಿತ್ರವನ್ನು ತುಂಬಾ ಇಷ್ಟಪಡುತ್ತಾರೆ ಎಂದು ಹೇಳಿದರು.

ನಾಯಕ ಕೃಷ್ಣ ಮಾತನಾಡುತ್ತಾ, ಆರಂಭದಲ್ಲಿ ಶಶಾಂಕ್ ನನ್ನ ಬಳಿ ಬಂದು ನಿಮಗೆ ಯಾವ ತರಹದ ಸಿನಿಮಾ ಬೇಕು ಎಂದು ಕೇಳಿದರು. ಆಗ ನಾನು ನಿಮ್ಮ ಶೈಲಿಯಲ್ಲೇ ಸಿನಿಮಾ ಮಾಡಿ ಎಂದೆ. ಒಂದು ತಿಂಗಳ ನಂತರ ಈ ಕಥೆ ತಂದರು. ನನಗೂ ಈ ಕಥೆ ಹೊಸ ಅನುಭವ ನೀಡಿದೆ. ನಟನೆ ಮಾಡಿದ್ದೇ ಗೊತ್ತಾಗಲಿಲ್ಲ ಎಂದರು. ಚಿತ್ರದ ಮತ್ತೊಂದು ಪ್ರಮುಖ ಪಾತ್ರದಲ್ಲಿ ಮಿಲನಾ ನಾಗರಾಜ್ ಕಾಣಿಸಿಕೊಂಡಿದ್ದಾರೆ.

ಎಲ್ಲೋ ಜೋಗಪ್ಪ ನಿನ್ನರಮನೆ... ಮನೆಬಿಟ್ಟುಹೋದ ಮಗನ ಕಥೆ



ಒಂದು ಚಿತ್ರದ ಶೀರ್ಷಿಕೆ ಆ ಸಿನಿಮಾದ ಒಟ್ಟಾರೆ ಆಶಯವನ್ನು ಹೇಳುವಂತಿರಬೇಕು, ಅಂಥದ್ದೇ ವಿಭಿನ್ನ ಕಥೆಹೊತ್ತು ಬರುತ್ತಿರುವ ಚಿತ್ರ ಎಲ್ಲೋ ಜೋಗಪ್ಪ ನಿನ್ನರಮನೆ. ಹಯವದನ ನಿರ್ದೇಶನದ ಈ ಸಿನಿಮಾದ ಬಹುತೇಕ ಚಿತ್ರೀಕರಣ ಮುಗಿದಿದ್ದು, ಹಾಡೊಂದನ್ನು ಬಾಕಿ ಉಳಿಸಿಕೊಂಡಿತ್ತು ಈಗ ಆ ಮಾಸ್ ಹಾಡನ್ನು ಅಭಿಮಾನ್ ಸ್ಟುಡಿಯೋದಲ್ಲಿ ಅದ್ದೂರಿ ಸೆಟ್ ಹಾಕಿ ಚಿತ್ರೀಕರಿಸಲಾಗಿದೆ. ಹೌದಾ ಹುಲಿಯಾ ಹೌದೌದು ಎಂಬ ಹಾಡಿಗೆ ಮೋಹನ್ ಅವರ ನೃತ್ಯ ಸಂಯೋಜನೆಯಲ್ಲಿ ನಾಯಕ ಅಂಜನ್ ಭರ್ಜರಿ ಹೆಜ್ಜೆ ಹಾಕಿದ್ದಾರೆ.

ನಿರ್ದೇಶಕ ಹಯವದನ ಮಾತನಾಡಿ, 'ಹೌದಾ ಹುಲಿಯಾ' ಎಂಬ ಮಾಸ್ ಹಾಡಿನೊಂದಿಗೆ ನಮ್ಮ ಸಿನಿಮಾದ ಕೊನೆಯ ದಿನದ ಚಿತ್ರೀಕರಣ ಮಾಡಲಾಗಿದೆ. ನಮ್ಮ ಚಿತ್ರದ ಕಥೆ ಬೆಂಗಳೂರಿನಿಂದ ಶುರುವಾಗಿ ಉತ್ತರ ಭಾರತದ ಕಡೆ ಸಾಗುತ್ತದೆ. ಬಹಳಷ್ಟು ರಾಜ್ಯಗಳಲ್ಲಿ ಶೂಟ್ ನಡೆಸಲಾಗಿದೆ. ಕಥೆಯ ಮೂಲ ಪಾತ್ರ ಹೋಗಿ ತಲುಪುವುದು ಹಿಮಾಲಯದಲ್ಲಿ. ಅದಕ್ಕೊಂದು ಉದ್ದೇಶ–ಕಾರಣವಿದೆ. ಅದು ಎಲ್ಲರಿಗೂ ಕನೆಕ್ಟ್ ಆಗುತ್ತದೆ. ಎಲ್ಲೋ ಜೋಗಪ್ಪ ನಿನ್ನ ಅರಮನೆ ಜನಪದ ಹಾಡು, ಶಿವಣ್ಣ ಅಭಿನಯದ ಜೋಗಿ ಸಿನಿಮಾದ ಹಾಡು ಎರಡನ್ನು ಜಸ್ಟಿಫೈ ಮಾಡಿಕೊಂಡು, ಆ ಟೈಟಲ್‌ಗೆ ನಮ್ಮ ಕಥೆ ನ್ಯಾಯ ಸಲ್ಲಿಸುತ್ತದೆ ಎಂದರು.

ನಾಯಕ ಅಂಜನ್ ನಾಗೇಂದ್ರ ಮಾತನಾಡಿ, ಇದು ಜರ್ನಿಯಲ್ಲಿ ನಡೆಯುವ ಕಥೆ. ಅಪ್ಪ–ಮಗನ ಬಾಂಧವ್ಯ ಹೇಳುವ ಈ ಕಥೆಯಲ್ಲಿ ಬೆಂಗಳೂರಿನಿಂದ ಶುರುವಾದ ಜರ್ನಿ ಹಿಮಾಲಯದವರೆಗೆ ಹೋಗುತ್ತದೆ. ಒಂದೊಳ್ಳೆ ಎಮೋಷನಲ್ ಹಾಗೂ ಯೂತ್‌ಫುಲ್ ಎಂಟರ್‌ಟೈನರ್ ಚಿತ್ರ ಎಂದರು. ತಂದೆ ಆಡಿದ ಒಂದು ಮಾತಿಗೆ ಮುನಿಸಿಕೊಂಡು ಮನೆ ಬಿಟ್ಟು ಹೋಗುವ ಹುಡುಗ ಮುಂದೆ ಏನೆಲ್ಲ ಅನುಭವಿಸುತ್ತಾನೆ ಎನ್ನುವುದೇ ಚಿತ್ರದ ಕಾನ್ಸೆಪ್ಟ್, ಲವ್, ಸೆಂಟಿಮೆಂಟ್, ಕಾಮಿಡಿ ಎಲ್ಲವನ್ನೂ ಹದವಾಗಿ ಹೊಂದಿರುವ ಈ ಚಿತ್ರದಲ್ಲಿ ಅಂಜನ್ ನಾಗೇಂದ್ರ ಜೋಡಿಯಾಗಿ ನಟಿ ವೆನ್ಯರೈ ನಟಿಸಿದ್ದು, ಮೂನ್ ವಾಕ್, ಮನಸ್ಮಿತ ಹಾಗೂ ಮಲಯಾಳಂ ಚಿತ್ರದಲ್ಲೂ ನಟಿಸಿರುವ ಸಂಜನಾದಾಸ್ ಮತ್ತೊಂದು ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಉಳಿದಂತೆ ಶರತ್ ಲೋಹಿತಾಶ್ವ, ಸ್ವಾತಿ, ದಾನಪ್ಪ, ಲಕ್ಷ್ಮೀ ನಾಡಗೌಡ, ದಿನೇಶ್ ಮಂಗಳೂರು, ಬಿರಾದರ್ ಪ್ರಮುಖ ತಾರಾಬಳಗದಲ್ಲಿದ್ದಾರೆ.

ಪೆಂಡೋರಾಸ್ ಬಾಕ್ಸ್ ಪ್ರೊಡಕ್ಷನ್ ಹಾಗೂ ಕೃಷ್ಣಛಾಯಾ ಚಿತ್ರ ಬ್ಯಾನರ್‌ನಡಿ ನಿರ್ಮಾಣವಾಗುತ್ತಿರುವ ಈ ಚಿತ್ರಕ್ಕೆ ರವೀಂದ್ರ ಮುದ್ದಿ, ಪ್ರಮೋದ್ ಮರವಂತೆ ಅವರ ಸಾಹಿತ್ಯ, ಭಜರಂಗಿ ಮೋಹನ್ ಅವರ ನೃತ್ಯ ನಿರ್ದೇಶನ, ನರಸಿಂಹ ಸಾಹಸ ನಿರ್ದೇಶನವಿದೆ.


'ರಕ್ಷಾಕ್ಷ' ಮಾಸ್ ಟೀಸರ್ ಬಿಡುಗಡೆ



ವಾಸುದೇವ ಅವರ ನಿರ್ದೇಶನವಿರುವ ಥ್ರಿಲ್ಲರ್ ಚಿತ್ರ ರಕ್ಷಾಕ್ಷ. ಈ ಸಿನಿಮಾದ ಆಕ್ಷನ್ ಟೀಸರ್ ಇತ್ತೀಚೆಗೆ ಬಿಡುಗಡೆಯಾಯಿತು, ಮಾಡೆಲಿಂಗ್ ಲೋಕದಲ್ಲಿ ತನ್ನದೇ ಛಾಪು ಮೂಡಿಸಿರುವ ರೋಹಿತ್ ಮೊದಲ ಬಾರಿಗೆ ನಾಯಕನಾಗಿ ನಟಿಸಿರೋ ಚಿತ್ರವಿದು, 'ರಕ್ಷಾಕ್ಷ' ಎಂದರೆ ರಕ್ತದಂಥ ಕಣ್ಣುಗಳನ್ನು ಹೊಂದಿರುವವನು ಎಂದರ್ಥ. ಇದೊಂದು ರಿವೆಂಜ್ ಸಬ್ಜೆಕ್ಟ್ ಆಗಿದ್ದು, ಚಿತ್ರವೀಗ ಬಿಡುಗಡೆ ಹಂತದಲ್ಲಿದೆ.

ರೋಹಿತ್ ತಮ್ಮದೇ ಆದ ಸಾಯಿ ಪ್ರೊಡಕ್ಷನ್ ಹೌಸ್‌ನಡಿ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ರಕ್ಷಾಕ್ಷ ಸಿನಿಮಾಗೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿರುವ ಎಸ್.ಎನ್.ವಾಸುದೇವ ಅವರಿಗೂ ಇದು ಮೊದಲ ಪ್ರಯತ್ನ. ರೋಹಿತ್ ಜೊತೆ ಒಂದಷ್ಟು ಉತ್ಸಾಹಿ ಪ್ರತಿಭೆಗಳೇ ಸೇರಿ 'ರಕ್ಷಾಕ್ಷ' ಸಿನಿಮಾಗೆ ದುಡಿದಿದ್ದಾರೆ. ಇನ್ನು ಈ ಚಿತ್ರದಲ್ಲಿ 2 ಹಾಡುಗಳಿದ್ದು, ಸುಜಿತ್ ವೆಂಕಟರಾಮಯ್ಯ ಅವರ ಸಾಹಿತ್ಯ, ವೀರೇಂದ್ರ ಡಾಸ್ ಅವರ ಸಂಗೀತ ನಿರ್ದೇಶನವಿದೆ, ವಸಿಷ್ಠ ಸಿಂಹ ಹಾಡಿರುವ ಟೈಟಲ್ ಸಾಂಗ್ ವೈರಲ್ ಆಗಿದೆ, ರೂಪಾ ರಾಯಪ್ಪ, ಅರ್ಚನಾ ಕೊಟ್ಟಿಗೆ, ರಚನಾ ದಶರತ್ ಹೀಗೆ 'ರಕ್ಷಾಕ್ಷ' ಚಿತ್ರದಲ್ಲಿ ಮೂವರು ನಾಯಕಿಯರಿದ್ದಾರೆ. ಚಿತ್ರದ ಖಳನಾಯಕನ ಪಾತ್ರದಲ್ಲಿ ಕಾಂತಾರ ಖ್ಯಾತಿಯ ಪ್ರಮೋದಶೆಟ್ಟಿ ಅಭಿನಯಿಸಿದ್ದಾರೆ. ಸದ್ಯ ತನ್ನ ಟೀಸರ್ ಮೂಲಕವೇ ರಕ್ಷಾಕ್ಷ ಸಿನಿಮಾ ಸಿನಿರಸಿಕರ ನಿರೀಕ್ಷೆಯನ್ನು ದುಪ್ಪಟ್ಟು ಮಾಡಿದೆ.

ಸಿನಿಪದಬಂಧ–484



ಹೆಸರು ______

ವಿಳಾಸ ______

ದೂರವಾಣಿ ಸಂಖ್ಯೆ ______



ವಿಜೇತರು: ಲೋಚನ್.ಬಿ.ನಾಯ್ಡು, S/O, ಪಿ.ವಿ. ಬಾಲಕೃಷ್ಣ, ಪಿವಿಎಸ್ ಪ್ರಾವಿಷನ್ ಸ್ಟೋರ್, ತಾರಕ ರಸ್ತೆ, ಹೆಚ್.ಡಿ.ಕೋಟೆ

ಎಡದಿಂದ ಬಲಕ್ಕೆ

1. 'ಆಸೆಯ ಬಲೆ'ಗೆ ಬಿದ್ದವಳು ನಳನಳಿಸುತ್ತಿದ್ದಾಳೆ !	3
2.ಜಗ್ಗೇಶ್ – ಸಾಂಘವಿ ಅಭಿನಯದ ಚಿತ್ರ	5
5.ಭಾಸ್ಕರ್ ನಿರ್ದೇಶನದಲ್ಲಿ ಗದ್ದಲದ ವಾತಾವರಣ ಸೃಷ್ಟಿಯಾಗಿದೆ	4
6.ಶಿವರಂಜನ್ ಕಳುಹಿಸಿದ ಮೆಸೇಜ್ ದಿಟವಾಗಿದೆ !	5
9. ಬೆಂಗಳೂರಿನಲ್ಲೊಂದು "ಚಿತ್ರಮಂದಿರ" ಪಶ್ಚಿಮ ಭಾಗದಲ್ಲಿದೆ	7
10. ಶಿವರಾಜ್ ಕುಮಾರ್ – ನೀನಾ ಅಭಿನಯದ ಚಿತ್ರ	2
11. ಕಥಾಸಂಗಮದೊಳಗೊಂದು ಸಣ್ಣಕಥೆ ಇದೆ	2
12. ಚೋಮನದುಡಿಯ ಕರ್ತೃ ಜ್ಞಾನ ಪೀಠ ಪ್ರಶಸ್ತಿ ಪುರಸ್ಕೃತರು ಹೌದು !	7
14. ಎ. ಎಂ. ಸಮಿವುಲ್ಲಾ ನಿರ್ದೇಶನದ ಚಿನ್ನದ ನೆಲ	5
15. ಕಾಡುಗಳ್ಳ ವೀರಪ್ಪನ್ ಇಲ್ಲೂ ಕೂಡಾ ಕಾಣಿಸಿಕೊಂಡಿದ್ದನು	4
16.ಈ ನಟ ಜಮ್ಮುಕಾಶ್ಮೀರದಲ್ಲೊಂದು ಜಿಲ್ಲೆ ನೆನಪಿಸುತ್ತಿದ್ದಾನೆ	5
17.ಲೇಖಕಿ ಬಾನು ಮುಸ್ತಾಕ್ ಅವರ ಕಥೆಯಲ್ಲಿನ "ತಾರಾ"	3


ಉಮ್ಮತ್ತೂರು ಇಂದುಶೇಖರ್
ಮೊ.9880820462

ಸಿನಿ ಪದಬಂಧ 483ರ ಉತ್ತರ

ಕಾ	ಲ್ಗೆ	ಜ್ಜೆ			ವಿ	ಜ	ಯೋ	ತ್ಸ	ವ	
ಲಾ			ಗ		ಜ				ತಾ	
ಯ	ಜ್ಞ	ಶೆ	ಟ್ಟಿ		ಯ	ಮ	ಕಿಂ	ಕ	ರ	
ತ			ಮೇ		ನ			ಳ		ಚ
ಸ್ಮ		ಬೆ	ಳ	ದಿಂ	ಗ	ಳ	ಬಾ	ಲೆ		ಲಿ
ಯ	ಕ್ಷ				ರ				ಕಾ	ಸು
ನ		ಅ	ರ	ಳಿ	ದ	ಹೂ	ಗ	ಳು		ವ
ಮಃ		ಮ			ವೀ		ಧಾ			ಮೋ
	ಕು	ಲ	ಶೇ	ಖ	ರ		ಯು	ದ್ಧ	ಕಾಂ	ಡ
	×				ಪು		ದ್ಧ			ಗ
	ಸೀ	ಳು	ನ	ಕ್ಷ	ತ್ರ			ನೆ	ರ	ಳು

ಮೇಲಿನಿಂದ ಕೆಳಕ್ಕೆ

1. ತ್ರಿಮೂರ್ತಿಗಳಲ್ಲಿ ಒಬ್ಬ ಒಂಭೈನೂರು ಲಕ್ಷಕ್ಕೆ ಒಡೆಯ !	8
2.ದೈವಿಕ ದಂಪತಿಗಳಲ್ಲಿ ಆಕೆ ಹುಡುಕಾಟದಲ್ಲಿದ್ದರೆ, ಆತ ನಾಪತ್ತೆಯಾಗಿದ್ದಾನೆ	11
3.ದಿನೇಶ್ ಬಾಬು ನಿರ್ದೇಶನದಲ್ಲಿ ಜಗ್ಗೇಶನಿಗೆ ಸೊಂಡಿಲಿಲ್ಲ !	3
4.ಪಕ್ಷಿಗಳ ಮಧುರವಾದ ಶಬ್ದ	4
7.ಇಲ್ಲಿ ಅಸ್ತವ್ಯಸ್ತಗೊಂಡಿರುವ ನಿರ್ದೇಶಕ ಇನ್ಸಿಲ್ ಇಲ್ಲದೆ ಕೊನೆಯಲ್ಲಿ ಸ್ವಲ್ಪ ಬದಲಾಗಿದ್ದಾನೆ	3
8. ಬೆಳ್ಳಿಮೋಡದ ನಟಿ ಬಿರುದಿನೊಂದಿಗೆ ಇದ್ದಾಳೆ	8
12. ಹ್ಯಾಟ್ರಿಕ್ ಹೀರೋ ಇಲ್ಲಿ ಅಸ್ತವ್ಯಸ್ತ	3
13. _ _ _ _ ರಘು	4
14. "ದೊರೆ" ಪುನೀತ್ ಇಲ್ಲಿ ತಲೆ ಕೆಳಗು	3

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು–570 015

ಮೈಸೂರು ಜಿಲ್ಲೆಯಲ್ಲೇ ಅತೀ ಹೆಚ್ಚು ಹಾಲು ಸರಬರಾಜು ಮಾಡುವ ತಾಲೂಕು ಹುಣಸೂರು

ಶಾಸಕ ಜಿ.ಡಿ.ಹರೀಶ್‌ಗೌಡರಿಂದ ಬಿಎಂಸಿ ಕೇಂದ್ರ ಉದ್ಘಾಟನೆ

ಹುಣಸೂರು, ಜು.27– ಮೈಸೂರು ಜಿಲ್ಲೆಯಲ್ಲೇ ಹುಣಸೂರು ತಾಲೂಕು ಹೆಚ್ಚು ಹಾಲು ಸರಬರಾಜು ಮಾಡುವ ತಾಲೂಕು ಎಂದು ಶಾಸಕ ಜಿ.ಡಿ. ಹರೀಶ್‌ಗೌಡ ತಿಳಿಸಿದ್ದಾರೆ.

ತಾಲೂಕಿನ ಗಾವಡಗೆರೆ ಹೋಬಳಿಯ ಸಣ್ಣೇನಹಳ್ಳಿ ಮತ್ತು ಮರೂರು ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಬಿಎಂಸಿ ಕೇಂದ್ರವನ್ನು ಉದ್ಘಾಟಿಸಿ ಮಾತನಾಡುತ್ತಿದ್ದ ಅವರು, ಜಿಲ್ಲೆಯಲ್ಲೇ ತಾಲೂಕಿನಲ್ಲಿ ಹೆಚ್ಚು ಹಾಲು ಉತ್ಪಾದಕರ ಸಹಕಾರ ಸಂಘಗಳಿದ್ದು, ಇನ್ನುಳಿದ ಗ್ರಾಮಗಳಲ್ಲಿಯೂ ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಸ್ಥಾಪಿಸಲಾಗುವುದು. ಜೊತೆಗೆ ಮರೂರು ಸಂಘದ ಬಿಎಂಸಿ ಕಟ್ಟಡಕ್ಕೆ ಸಂಘವು 8 ಲಕ್ಷ ಹಾಗೂ ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಸಂಸ್ಥೆ 8 ಲಕ್ಷ ಅನುದಾನದಲ್ಲಿ ಕಟ್ಟಡ ನಿರ್ಮಿಸಲಾಗಿದೆ ಎಂದರು.

ರೈತರು ಮೈಮುಲ್ ನೀಡುವ ಸವಲತ್ತುಗಳನ್ನು ಪಡೆದು ಇನ್ನೂ ಹೆಚ್ಚಿನ ಲಾಭ ಗಳಿಸುವಂತಾಗಬೇಕು. ಈ ತಾಲೂಕಿನ ಜನತೆ ಪ್ರಥಮ ಬಾರಿಗೆ ನನ್ನನ್ನು ಶಾಸಕರನ್ನಾಗಿ ಆಯ್ಕೆ ಮಾಡಿದ್ದು, ನಿಮ್ಮ ಋಣ ನನ್ನ ಮೇಲಿದೆ. ನಿಮ್ಮ ಸಮಸ್ಯೆಗಳು ಹಾಗೂ ಕೃತಜ್ಞತೆ ಸಲ್ಲಿಸಲು ಎರಡನೇ ಅವಧಿಗೆ ನಡೆಯುವ ಗ್ರಾಮ ಪಂಚಾಯಿತಿ ಅಧ್ಯಕ್ಷ ಉಪಾಧ್ಯಕ್ಷರ ಚುನಾವಣೆಯ ನಂತರ ಪ್ರತಿ ಗ್ರಾಮಗಳಿಗೆ ಭೇಟಿ ನೀಡಿ ಚುನಾವಣೆ ಸಮಯದಲ್ಲಿ ನೀಡಿದ ಆಶ್ವಾಸನೆಗಳನ್ನು ಹಂತಹಂತವಾಗಿ ಈಡೇರಿಸುವೆ ಎಂದು ಭರವಸೆ ನೀಡಿದರು.

ಕೆಎಂಎಫ್ ನಿರ್ದೇಶಕ ಕೆ.ಎಸ್. ಕುಮಾರ್, ಮೈಮುಲ್ ನಿರ್ದೇಶಕಿ ಶಿವಗಾಮಿ, ಮರೂರು ಡೈರಿ ಅಧ್ಯಕ್ಷ ಹರೀಶ್ ಕಾವಲ್, ಮೈಮುಲ್ ಪ್ರಧಾನ ವ್ಯವಸ್ಥಾಪಕ ಡಾ.ಸಿ. ದಿವಾಕರ್, ಉಪ ವ್ಯವಸ್ಥಾಪಕ ಸಂತೋಷ್, ವಿಸ್ತಾರಣಾಧಿಕಾರಿಗಳಾದ ಗೌತಮ್, ವಸಂತ್, ಗ್ರಾಮ ಪಂಚಾಯಿತಿ ಅಧ್ಯಕ್ಷ ಜವರೇಗೌಡ, ಸಂಘದ ನಿರ್ದೇಶಕರುಗಳಾದ ಅಂಬಿಕಾ, ಸದಾಶಿವ, ಶಫಿವುಲ್ಲಾ, ನಂಜುಂಡ ನಾಯಕ, ವೆಂಕಟೇಶ್, ಶಿವರಾಜ್, ಚಿಕ್ಕಣ್ಣನಾಯಕ,ಸನಾವುಲ್ಲಾ ಸಂಘದ ಮುಖ್ಯ ಕಾರ್ಯನಿರ್ವಾಹಕ ವಸಂತ ಕುಮಾರ್ ಹಾಗೂ ಇಲಾಖೆ ನೌಕರರು ಹಾಜರಿದ್ದರು.



ಹುಣಸೂರು ತಾಲೂಕಿನ ಗಾವಡಗೆರೆ ಹೋಬಳಿಯ ಸಣ್ಣೇನಹಳ್ಳಿ ಮತ್ತು ಮರೂರು ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಬಿಎಂಸಿ ಕೇಂದ್ರವನ್ನು ಶಾಸಕ ಜಿ.ಡಿ. ಹರೀಶ್‌ಗೌಡ ಉದ್ಘಾಟಿಸಿದರು.

ವಿವಿಧ ಗ್ರಾಪಂಗಳಿಗೆ ಅಧ್ಯಕ್ಷ, ಉಪಾಧ್ಯಕ್ಷ ಆಯ್ಕೆ

ಹೆಡತಲೆ ಗ್ರಾಮ ಪಂಚಾಯಿತಿ ಬಿಜೆಪಿ ತೆಕ್ಕೆಗೆ




ನಂಜನಗೂಡು, ಜು.27– ತಾಲೂಕಿನ ಹೆಡತಲೆ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಬಿಜೆಪಿ ಬೆಂಬಲಿತ ಅಭ್ಯರ್ಥಿ ವೃಷಬೇಂದ್ರಪ್ಪ, ಉಪಾಧ್ಯಕ್ಷರಾಗಿ ಗೌರಮ್ಮ ಆಯ್ಕೆಯಾಗಿದ್ದಾರೆ.

21 ಸದಸ್ಯ ಬಲದ ಹೆಡತಲೆ ಗ್ರಾಮ ಪಂಚಾಯಿತಿಯಲ್ಲಿ ಗುರುವಾರ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಗಾದಿಗೆ ಚುನಾವಣೆ ನಡೆಸಲಾಯಿತು. ಅಧ್ಯಕ್ಷ ಸ್ಥಾನ ಸಾಮಾನ್ಯ ವರ್ಗಕ್ಕೆ ಉಪಾಧ್ಯಕ್ಷ ಸ್ಥಾನ ಎಸ್‌ಸಿ ಮಹಿಳೆಗೆ ಮೀಸಲಾಗಿತ್ತು. ಅಧ್ಯಕ್ಷ ಸ್ಥಾನಕ್ಕೆ ಬಿಜೆಪಿ ಬೆಂಬಲಿತ ಅಭ್ಯರ್ಥಿಯಾಗಿ ವೃಷಭೇಂದ್ರಪ್ಪ, ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿ ರಾಜು ನಾಮಪತ್ರ ಸಲ್ಲಿಸಿದ್ದರು. ಬಿಜೆಪಿ ಬೆಂಬಲಿತ ಅಭ್ಯರ್ಥಿ ವೃಷಭೇಂದ್ರಪ್ಪ 11 ಮತಗಳನ್ನು ಪಡೆದು ಅಧ್ಯಕ್ಷರಾಗಿ ಆಯ್ಕೆಯಾದರು. ಪ್ರತಿಸ್ಪರ್ಧಿ ರಾಜು 10 ಮತಗಳನ್ನು ಪಡೆದು ಪರಾಜಿತರಾದರು.

ಉಪಾಧ್ಯಕ್ಷ ಸ್ಥಾನಕ್ಕೆ ಗೌರಮ್ಮ ಹೊರತುಪಡಿಸಿ ಯಾರೊಬ್ಬರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧವಾಗಿ ಆಯ್ಕೆಯಾದರು. ಚುನಾವಣಾಧಿಕಾರಿಯಾಗಿ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಎಇಇ ಚರಿತ ಕಾರ್ಯನಿರ್ವಹಿಸಿದರು.

ಇದೇ ಸಂದರ್ಭದಲ್ಲಿ ತಾಪಂ ಮಾಜಿ ಸದಸ್ಯರಾದ ಮಹದೇವ ನಾಯಕ, ಮುಖಂಡರಾದ ಸಿದ್ದರಾಜು, ಗ್ರಾಪಂ ಸದಸ್ಯರಾದ ಗೀತಾ ವೆಂಕಟೇಶ್, ರತ್ನಮ್ಮ, ಜಯ ಮಹಾದೇವ ನಾಯಕ, ಕರಿಯಯ್ಯ, ಪದ್ಮ, ಸವಿತಾ, ಅನುಷಾ, ಕುಸುಮ, ಸೇರಿದಂತೆ ಬಿಜೆಪಿ ಕಾರ್ಯಕರ್ತರು ಹೆಡತಲೆ ಗ್ರಾಮಸ್ಥರು ಇದ್ದರು.

ನವಿಲೂರು ಗ್ರಾಮ ಪಂಚಾಯಿತಿ ಕಾಂಗ್ರೆಸ್ ತೆಕ್ಕೆಗೆ



ನಂಜನಗೂಡು ತಾಲೂಕಿನ ನವಿಲೂರು ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ರೇವಣ್ಣ, ಉಪಾಧ್ಯಕ್ಷರಾಗಿ ನಿರ್ಮಲ ಪುಟ್ಟಣ್ಣ ಅವಿರೋಧವಾಗಿ ಆಯ್ಕೆಯಾದರು.

21 ಸದಸ್ಯ ಬಲದ ನವಿಲೂರು ಗ್ರಾಮ ಪಂಚಾಯಿತಿಯಲ್ಲಿ ಎರಡನೇ ಅವಧಿಯ ಅಧ್ಯಕ್ಷ ಉಪಾಧ್ಯಕ್ಷ ಗಾದಿಗೆ ಚುನಾವಣೆ ನಡೆಸಲಾಯಿತು. ಅಧ್ಯಕ್ಷ ಸ್ಥಾನ ಪರಿಶಿಷ್ಟ ಜಾತಿಗೆ, ಉಪಾಧ್ಯಕ್ಷ ಸ್ಥಾನ ಸಾಮಾನ್ಯ ಮಹಿಳೆಗೆ ಮೀಸಲಾಗಿತ್ತು. ಅಧ್ಯಕ್ಷ ಸ್ಥಾನಕ್ಕೆ ರೇವಣ್ಣ, ಉಪಾಧ್ಯಕ್ಷ ಸ್ಥಾನಕ್ಕೆ ನಿರ್ಮಲ ಪುಟ್ಟಣ್ಣ ಹೊರತುಪಡಿಸಿ ಬೇರೆ ಯಾರು ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿಯಾಗಿದ್ದ ಲೋಕೋಪಯೋಗಿ ಇಲಾಖೆ ಎಇಇ ಸತ್ಯನಾರಾಯಣ ಅವಿರೋಧ ಆಯ್ಕೆಯನ್ನು ಘೋಷಿಸಿದರು. ಚುನಾವಣೆ ಪ್ರಕ್ರಿಯೆಯಲ್ಲಿ 16 ಜನ ಸದಸ್ಯರು ಹಾಜರಾಗಿದ್ದರು. ಐದು ಸದಸ್ಯರು ಗೈರು ಹಾಜರಾಗಿದ್ದರು.

ಇದೇ ಸಂದರ್ಭದಲ್ಲಿ ಮುಖಂಡರಾದ ತಗಡೂರು ನಾಯಕ, ಲಕ್ಷ್ಮಣ, ಮಾದಪ್ಪ ಕೂಸಪ್ಪ, ಗ್ರಾಪಂ ಸದಸ್ಯರಾದ ಸುಧಾ ಸಿದ್ದರಾಜು, ಜ್ಯೋತಿ ಮಹೇಶ್, ಚಂದ್ರು, ಸಣ್ಣಮ್ಮ, ನಾಗಮ್ಮ, ನಿರ್ಮಲ, ಮಹದೇವ ನಾಯಕ, ನಳಿನಿ, ಪುಟ್ಟಸಂದ್ರಮ್ಮ, ಆನಂದ, ಕೆಂಪರಾಜು ಸೇರಿದಂತೆ ಹಲವಾರು ಪ್ರಮುಖರು ಇದ್ದರು.

ಕುರಿಹುಂಡಿಗೆ ನಾಗಮಣಿ ಅಧ್ಯಕ್ಷೆ, ಮಂಜು ಉಪಾಧ್ಯಕ್ಷ



ಕುರಿಹುಂಡಿ ಗ್ರಾಪಂ ಅಧ್ಯಕ್ಷರಾಗಿ ನಾಗಮಣಿ, ಉಪಾಧ್ಯಕ್ಷರಾಗಿ ಮಂಜು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಗ್ರಾಪಂ ಅವರಣದಲ್ಲಿ ನಡೆದ ಅಧ್ಯಕ್ಷ, ಉಪಾಧ್ಯಕ್ಷ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ನಾಗಮಣಿ, ಉಪಾಧ್ಯಕ್ಷ ಸ್ಥಾನಕ್ಕೆ ಮಂಜು ಮಾತ್ರ ನಾಮಪತ್ರ ಸಲ್ಲಿಸಿದ್ದು, ಯಾರು ನಾಮಪತ್ರ ಸಲ್ಲಿಸದ ಕಾರಣ ಇವರಿಬ್ಬರ ಅವಿರೋಧ ಆಯ್ಕೆಯನ್ನು, ಚುನಾವಣಾಧಿಕಾರಿ ಚಂದ್ರು ಘೋಷಣೆ ಮಾಡಿದ್ದಾರೆ.

ಸದಸ್ಯರುಗಳಾದ ತರಗನಹಳ್ಳಿ ನಂಜುಂಡಸ್ವಾಮಿ, ರತ್ನಮ್ಮ, ರುದ್ರಮ್ಮ, ಶೈಲಜಾ, ಮಣಿ, ಲತಾ, ಚಿಕ್ಕನಂಜಯ್ಯ, ಸಿದ್ದರಾಜು, ಗ್ರಾಪಂ ಮಾಜಿ ಉಪಾಧ್ಯಕ್ಷ ಅನಂದ್, ನಾಗೇಂದ್ರ, ಮಹದೇವು, ರಾಜಶೇಖರಪ್ಪ, ಶಿವಣ್ಣ, ಸುರೇಶ, ಚಾಮರಾಜು, ತಮಣ್ಣೇಗೌಡ, ಸೋಮೇಶ್, ಸೂರ್ಯ ಕುಮಾರ್, ರವಿ, ಮಂಜು, ಶಿವಲಿಂಗ, ಮಹದೇವಸ್ವಾಮಿ, ಭಾಸ್ಕರ್ ಸೇರಿದಂತೆ ಪ್ರಮುಖರು ಹಾಜರಿದ್ದರು.

ಹಾಡ್ಯ ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನ ಕಾಂಗ್ರೆಸ್ ತೆಕ್ಕೆಗೆ



ಮಲ್ಲುಂಡಿ ಸಮೀಪದ ಹಾಡ್ಯ ಗಾಪಂ ಅಧ್ಯಕ್ಷ, ಉಪಾಧ್ಯಕ್ಷರ ಸ್ಥಾನಗಳು ಕಾಂಗ್ರೆಸ್ ಪಾಲಾಗಿವೆ ಗುರುವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಹರೀಶ್‌ಕುಮಾರ್ ಮತ್ತು ಬಿಜೆಪಿ ಬೆಂಬಲಿತ ಅಭ್ಯರ್ಥಿಯಾಗಿ ಮಹದೇವಮ್ಮ ನಾಮಪತ್ರ ಸಲ್ಲಿಸಿದರು. ಹರೀಶ್‌ಕುಮಾರ್ 8 ಮತ ಪಡೆದು ಜಯಶೀಲರಾದರೆ, ಮಹದೇವಮ್ಮ 7 ಮತ ಪಡೆದು ಪರಾಭವಗೊಂಡರು.

ಉಪಾಧ್ಯಕ್ಷ ಸ್ಥಾನಕ್ಕೆ ದಿವ್ಯ ಒಬ್ಬರೇ ನಾಮಪತ್ರ ಸಲ್ಲಿಸಿದ್ದು, ಯಾರು ನಾಮಪತ್ರ ಸಲ್ಲಿಸದ ಕಾರಣ ಅವರು ಅವಿರೋಧವಾಗಿ ಆಯ್ಕೆಯಾದರು. ಇವರ ಆಯ್ಕೆಯನ್ನು ಚುನಾವಣಾಧಿಕಾರಿ ಬೀಮನಾಯಕ್ ಘೋಷಣೆ ಮಾಡಿದರು.

ಕಾಂಗ್ರೆಸ್ ಪಕ್ಷದ ಹಿಂದುಳಿದ ವರ್ಗದ ಜಿಲ್ಲಾಧ್ಯಕ್ಷ ಕೆ.ಮಾರುತಿ, ಗ್ರಾಪಂ ಸದಸ್ಯರುಗಳಾದ ಕೃಷ್ಣಮೂರ್ತಿ, ಸುಂದ್ರಪ್ಪ ಮಂಗಳಮ್ಮ, ಮಹದೇವು, ನಿಂಗಮಣಿ, ಸಾಕಮ್ಮ ಮುಖಂಡರಾದ ಜಯರಾಂ, ಎಸ್ಸಿ ಮೋರ್ಚಾ ಉಪಾಧ್ಯಕ್ಷ ಮಹದೇವು, ರಾಜು, ನಾಗೇಶ ಸೇರಿದಂತೆ ಪ್ರಮುಖರು ಹಾಜರಿದ್ದರು.

ಬಾಕಿ ಪಾವತಿಸಿ ಕಬ್ಬು ಕಟಾವು ಮಾಡುವಂತೆ ಆಗ್ರಹಿಸಿ

ಬಣ್ಣಾರಿ ಕಾರ್ಖಾನೆ, ಉಪ ಕಚೇರಿಗಳಿಗೆ ಬೀಗ ಮುದ್ರೆ

ನಂಜನಗೂಡು, ಜು.27– ಕಬ್ಬಿನ ಬಾಕಿ ಹಣ ಪಾವತಿ ಮಾಡಿಸದೆ ಕಬ್ಬು ಕಟಾವಿಗೆ ಅನುಮತಿ ನೀಡಬಾರದು ಎಂದು ಒತ್ತಾಯಿಸಿ ಬಣ್ಣಾರಿ ಸಕ್ಕರೆ ಕಾರ್ಖಾನೆ, ಉಪ ಕಚೇರಿಗಳಿಗೆ ಬೀಗ ಮುದ್ರೆ ಹಾಕಿ ಕಬ್ಬು ಬೆಳೆಗಾರರ ಸಂಘದ ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು.

ಕಬ್ಬು ಬೆಳೆಗಾರರ ಸಂಘದ ಜಿಲ್ಲಾಧ್ಯಕ್ಷ ಹಳ್ಳಿ ಕೆರೆಹುಂಡಿ ಭಾಗ್ಯರಾಜ್ ಮಾತನಾಡಿ, ಕಳೆದ ವರ್ಷದ ಬಾಕಿ ಹಣ ಒಂದು ಟನ್ ಕಬ್ಬಿಗೆ 150 ರೂ.ಗಳನ್ನು ನೀಡಿ ನಂತರ ಕಾರ್ಖಾನೆ ಕಬ್ಬು ಅರೆಯುವುದನ್ನು ಪ್ರಾರಂಭ ಮಾಡಬೇಕು. ಈ ಸಂಬಂಧ ಜುಲೈ 24ರಂದು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಬೆಂಬಲ ಬೆಲೆ ನೀಡುವಂತೆ ಜಿಲ್ಲಾಧಿಕಾರಿಗಳು ಆದೇಶ ನೀಡಿದ್ದರೂ ಸಹ ಕಾರ್ಖಾನೆಯವರು ಹಣ



ನೀಡದೆ ರೈತರನ್ನು ವಂಚಿಸುತ್ತಿದ್ದಾರೆ ಎಂದರು.

ಕಾರ್ಖಾನೆಯವರು ಕಳೆದ ವರ್ಷದ ಬಾಕಿ ಹಣವನ್ನು ನೀಡಿ ಕಬ್ಬು ಅರೆಯುವುದನ್ನು ಪ್ರಾರಂಭಿಸಬೇಕು ಈ ಬಗ್ಗೆ ನಾಳೆಯೊಳಗೆ ಬಾಕಿ ಹಣ ನೀಡಲು ಕ್ರಮ ಕೈಗೊಳ್ಳದಿದ್ದಲ್ಲಿ ಕಾರ್ಖಾನೆ ವಿರುದ್ಧ ಉಗ್ರ ಪ್ರತಿಭಟನೆ ರೂಪಿಸುವುದಾಗಿ ಎಚ್ಚರಿಸಿದರು. ಪ್ರತಿಭಟನೆಯಲ್ಲಿ ದೇವನೂರು ನಾಗೇಂದ್ರ ವಿಜಯೇಂದ್ರ ಸಿದ್ದಲಿಂಗಪ್ಪ, ದೊರೆಸ್ವಾಮಿ, ಸೋಮಣ್ಣ, ಶಿವರಾಜು, ಮಲ್ಲೇಶ್ ಪದಾಧಿಕಾರಿಗಳು ಇದ್ದರು.

ಸರಗೂರು ಪಟ್ಟಣದ ಸಮಸ್ಯೆ ಹಂತ ಹಂತವಾಗಿ ನಿವಾರಣೆ

ಸರಗೂರು, ಜು.27– ಪಟ್ಟಣದಲ್ಲಿರುವ ಹಲವಾರು ಸಮಸ್ಯೆಗಳನ್ನು ಹಂತ–ಹಂತವಾಗಿ ಬಗೆಹರಿಸಲಾಗುವುದು ಎಂದು ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಮಂಜುನಾಥ್ ತಿಳಿಸಿದ್ದಾರೆ.

ಪಟ್ಟಣದ 4ನೇ ವಾರ್ಡ್‌ನಲ್ಲಿ ಸಿ.ಸಿ. ರಸ್ತೆ ಕಾಮಗಾರಿ ಪರಿಶೀಲಿಸಿ ಮಾತನಾಡಿದ ಅವರು, 2021–22 ಸಾಲಿನ 15ನೇ ಹಣಕಾಸು ಯೋಜನೆಯ 2 ಲಕ್ಷ ಅನುದಾನದಲ್ಲಿ 51 ಮೀಟರ್ ಸಿ.ಸಿ.ರಸ್ತೆ ಕಾಮಗಾರಿ ಮಾಡುತ್ತಿದ್ದು, ಹೆಚ್ಚು ವರ್ಷಗಳು ಬಾಳಿಕೆ ಬರುವ ಹಾಗೆ ಗುಣಮಟ್ಟದ ಕಾಮಗಾರಿ ಮಾಡಲು ಗುತ್ತಿಗೆದಾರರಿಗೆ ತಿಳಿಸಿದರು. ಸರ್ಕಾರದ ಅನುದಾನ ಬಂದ ನಂತರ ಎಲ್ಲಾ 12 ವಾರ್ಡ್‌ಗಳ ಮೂಲಸೌಕರ್ಯಕ್ಕೆ ಆದ್ಯತೆ ನೀಡಲಾಗುವುದು ಎಂದರು. 4ನೇ ವಾರ್ಡ್ ಸದಸ್ಯ ಎಸ್.ಎಲ್.ರಾಜಣ್ಣ, ಪಪಂ ಅಧ್ಯಕ್ಷೆ ರಾಧಿಕಾ ಶ್ರೀನಾಥ್, ಉಪಾಧ್ಯಕ್ಷ ವಿನಾಯಕ ಪ್ರಸಾದ್, ಸದಸ್ಯರಾದ ಶ್ರೀನಿವಾಸ್, ನೂರಾಳಸ್ವಾಮಿ, ಚಲುವಕೃಷ್ಣ ಮುಖಂಡರಾದ ರಾಮು, ನವೀನ್ ಕುಮಾರ್, ಪುಟ್ಟಿ ಹನುಮಯ್ಯ, ಇಂಜಿನಿಯರ್ ರಮೇಶ್, ಗುತ್ತಿಗೆದಾರ ಕಾತಾಯಕ ಭಾಗವಹಿಸಿದ್ದರು.

ಬೈಕ್‌ನಿಂದ ಬಿದ್ದು ವ್ಯಕ್ತಿಗೆ ಗಾಯ

ಕಾಂಕ್ರಿಟ್ ರಸ್ತೆಯಲ್ಲಿ ಕೆಸರು ನಿಂತಿರುವುದೇ ದುರಂತಕ್ಕೆ ಕಾರಣ



ಹೆಚ್.ಡಿ.ಕೋಟೆ, ಜು.27– ಕೆಲಸಕ್ಕೆ ತೆರಳುತ್ತಿದ್ದ ವ್ಯಕ್ತಿಯೊಬ್ಬರು ಬೈಕ್‌ನಿಂದ ಬಿದ್ದು, ಗಾಯಗೊಂಡಿರುವ ಘಟನೆ ತಾಲೂಕಿನ ಶಿರಮಳ್ಳಿ ಗ್ರಾಮದ ಬಳಿ ಸಂಭವಿಸಿದೆ

ತಾಲೂಕಿನ ಬೀಚನಹಳ್ಳಿ ಗ್ರಾಮದ ನಿವಾಸಿ ಲಕ್ಷ್ಮಣ ಎಂಬುವರೇ ಗಾಯಗೊಂಡರು. ಅವರು ಹ್ಯಾಂಡ್ ಪೋಸ್ಟ್‌ನಿಂದ ಬೀಚನಹಳ್ಳಿ ಗ್ರಾಮಕ್ಕೆ ತೆರಳುತ್ತಿದ್ದ ಸಂದರ್ಭದಲ್ಲಿ ಶಿರಮಳ್ಳಿ ಗ್ರಾಮದ ಬಳಿ ಬೈಕ್‌ನಿಂದ ಬಿದ್ದು ಕಾಲು ಮತ್ತು ಕೈಗಳಿಗೆ ಗಂಭೀರ ಸ್ವರೂಪದ ಗಾಯಗಳಾಗಿವೆ. ರಸ್ತೆ ಬದಿಯಲ್ಲಿ ಬಿದ್ದಿದ್ದ ಲಕ್ಷ್ಮಣ ಅವರನ್ನು ಶಿರಮಳ್ಳಿ ಗ್ರಾಮಸ್ಥರು ತಕ್ಷಣ ಹೆಚ್.ಡಿ. ಕೋಟೆ ಸರ್ಕಾರಿ ಆಸ್ಪತ್ರೆಗೆ ಕರೆ ತಂದು ಚಿಕಿತ್ಸೆ ಕೊಡಿಸಿ ವೈದ್ಯರ ಸಲಹೆ ಮೇರೆಗೆ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಕರೆದೊಯ್ದು ದಾಖಲಿಸಿದರು. ಶಿರಮಳ್ಳಿ ಸರ್ಕಲ್‌ನಿಂದ ಕಬಿನಿ ಜಲಾಶಯದವರೆಗೆ ನಿರ್ಮಾಣವಾಗುತ್ತಿರುವ ಕಾಂಕ್ರೀಟ್ ರಸ್ತೆ ಕಾಮಗಾರಿ ಸಂಪೂರ್ಣಗೊಳ್ಳದ ಹಿನ್ನೆಲೆಯಲ್ಲಿ ರಸ್ತೆ ಮಧ್ಯದಲ್ಲೇ ಹೆಚ್ಚು ಕೆಸರು ನಿಂತಿದ್ದು ಈ ದುರಂತಕ್ಕೆ ಕಾರಣವೆಂದು ಗ್ರಾಮಸ್ಥರು ತಿಳಿಸಿದ್ದಾರೆ.

ಕಾಮಗಾರಿ ಪೂರ್ಣಗೊಳ್ಳದ ಕಾರಣ ಕೆಸರು ನಿಂತಿದೆ. ಇದನ್ನು ತೆರವುಗೊಳಿಸಿ ಅನಾಹುತಗಳನ್ನು ತಪ್ಪಿಸಿ, ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಿಕೊಡಬೇಕು. ಜೊತೆಗೆ ಅಪಘಾತದಲ್ಲಿ ಗಾಯಗೊಂಡಿರುವ ಲಕ್ಷ್ಮಣ ಅವರಿಗೆ ಪರಿಹಾರ ಕೊಡಬೇಕೆಂದು ಕಬಿನಿ ನೀರಾವರಿ ಅಧಿಕಾರಿಗಳಿಗೆ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಹಲಗನಹಳ್ಳಿ ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನ ಕಾಂಗ್ರೆಸ್ ಪಾಲು

ಬೆಟ್ಟದಪುರ, ಜು.27– ಕಳೆದ ಅವಧಿಯಲ್ಲಿ ಜೆಡಿಎಸ್ ಪಕ್ಷ ಬೆಂಬಲಿಸಿದ್ದ ಪಂಚಾಯತಿ ಸದಸ್ಯರು ಈ ಬಾರಿ ಸಚಿವ ಕೆ.ವೆಂಕಟೇಶ್ ಅವರ ನಾಯಕತ್ವವನ್ನು ಮೆಚ್ಚಿ ಕಾಂಗ್ರೆಸ್ ಸೇರಿದ್ದರಿಂದ ಹಲಗನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಉಪಾಧ್ಯಕ್ಷರ ಸ್ಥಾನ ಕಾಂಗ್ರೆಸ್ ಪಕ್ಷದ ಪಾಲಾಗಿದೆ.

ಪಶುಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್ ಅವರ ಮಾರ್ಗದರ್ಶನದಲ್ಲಿ ಹಾಗೂ ಪಂಚಾಯಿತಿ ಸದಸ್ಯರ ಸಹಕಾರದಿಂದ ಅಧ್ಯಕ್ಷರಾಗಿ ಸುರಗಳ್ಳಿ ಗ್ರಾಮದ



ವೀಣಾ ವೆಂಕಟೇಶ್, ಉಪಾಧ್ಯಕ್ಷರಾಗಿ ರಾಜನ ಬಿಳಿ ಗೂಳಿ ಗ್ರಾಮದ ಮೀನಾಕ್ಷಿ ಜಗದೀಶ್ ಆಯ್ಕೆಯಾಗಿದ್ದು ಕಾಂಗ್ರೆಸ್ ಕಾರ್ಯಕರ್ತರಲ್ಲಿ ಸಂತಸ ಮೂಡಿಸಿದೆ.

ತಾಪಂ ಮಾಜಿ ಸದಸ್ಯ ಶಂಕರೇಗೌಡ, ಗ್ರಾಪಂ ಸದಸ್ಯರಾದ ಸೋಯಲ್ ಪಾಷಾ, ರಫೀಕ್ ಅಹಮದ್, ನಜೀಬ್ ಖಾನ್, ವಸಂತ, ಪದ್ಮ, ನೂರ್ ಅಸ್ಮ, ಸನೂಬಿಯ, ಆರ್ಟಿ ವೆಂಕಟೇಶ್, ಶಫೀರ್ ಅಹ್ಮದ್, ಸುರೇಶ್, ನಾಗಮ್ಮ, ಕುಮಾರ, ಗೀತಾ, ಪುಟ್ಟಸ್ವಾಮಿಗೌಡ, ವಸಂತ, ಮುಖಂಡರಾದ ಚಂದ್ರಶೇಖರ್, ನಂಜುಂಡೇಗೌಡ, ರವೀಂದ್ರ, ಪಿಡಿಒ ರವಿಕುಮಾರ್ ಹಾಗೂ ಪಂಚಾಯತಿ ಸಿಬ್ಬಂದಿ ಸೇರಿದಂತೆ ನೂರಾರು ಕಾಂಗ್ರೆಸ್ ಕಾರ್ಯಕರ್ತರು ಹಾಜರಿದ್ದರು.



ಮೈಸೂರು ತಾಲೂಕು ಕೀಳನಪುರ ಗ್ರಾಮ ಪಂಚಾಯತಿ ನೂತನ ಅಧ್ಯಕ್ಷರಾಗಿ ಚಟ್ನಹಳ್ಳಿ ಪಾಳ್ಯದ ನಂಜುಂಡಸ್ವಾಮಿ.ಪಿ 14 ಮತಗಳನ್ನು ಪಡೆದು ಆಯ್ಕೆಗೊಂಡಿದ್ದು, ಎಪಿಎಂಸಿ ಮಾಜಿ ಅಧ್ಯಕ್ಷ ಬೀರೇಗೌಡ, ಮಾಜಿ ತಾಪಂ ಸದಸ್ಯರಾದ ಬಿ.ಮಹದೇವಪ್ಪ, ಪಟೇಲ್ ಮಹದೇವಪ್ಪ, ಪಿ.ಎಂ.ಗುರುಸ್ವಾಮಿ, ವಕೀಲರಾದ ಪಾಳ್ಯ ಸುರೇಶ್, ಶಿವಪ್ರಸಾದ್, ಮಂಜು ಪ್ರಕಾಶ್, ದುದ್ದಗೆರೆ ಗುರುಸ್ವಾಮಿ ಅವರುಗಳು ಅಭಿನಂದಿಸಿದರು.

ಮನೆಗಳಿಗೆ ನುಗ್ಗುತ್ತಿರುವ ಚರಂಡಿ ನೀರು, ಗಮನಿಸದ ಅಧಿಕಾರಿಗಳು

ತಿ.ನರಸೀಪುರದಲ್ಲಿ ಸುಜ್ಜಲೂರು ಗ್ರಾಮಸ್ಥರ ಪ್ರತಿಭಟನೆ

ತಿ.ನರಸೀಪುರ, ಜು.27– ತಾಲೂಕಿನ ಸುಜ್ಜಲೂರು ಗ್ರಾಮದಲ್ಲಿ ಅವೈಜ್ಞಾನಿಕವಾಗಿ ಸಿಮೆಂಟ್ ರಸ್ತೆ ಮತ್ತು ಚರಂಡಿಯನ್ನು ನಿರ್ಮಿಸಿರುವುದರಿಂದ ದಲಿತರ ಕಾಲೋನಿಯಲ್ಲಿ ಚರಂಡಿ ನೀರು ನಿಂತು ಮನೆಗಳಿಗೆ ನುಗ್ಗುತ್ತಿದ್ದು, ಅಧಿಕಾರಿಗಳು ಗಮನಹರಿಸುತ್ತಿಲ್ಲ ಎಂದು ಆಪಾದಿಸಿ ಗ್ರಾಮ ಸ್ಥರು ದಲಿತ ಸಂಘರ್ಷ ಸಮಿತಿ ನೇತೃತ್ವದಲ್ಲಿ ಗುರುವಾರ ತಾಲೂಕು ಪಂಚಾಯಿತಿಯ ಮುಂಭಾಗ ಪ್ರತಿಭಟನೆ ನಡೆಸಿದರು.

ಪಟ್ಟಣದತಾಲೂಕು ಪಂಚಾಯಿತಿ ಮುಂಭಾಗ ಜಮಾವಣೆಗೊಂಡಿದ್ದ ಗ್ರಾಮಸ್ಥರು ತಾಂತ್ರಿಕ ಉಪ ವಿಭಾಗದ ಅಧಿಕಾರಿಗಳು ತರಾತುರಿಯಲ್ಲಿ ಅವೈಜ್ಞಾನಿಕವಾಗಿ ಸಿಮೆಂಟ್ ರಸ್ತೆ ಮತ್ತು ಚರಂಡಿಯನ್ನು ನಿರ್ಮಿಸಿದ ಪರಿಣಾಮ ವರ್ಷಗಳಿಂದಲೂ ಚರಂಡಿಯ ನೀರು ದಲಿತರ ಕಾಲೋನಿಯಲ್ಲಿಯೇ ನಿಲ್ಲುತ್ತಿದೆ. ನಿಂತ ನೀರು ದಲಿತರ ಕಾಲೋನಿಯ ಮನೆಗಳಿಗೆ ನುಗ್ಗುತ್ತಿದ್ದರೂ ಸಮಸ್ಯೆಯನ್ನು ಆಲಿಸಿ ಸರಿಪಡಿಸದಿರುವ ಅಧಿಕಾರಿಗಳ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಪ್ರತಿ ಭಟನಾ ಧರಣಿಯನ್ನು ಪ್ರಾರಂಭಿಸಿದರು.



ಪ್ರತಿಭಟನೆ ನೇತೃತ್ವ ವಹಿಸಿದ್ದ ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್ ಮಾತನಾಡಿ, ಸುಜ್ಜಲೂರು ಗ್ರಾಮದ ದಲಿತರ ಬದುಕು ಗಬ್ಬೆದ್ದು ನಾರುತ್ತಿರುವ ಚರಂಡಿ ನೀರಿನಿಂದ ಅಸಹನೀಯವಾಗಿದೆ. ಸೊಳ್ಳೆ ಇನ್ನಿತರ ಕೀಟಗಳ ಹಾವಳಿಯಿಂದ ತೊಂದರೆಯಾಗುತ್ತಿರುವ ಬಗ್ಗೆ ಹಲವು ಬಾರಿ ದೂರುಗಳನ್ನು ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಚರಂಡಿ ನೀರು ಹರಿದು ಹೋಗಲು ಅನುವು ಮಾಡಿಕೊಡುವವರೆಗೂ ಪ್ರತಿಭಟನಾ ಧರಣಿಯನ್ನು ಹಿಂದಕ್ಕೆ ಪಡೆಯಲ್ಲ ಎಂದು ತಿಳಿಸಿದರು.

ಉನ್ನತ ಮಟ್ಟದ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ ಅವೈಜ್ಞಾನಿಕ ಚರಂಡಿ ನಿರ್ಮಾಣ ಮಾಡಿರುವ ಅಧಿಕಾರಿಗಳು ಹಾಗೂ ಸಂಸ್ಥೆಯನ್ನು, ಸರಿಪಡಿಸದ ಪಂಚಾಯಿತಿ ಆಡಳಿತದ ವಿರುದ್ಧ ಗಂಭೀರ ಕ್ರಮವನ್ನು ತೆಗೆದುಕೊಳ್ಳುವವರೆಗೂ ಹೋರಾಟ ಮುಂದುವರೆಯಲಿದೆ. ಅಧಿಕಾರಿಗಳ ನಿರ್ಲಕ್ಷ್ಯ ಹೀಗೆ ಮುಂದುವರೆದರೆ ತಾಲೂಕು ಪಂಚಾಯಿತಿ ಕಚೇರಿಗೆ ಬೀಗ ಜಡಿದು ಮುತ್ತಿಗೆ ಹಾಕಬೇಕಾಗುತ್ತದೆ ಎಂದು ಎಚ್ಚರಿಸಿದರು. ಪ್ರತಿಭಟನೆಯ ಹಿನ್ನೆಲೆಯಲ್ಲಿ ಸ್ಥಳಕ್ಕಾಗಮಿಸಿದ ಕಾರ್ಯನಿರ್ವಾಹಕ ಅಧಿಕಾರಿ ಕುಲದೀಪ್, ಜಿಪಂ ತಾಂತ್ರಿಕ ಉಪ ವಿಭಾಗದ ಎಇಇ ದೇವರಾಜು, ಸಮಾಜ ಕಲ್ಯಾಣ ಅಧಿಕಾರಿ ರಾಮೇಗೌಡ ಹಾಗೂ ಪಿಎಸ್‌ಐ ತಿರುಮಲ್ಲೇಶ್ ಅವರು ನಾಳೆಯಿಂದಲೇ ತಾತ್ಕಾಲಿಕವಾಗಿ ಇಂಗು ಗುಂಡಿ ತೆರೆದು, ನಿಲ್ಲುತ್ತಿರುವ ಚರಂಡಿ ನೀರನ್ನು ತೆರವುಗೊಳಿಸುತ್ತೇವೆ. ಬಳಿಕ ಕಂದಾಯ ಇಲಾಖೆಯ ಜೊತೆಗೂಡಿ ಭೂಸ್ವಾಧೀನ ಪ್ರಕ್ರಿಯೆಯನ್ನು ಆರಂಭಿಸಿ, ಸಮಸ್ಯೆಯನ್ನು ಪರಿಹರಿಸಲಾಗುವುದು ಎಂದು ಮುಚ್ಚಳಿಕೆ ಬರೆದುಕೊಟ್ಟು ಪ್ರತಿಭಟನಾಕಾರರ ಮನವೊಲಿಸಿದರು.

ಪ್ರತಿಭಟನೆಯಲ್ಲಿ ದಸಂಸ ತಾಲೂಕು ಸಂಚಾಲಕರಾದ ಯಾಚೇನಹಳ್ಳಿ ಸೋಮಶೇಖರ್, ಕುಕ್ಕೂರು ರಾಜು, ಮುಖಂಡರಾದ ಹಿರಿಯೂರು ಸೋಮಣ್ಣ, ಸುಜ್ಜಲೂರು ಶಿವಯ್ಯ, ಎಂ.ನಾಗರಾಜಮೂರ್ತಿ, ಶಾಂತ ಕುಮಾರ, ಶಿವು, ಬನ್ನಳ್ಳಿ ಹುಂಡಿ ಉಮೇಶ್, ಶಿವಣ್ಣ, ಎನ್. ಕುಮಾರ, ನಿಂಗರಾಜು, ಎಂ. ದೊರೆಸ್ವಾಮಿ, ಮಂಜು, ನವೀನ್‌ಕುಮಾರ್, ಬಿ.ಮಹದೇವ ಹಾಗೂ ಇನ್ನಿತರರು ಹಾಜರಿದ್ದರು.

ಗ್ರಾಮಕ್ಕೆ ಅಧಿಕಾರಿಗಳ ಭೇಟಿ

ಸುಜ್ಜಲೂರು ಗ್ರಾಮದಲ್ಲಿನ ದಲಿತರ ಕೇರಿಯಲ್ಲಿ ನಿಲ್ಲುತ್ತಿರುವ ಚರಂಡಿ ನೀರಿನ ಸಮಸ್ಯೆ ಗಂಭೀರ ಸ್ವರೂಪ ಪಡೆಯುತ್ತಿರುವ ಹಿನ್ನೆಲೆಯಲ್ಲಿ ಗ್ರಾಮಕ್ಕೆ ಕಾರ್ಯನಿರ್ವಾಹಕ ಅಧಿಕಾರಿ ಕುಲದೀಪ್, ಜಿ.ಪಂ ತಾಂತ್ರಿಕ ಉಪ ವಿಭಾಗದ ಎಇಇ ದೇವರಾಜು, ಸಮಾಜ ಕಲ್ಯಾಣ ಅಧಿಕಾರಿ ರಾಮೇಗೌಡ ಹಾಗೂ ಪಿಎಸ್‌ಐ ತಿರುಮಲ್ಲೇಶ್ ಅವರಿದ್ದ ಅಧಿಕಾರಿಗಳ ತಂಡ ಸ್ಥಳ ಪರಿಶೀಲನೆ ನಡೆಸಿತು. ಭೂ ಸ್ವಾದೀನ ಪ್ರಕ್ರಿಯೆ ಸಂಬಂಧ ವಾಟಾಳು ಗ್ರಾಮ ಪಂಚಾಯಿತಿ ಪಿಡಿಓ ಸೇರಿದಂತೆ ಕಂದಾಯ ಇಲಾಖೆಯ ಆರ್‌ಐ ಹಾಗೂ ವಿಎ ಅವರಿಂದಲೂ ಮಾಹಿತಿಯನ್ನು ಪಡೆಯಿತು.

ಮಳೆ, ಭೂಕುಸಿತ: ಉತ್ತರಾಖಂಡ, ಹಿಮಾಚಲದಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಿಸಲು ಕೇಂದ್ರ ಚಿಂತನೆ

ನವದೆಹಲಿ, ಜು.27– ಭಾರಿ ಮಳೆ ಮತ್ತು ಭೂಕುಸಿತದಿಂದ ಪದೇಪದೆ ರಸ್ತೆಗಳು ಕೊಚ್ಚಿ ಹೋಗುತ್ತಿದ್ದು, ಪ್ರಕೃತಿ ವಿಕೋಪಕ್ಕೆ ತುತ್ತಾಗುವ ಪ್ರದೇಶಗಳಲ್ಲಿ ಕಾಂಕ್ರೀಟ್ ರಸ್ತೆಗಳನ್ನು ನಿರ್ಮಿಸಲು ಕೇಂದ್ರ ಸರ್ಕಾರ ಯೋಜಿಸುತ್ತಿದೆ.

ಈ ಸಂಬಂಧ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ತಜ್ಞರ ಸಮಿತಿ ರಚಿಸಲಿದೆ ಮತ್ತು ನೈಸರ್ಗಿಕ ವಿಕೋಪಗಳಿಗೆ ತುತ್ತಾಗುವ ಪ್ರದೇಶಗಳಲ್ಲಿ ಕಾಂಕ್ರೀಟ್ ರಸ್ತೆಗಳನ್ನು ನಿರ್ಮಿಸುವ ಸಾಧ್ಯತೆಯನ್ನು ಪರಿಶೀಲಿಸಲು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಹೊಸ ವಿಭಾಗವನ್ನು ತೆರೆಯಲಿದೆ ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರು ಗುರುವಾರ ಹೇಳಿದ್ದಾರೆ.

"ಅತಿವೃಷ್ಟಿ ಮತ್ತು ಭೂಕುಸಿತಕ್ಕೆ ಒಳಗಾಗುವ ಪ್ರದೇಶಗಳಲ್ಲಿ ಅಂತರಾಷ್ಟ್ರೀಯ ನಿಯಮಗಳ ಪ್ರಕಾರ ರಸ್ತೆಗಳು, ಸೇತುವೆಗಳು ಮತ್ತು ಸುರಂಗಗಳನ್ನು ನಿರ್ಮಿಸುವ ಅವಶ್ಯಕತೆಯಿದೆ. ನಾವು ಕಾಂಕ್ರೀಟ್ ರಸ್ತೆಗಳನ್ನು ನಿರ್ಮಿಸುವುದಕ್ಕೆ ಆದ್ಯತೆ ನೀಡುತ್ತೇವೆ" ಎಂದು ಗಡ್ಕರಿ ತಿಳಿಸಿದ್ದಾರೆ.

ಕಾಂಕ್ರೀಟ್ ರಸ್ತೆಗಳು ಟಾರ್ ರಸ್ತೆಗಳಿಗಿಂತ ಹೆಚ್ಚು ಬಾಳಿಕೆ ಬರುತ್ತವೆ ಮತ್ತು ಹವಾಮಾನ ವೈಪರೀತ್ಯಗಳನ್ನು ಎದುರಿಸುವ ಸಾಮರ್ಥ್ಯ ಹೊಂದಿರುತ್ತವೆ ಎಂದು ಅವರು ಹೇಳಿದ್ದಾರೆ.

ಎನ್‌ಡಿಟಿವಿ ಪ್ರಕಾರ, ರಾಜ್ಯದಲ್ಲಿ ಹಾಳಾದ ರಸ್ತೆಗಳು ಮತ್ತು ರಾಷ್ಟ್ರೀಯ ಹೆದ್ದಾರಿಗಳನ್ನು ಸಂಪರ್ಕಿಸುವ ಸೇತುವೆಗಳನ್ನು ಮರುನಿರ್ಮಾಣ ಮಾಡಲು ಕೇಂದ್ರ ಸರ್ಕಾರ 300 ಕೋಟಿ ರೂಪಾಯಿ ಮಂಜೂರು ಮಾಡುವುದಾಗಿ ಗಡ್ಕರಿ ಭರವಸೆ ನೀಡಿದ್ದಾರೆ ಎಂದು ಕಳೆದ ವಾರ ಹಿಮಾಚಲ ಪ್ರದೇಶದ ಲೋಕೋಪಯೋಗಿ ಇಲಾಖೆ ಸಚಿವ ವಿಕ್ರಮಾದಿತ್ಯ ಸಿಂಗ್ ಅವರು ತಿಳಿಸಿದ್ದರು.

ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಹೆಚ್ಚುವರಿ ಆಯುಕ್ತರ ಕಛೇರಿ, ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಸಂಖ್ಯೆ:ಮೈನಪಾ/ಹೆ.ಆ.ಕ/ಟೆಂ.ಪ್ರ/ಹೊ.ಯಂ./5/2022–23 ದಿನಾಂಕ: 24.07.2023

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಮೈಸೂರು ಮಹಾನಗರ ಪಾಲಿಕೆಯ ಶೇ.24.10 ಶೇ.7.25ರ ಎಸ್.ಎಫ್.ಸಿ ಹಾಗೂ ಪಾಲಿಕೆ ಅನುದಾನದಡಿ ಟೆಂಡರ್‌ಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

ಕ್ರ ಸಂ.	ವಿವರ	ಟೆಂಡರ್ ಪ್ರಕಟಣೆ ಸಂಖ್ಯೆ	ಒಟ್ಟು ಕಾಮಗಾರಿಗಳು	(ಇ–ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ:	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ
1.	ಶೇ. 24.10 ಹಾಗೂ ಶೇ. 7.25ರ ಅನುದಾನದಡಿ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಪರಿಶಿಷ್ಟ ಜಾತಿ / ಪಂಗಡ ಮತ್ತು ಇತರೆ ಬಡ ಜನರಿಗೆ ಅನುಕೂಲವಾಗಲು ಹೊಲಿಗೆ ಯಂತ್ರಗಳನ್ನು ಫಲಾನುಭವಿಗಳಿಗೆ ಖರೀದಿಸಿ ನೀಡುವುದು.	DMA/2023-24/IND0227	1	24.07.2023	02.08.2023 ಸಂಜೆ 5:00 ಗಂಟೆಗೆ	04.08.2023 ಬೆಳಗ್ಗೆ 11.00 ಗಂಟೆಗೆ
2.		DMA/2023-24/IND0228	1	24.07.2023	02.08.2023 ಸಂಜೆ 5:00 ಗಂಟೆಗೆ	04.08.2023 ಬೆಳಗ್ಗೆ 11.00 ಗಂಟೆಗೆ
3.		DMA/2023-24/IND0229	1	24.07.2023	02.08.2023 ಸಂಜೆ 5:00 ಗಂಟೆಗೆ	04.08.2023 ಬೆಳಗ್ಗೆ 11.00 ಗಂಟೆಗೆ
4.		DMA/2023-24/IND0230	1	24.07.2023	02.08.2023 ಸಂಜೆ 5:00 ಗಂಟೆಗೆ	04.08.2023 ಬೆಳಗ್ಗೆ 11.00 ಗಂಟೆಗೆ
5.		DMA/2023-24/IND0231	1	24.07.2023	02.08.2023 ಸಂಜೆ 5:00 ಗಂಟೆಗೆ	04.08.2023 ಬೆಳಗ್ಗೆ 11.00 ಗಂಟೆಗೆ

ಇ–ಪೋರ್ಟಲ್ ಮುಖಾಂತರ ದ್ವಿಲಕೋಟೆ ಡಾಕ್ಯುಮೆಂಟ್ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಿದ್ದು, ಅರ್ಹ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನ (https://kppp.karnataka.gov.in) ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. ಮೇಲ್ಕಂಡಂತೆ ನಿಗಧಿಪಡಿಸಿದ ಇ.ಎಂ.ಡಿ. ಟೆಂಡರ್ ಮಾನ್ಯ ಸಮ್ಮತ ಮಾನ್ಯತೆ ಅವಧಿಗಿಂತ (Validity period) 90 ದಿನಗಳ ನಂತರದ ಅವಧಿವರೆಗೆ ಮಾನ್ಯತೆ ಇರತಕ್ಕದ್ದು. ಟೆಂಡರ್ ಸಲ್ಲಿಸುವ ಗುತ್ತಿಗೆದಾರರು ತಮ್ಮ ಗುತ್ತಿಗೆ ರಹದಾರಿ ಪ್ರತಿ, ತಮ್ಮ ಅಂಚೆ ವಿಳಾಸ, ಮೊಬೈಲ್ ದೂರವಾಣಿ ಸಂಖ್ಯೆಯನ್ನು ಈ ಪೋರ್ಟಲ್‌ನಲ್ಲಿ ಸಲ್ಲಿಸುವುದು. ಹೆಚ್ಚಿನ ವಿವರಗಳನ್ನು ಕಚೇರಿ ಸಮಯದಲ್ಲಿ ಮೈಸೂರು ಮಹಾನಗರ ಪಾಲಿಕೆ ಹೆಚ್ಚುವರಿ ಆಯುಕ್ತರ ಕಚೇರಿಯನ್ನು ಸಂಪರ್ಕಿಸಿ ಹೆಚ್ಚಿನ ಮಾಹಿತಿ ಪಡೆಯಬಹುದು. **ವಿಶೇಷ ಸೂಚನೆ:**– ಮುಂದೆ ಯಾವುದೇ ಸೂಚನೆ / ಬದಲಾವಣೆ / ತಿದ್ದುಪಡಿಗಳಿದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪ್ರಕಟಿಸಲಾಗುವುದು. ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/– ಹೆಚ್ಚುವರಿ ಆಯುಕ್ತರು
ಮೈಸೂರು ಮಹಾನಗರ ಪಾಲಿಕೆ, ಮೈಸೂರು

DIPR/MYS/KAVITA/148/23-24

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಮೈಸೂರು ವಿಭಾಗ, ಮೈಸೂರು

ಸಂ: ಕರಾಸಾ/ಮೈವಿ/ಸಂ/ವಾ/1348/2023–24 ದಿನಾಂಕ: 27.07.2023

ಇ–ಟೆಂಡರ್ ಪ್ರಕಟಣೆ ಸಂ: 02/2023–24
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಮೈಸೂರು ವಿಭಾಗದ ವ್ಯಾಪ್ತಿಯ ಕುವೆಂಪುನಗರ ಬಸ್ ನಿಲ್ದಾಣದ ವಾಣಿಜ್ಯ ಸ್ಥಳಗಳಿಗೆ "ಎಲ್ಲಿದೆಯೋ ಹಾಗೂ ಯಾವ ಸ್ಥಿತಿಯಲ್ಲಿವೆಯೋ ಹಾಗೆಯೇ" ಆಧಾರದ ಮೇಲೆ ಏಕೈಕ ಪರವಾನಗಿದಾರರನ್ನು ಹಾಗೂ ಮಹಡಿವಾರು ಪರವಾನಗಿದಾರರನ್ನು ಆಯ್ಕೆಗಾಗಿ ಅರ್ಹ ವ್ಯಕ್ತಿ/ಕಂಪನಿ/ಸಂಸ್ಥೆಗಳಿಂದ ಅರ್ಜಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಕರೆಯಲಾಗಿದೆ.

ವಿಷಯ ಇ–ಟೆಂಡರ್ ವಿವರಗಳು	ದಿನಾಂಕ	ಸಮಯ
ಟೆಂಡರ್ ಕುರಿತು ವಿಚಾರಣೆಗೆ ಕೊನೆಯ ದಿನಾಂಕ	16/08/2023	17:00 ಗಂಟೆ
ಬಿಡ್ ಸಲ್ಲಿಸುವ ಮುಂಚಿತವಾಗಿ ನಡೆಸುವ ಸಭೆಯ ದಿನಾಂಕ (ಏಕೈಕ ಪರವಾನಗಿದಾರರಾಗಿ ಭಾಗವಹಿಸಿದಲ್ಲಿ ಮಾತ್ರ)	16/08/2023	ಮಧ್ಯಾಹ್ನ 12:00 ಗಂಟೆ
ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ	18/08/2023	15:30 ಗಂಟೆ
ಇ.ಎಂ.ಡಿ & ಅರ್ಜಿ ಶುಲ್ಕಗಳ ಡಿ.ಡಿ. ಸಲ್ಲಿಸಲು ಕೊನೆಯ ದಿನಾಂಕ	18/08/2023	17:00 ಗಂಟೆ
ದಾಖಲಾತಿಗಳನ್ನು ತೆರೆಯುವ ದಿನಾಂಕ (ಏಕೈಕ ಪರವಾನಗಿದಾರರಾಗಿ ಭಾಗವಹಿಸಿದಲ್ಲಿ ಮಾತ್ರ)	21/08/2023	15:30 ಗಂಟೆ
ಆರ್ಥಿಕ ಪ್ರಸ್ತಾವನೆಯನ್ನು ತೆರೆಯುವ ದಿನಾಂಕ	23/08/2023	15:30 ಗಂಟೆ

ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ. ನಿಗಮ, ಮೈಸೂರು ವಿಭಾಗ (ಸಂಚಾರ ಶಾಖೆ), ಹನುಮಂತನಗರ ಮುಖ್ಯ ರಸ್ತೆ, ಬನ್ನಿಮಂಟಪ, ಮೈಸೂರು, (ದೂರವಾಣಿ ಸಂಖ್ಯೆ: 7760990802, 7760990811, 7019026615, 9343554555) ಇವರನ್ನು ಸಂಪರ್ಕಿಸಲು ಕೋರಲಾಗಿದೆ.

ಇ–ಪೋರ್ಟಲ್ ವಿಳಾಸ: ಇ–ಟೆಂಡರ್ ದಾಸ್ತಾವೇಜುಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ವೆಬ್‌ಸೈಟ್ https://kppp.karnataka.gov.in ಅಂತರ್ ಜಾಲದ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

ವಾ.ಸಾ.ಸಂ.ಇ/ವಾಪ್ರ/693/ಆಕಾರ್/2023–24

ಸಹಿ/– ವಿಭಾಗೀಯ ನಿಯಂತ್ರಣಾಧಿಕಾರಿ
ಮೈಸೂರು ವಿಭಾಗ, ಮೈಸೂರು

ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ

ಮೆಗಾ ಡೈರಿ ಸಂಕೀರ್ಣ, ಬನ್ನೂರು ರಸ್ತೆ, ಆಲನಹಳ್ಳಿ ಅಂಚೆ, ಮೈಸೂರು – 570028.
ದೂರವಾಣಿ ಸಂಖ್ಯೆ:0821–2474475, ಫ್ಯಾಕ್ಸ್ ನಂ.0821–2474476,
ಇ–ಮೇಲ್ : purmymul@gmail.com

ಟೆಂಡರ್ ಪ್ರಕಟಣೆ – (ಇ–ಟೆಂಡರ್ ಮುಖಾಂತರ ಮಾತ್ರ)

ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟಕ್ಕೆ ಅವಶ್ಯವಿರುವ ಈ ಕೆಳಕಂಡ ಸೇವೆ / ಸಾಮಾಗ್ರಿಗಳನ್ನು ಖರೀದಿಸಲು ಅರ್ಹ ಟೆಂಡರ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್ ಫಾರಂ ಅಡಿ **https://kppp.karnataka.gov.in** ಅಪ್‌ಲೋಡ್ ಮಾಡಬಹುದಾಗಿರುತ್ತದೆ.

ಕ್ರ.ಸಂ	ಟೆಂಡರ್ ಪ್ರಕಟಣೆ ಮತ್ತು ದಿನಾಂಕ	ಸೇವೆಯ ವಿವರ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ
01	KMF/2023-24/IND0192	ಒಕ್ಕೂಟಕ್ಕೆ ಅಗತ್ಯವಿರುವ ಡಫಲ್ ಬ್ಯಾಗ್ ಅನ್ನು ಖರೀದಿಸುವ ಬಗ್ಗೆ.	03.08.2023 ಸಂಜೆ 5:00 ಗಂಟೆಯವರೆಗೆ
02	KMF/2023-24/IND0194	ಗೋಡೆ ಜಾಹಿರಾತು, ವಾಹನ ಜಾಹಿರಾತು ಬರೆಯಲು ವಾರ್ಷಿಕ ದರ ಗುತ್ತಿಗೆ ಆಧಾರದಲ್ಲಿ ಮಾಡಿಸಲು ಹಾಗೂ ದಿನಸಿ ಸಾಮಗ್ರಿಗಳನ್ನು ಅರ್ಧ ವಾರ್ಷಿಕ ದರ ಗುತ್ತಿಗೆ ಆಧಾರದಲ್ಲಿ ಖರೀದಿಸುವ ಬಗ್ಗೆ.	

ಹೆಚ್ಚಿನ ಮಾಹಿತಿಗಾಗಿ ಖರೀದಿ ವಿಭಾಗದ ವ್ಯವಸ್ಥಾಪಕರನ್ನು (6366430803) ಸಂಪರ್ಕಿಸಬಹುದಾಗಿದೆ.

ಸಹಿ/–, ವ್ಯವಸ್ಥಾಪಕ ನಿರ್ದೇಶಕರು
ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ನಿ.,